Swabhimani Sahakari
Pages : 48 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 01
January - 2024

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## 2024

ಹೊಸ ಹರುಷ ತರಲಿ...
ಹಳೆಯದನ್ನು ಹಿಂದೆ ದೂಡಿ
ಹೊಸ ಹಾಡ ಕೇಳಿ...
ಹೊಸ ಭಾವ ತಾಳಿ
ಜನ ನಿಲಲಿ ಒಂದು ಗೂಡಿ
ಸೌಹಾರ್ದ ಬೆಳೆದು..
ಮನ ಮನವ ಬೆಸದು
ಸುಖ ಶಾಂತಿ ಪ್ರೀತಿ ಬೆಳಗಿ
ಸೌಭಾಗ್ಯ ಮಿಕ್ಕಿ...
ಸಂತೋಷ ಉಕ್ಕಿ
ಜಗದಗಲ ಹರಿಯುತಿರಲಿ
-ಪಳಕಳ ಸೀತಾರಾಮ ಭಟ್



ಜನವರಿ 22ರಂದು
ಅಯೋಧ್ಯೆಯಲ್ಲಿ
ಶ್ರೀರಾಮ ಮಂದಿರ
ಉದ್ಘಾಟನೆ
ನೆರವೇರಲಿದೆ





ಜನವರಿ 1
ಸೌಹಾರ್ದ
ಸಹಕಾರಿ ದಿನಾಚರಣೆ



ಜನವರಿ 12
ಸ್ವಾಮಿ ವಿವೇಕಾನಂದರ ಜಯಂತಿ
ರಾಷ್ಟ್ರೀಯ ಯುವ ದಿನ

ಜನವರಿ 15,
ಮಕರ ಸಂಕ್ರಾಂತಿ





ಜನವರಿ 26,
ಗಣರಾಜ್ಯೋತ್ಸವ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 6101

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1600

# ದೇಶಕ್ಕೆ ಮಾದರಿಯಾಗಿರುವ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ, ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ, ವ್ಯವಸ್ಥೆಯ ಭದ್ರತೆಗೆ ಸಹಕಾರ ಸಚಿವರು ಹಾಗೂ ಸರಕಾರಕ್ಕೆ ಮನವಿ.



**ಜಿ. ನಂಜನಗೌಡ**

> ಆತ್ಮೀಯ ಸಹಕಾರಿ ಬಂಧುಗಳಿಗೆ ಸೌಹಾರ್ದ ಸಹಕಾರ ದಿನ, ನೂತನ ವರ್ಷ 2024ರ ಹಾಗೂ ಮಕರ ಸಂಕ್ರಾಂತಿಯ ಹಾಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನೂತನ ವರ್ಷದಲ್ಲಿ ಎಲ್ಲಾ ಸಹಕಾರಿ ಬಂಧುಗಳಿಗೆ ದೇವರು ಸುಖ ಶಾಂತಿ ಹಾಗೂ ನೆಮ್ಮದಿಯ ಬದುಕನ್ನು ದಯಪಾಲಿಸಲಿ. ಮಕರ ಸಂಕ್ರಾಂತಿಯ ಪರ್ವ ಕಾಲದಲ್ಲಿ ಎಲ್ಲರಿಗೂ ಶುಭವನ್ನು ಹಾರೈಸುತ್ತೇನೆ. ದೇಶ ತನ್ನ ಸಂವಿಧಾನವನ್ನು ಅಂಗೀಕರಿಸಿ ಸ್ವೀಕಾರ ಮಾಡಿದ ಪ್ರಜಾ ಪ್ರಭುತ್ವದ ಆಡಳಿತವನ್ನು ಭದ್ರಬುನಾದಿ ಮಾಡಿದ ಶುಭ ದಿನವನ್ನು ಅತ್ಯಂತ ಗೌರವದಿಂದ ಜ್ಞಾಪಿಸಿಕೊಳ್ಳುತ್ತ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿಕೊಟ್ಟ ನಮ್ಮ ಹಿರಿಯ ಸ್ವಾತಂತ್ರ ಸೇನಾನಿಗಳನ್ನು ಹಾಗೂ ಸಂವಿಧಾನ ಶಿಲ್ಪಿಗಳನ್ನು ಜ್ಞಾಪಿಸುತ್ತ ಅವರಿಗೆ ನಮನಗಳನ್ನು ಹಾಗೂ ಗೌರವವನ್ನು ಸಲ್ಲಿಸೋಣ.

ಆತ್ಮೀಯ ಸಹಕಾರಿ ಬಂಧುಗಳಿಗೆ ಸೌಹಾರ್ದ ಸಹಕಾರಿ ದಿನ, ನೂತನ ವರ್ಷ 2024ರ ಹಾಗೂ ಮಕರ ಸಂಕ್ರಾಂತಿಯ ಹಾಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನೂತನ ವರ್ಷದಲ್ಲಿ ಎಲ್ಲ ಸಹಕಾರಿ ಬಂಧುಗಳಿಗೆ ದೇವರು ಸುಖ ಶಾಂತಿ ಹಾಗೂ ನೆಮ್ಮದಿಯ ಬದುಕನ್ನು ದಯಪಾಲಿಸಲಿ. ಮಕರ ಸಂಕ್ರಾಂತಿಯ ಪರ್ವ ಕಾಲದಲ್ಲಿ ಎಲ್ಲರಿಗೂ ಶುಭವನ್ನು ಹಾರೈಸುತ್ತೇನೆ. ದೇಶ ತನ್ನ ಸಂವಿಧಾನವನ್ನು ಅಂಗೀಕರಿಸಿ ಸ್ವೀಕಾರ ಮಾಡಿದ ಪ್ರಜಾ ಪ್ರಭುತ್ವದ ಆಡಳಿತವನ್ನು ಭದ್ರಬುನಾದಿ ಮಾಡಿದ ಶುಭ ದಿನವನ್ನು ಅತ್ಯಂತ ಗೌರವದಿಂದ ಜ್ಞಾಪಿಸಿಕೊಳ್ಳುತ್ತ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿಕೊಟ್ಟ ನಮ್ಮ ಹಿರಿಯ ಸ್ವಾತಂತ್ರ ಸೇನಾನಿಗಳನ್ನು ಹಾಗೂ ಸಂವಿಧಾನ ಶಿಲ್ಪಿಗಳನ್ನು ಜ್ಞಾಪಿಸುತ್ತ ಅವರಿಗೆ ನಮನಗಳನ್ನು ಹಾಗೂ ಗೌರವವನ್ನು ಸಲ್ಲಿಸೋಣ.

**ಆತ್ಮೀಯರೆ,**

ಪ್ರಸಕ್ತ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿ ರಚನೆ ಹಾಗೂ ಚಟುವಟಿಕೆಗಳು ದೇಶದಲ್ಲಿಯೆ ಒಂದು ಮಾದರಿ ವ್ಯವಸ್ಥೆಯಾಗಿ ಹೊರಹೊಮ್ಮಿರುವುದು ತಮಗೆಲ್ಲ ತಿಳಿದಿದೆ. ಈ ಮಾದರಿಯನ್ನು ಜಾರಿಗೆ ತಂದಿರುವ ಕರ್ನಾಟಕ ರಾಜ್ಯ ಸರಕಾರದ ಅಂದಿನ ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪುಟದ ಎಲ್ಲಾ ಸದಸ್ಯರು ಹಾಗೂ ಸಹಕಾರ ಸಚಿವರುಗಳಿಗೆ ಅಭಿನಂದನೆಗಳು. ನಂತರದಲ್ಲಿ ಅಧಿಕಾರದಲ್ಲಿದ್ದ ಎಲ್ಲಾ ಸರಕಾರಗಳು ಈ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತ ಬಂದಿವೆ. ಪರಿಣಾಮವಾಗಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ವೇಗವಾಗಿ ಬೆಳೆದಿದೆ. ರಾಜ್ಯದಲ್ಲಿ 6082 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಕಾರ್ಯನಿರ್ವಹಿಸುತಿವೆ. ಅದರಲ್ಲಿ 5000 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತ 70,000 ಕ್ಕೂ ಹೆಚ್ಚು ಯುವಕ ಯುವತಿಯರಿಗೆ ಉದ್ಯೋಗವನ್ನು ನೀಡಿವೆ. 66 ಲಕ್ಷ ಸದಸ್ಯರು, 38,004 ಠೇವಣಿ, 42,954 ದುಡಿಯುವ ಬಂಡವಾಳ, 3,208 ನಿಧಿಗಳು, 29,591 ಸಾಲ ವಿತರಣೆ, ಶೇಕಡಾ 90% ಸಾಲ ವಸೂಲಾತಿಗಳಿದ್ದು ವಿಶೇಷತೆ ಹಾಗೂ ವೈಶಿಷ್ಟತೆಗಳಿಂದ ಕೂಡಿದ ಕ್ಷೇತ್ರ ಇದಾಗಿದೆ. ವಿಶೇಷವಾಗಿ ಯುವಕರು ಈ ಕ್ಷೇತ್ರಕ್ಕೆ ಹೆಚ್ಚಾಗಿ ಆಕರ್ಷಿತರಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದು ವಿಶೇಷ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ಅಧ್ಯಯನ ಯೋಗ್ಯವಾಗಿ ಬೆಳೆದಿದೆ. ಅನೇಕರು ಈ ಕ್ಷೇತ್ರದ ಬಗ್ಗೆ ಪಿ.ಹೆಚ್.ಡಿ ಮಾಡಿದ್ದಾರೆ. ಮೈಸೂರು ಹಾಗೂ ಚಾಣಕ್ಯ ವಿಶ್ವ ವಿದ್ಯಾಲಯದವರು ಈ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ ವ್ಯವಸ್ಥೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ವರದಿ ನೀಡಿದ್ದಾರೆ. ರಾಷ್ಟ್ರ ಹಾಗೂ ಅಂತರರಾಷ್ಟ್ರದ ಮಟ್ಟದ ಸಭೆ ಸಮಾರಂಭಗಳಲ್ಲಿ ಸೆಮಿನಾರ್‌ಗಳಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಯ ಬಗ್ಗೆ ಪ್ರಶಂಸೆ ವ್ಯಕ್ತವಾಗಿದೆ. ಈ ವ್ಯವಸ್ಥೆಯನ್ನು ಸಹಕಾರಿಗಳು ಸ್ವಾಗತಿಸುತ್ತಿದ್ದಾರೆ. ಇದು ಕರ್ನಾಟಕದ ಹೆಮ್ಮೆ. ಕೆಲವೇ ಕೆಲವು ಸಹಕಾರ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿ ಮಾಡಿರುವ ಅವ್ಯವಹಾರ ಮೋಸ ವಂಚನೆ ಇತ್ಯಾದಿಗಳ ಹಿನ್ನೆಲೆಯಲ್ಲಿ ತಪ್ಪಿತಸ್ಥರ ವಿರುದ್ಧ ಅಗತ್ಯ ಕಾನೂನು ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ಕ್ರಮವಿಡುತ್ತಿದೆ. ಆದ್ದರಿಂದ ರಾಜ್ಯ ಸರಕಾರ ಮಾನ್ಯ ಮುಖ್ಯ ಮಂತ್ರಿಗಳು, ಸಹಕಾರ ಸಚಿವರು, ಸಚಿವ ಸಂಪುಟದ ಸದಸ್ಯರು ಮತ್ತು ಎಲ್ಲ ಜನಪ್ರತಿಧಿಗಳು ಈ ವ್ಯವಸ್ಥೆಯ ಪರವಾಗಿ ಈ ವ್ಯವಸ್ಥೆಯನ್ನು ಭದ್ರ ಮಾಡುವ ನಿಟ್ಟಿನಲ್ಲಿ ಕ್ರಮವಿಡುವವಂತೆ ಸಹಕರಿಸಬೇಕೆಂದು ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ...................................... 05–26
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ...................................... 27–39
ಲೇಖನಗಳು :
ಸಹಕಾರ ಸಂಘದ/ಸೌಹಾರ್ದ ಸಹಕಾರಿಯ ಸದಸ್ಯ ಮಂಡಳಿ ಚುನಾವಣೆ ಅಕ್ರಮ ಉಲ್ಲೇಖಿಸಿ – ಆಯ್ಕೆಯಾದ ಮಂಡಳಿ ರಚನೆ ಪ್ರಶ್ನಿಸಬಹುದೇ? ........................... 40–42
ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು .............................. 43–44
ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ .. ...................................... 45–47

# ಸಂಪಾದಕೀಯ

## ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಗಳು ಮತ್ತು ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ನಮೂನೆ ಕಾರ್ಯಗಾರ ಸಮಯೋಚಿತ. ಎಲ್ಲ ಸಹಕಾರಿಗಳಿಗೆ ನೂತನ ವರ್ಷ 2024 ರ ಶುಭಾಶಯಗಳು.

ರಾಜ್ಯದ ಎಲ್ಲಾ ಸಹಕಾರಿ ಸಂಘಗಳಿಗೆ ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನೆಯ ಕ್ರಮ ವಿಡುವುದು. ಈ ಜವಾಬ್ದಾರಿಯ ಹಿನ್ನೆಲೆಯಲ್ಲಿ ಲೆಕ್ಕ ಪರಿಶೋಧನಾ ಇಲಾಖೆಯವರು ಸಹಕಾರಿ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆಯಾದ ನಂತರ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುವ ಸಲಹೆ ಹಾಗೂ ನ್ಯೂನತೆಗಳನ್ನು ಸರಿಪಡಿಸಿಕೊಂಡು ಇಲಾಖೆಗೆ ಅನುಪಾಲನಾ ವರದಿಯು ಸಲ್ಲಿಸುವಂತೆ ಸೂಚಿಸುವುದು.

ಲೆಕ್ಕ ಪರಿಶೋಧಕರು ಸಲ್ಲಿಸುತ್ತಿರುವ ವರದಿಗಳನ್ನು ಪರಿಶೀಲಿಸಿದ ಇಲಾಖೆಯವರು ಲೆಕ್ಕ ಪರಿಶೋಧನಾ ವರದಿಗಳು ಇನ್ನೂ ಹೆಚ್ಚು ವಿವರಣಾತ್ಮಕವಾಗಿರಬೇಕು. ಸಹಕಾರಿ ಸಂಘದ ಸಮಸ್ತ ವ್ಯವಹಾರಗಳ ಬಗ್ಗೆ ವಿಮರ್ಶೆ ಇರಬೇಕು ಎನ್ನುವ ಅಭಿಪ್ರಾಯ ಹೊಂದಿ ಲೆಕ್ಕ ಪರಿಶೋಧಕರು ಸಲ್ಲಿಸುವ ವರದಿಗಳ ಮಾದರಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದನ್ನು ಈಗಾಗಲೇ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಸಂಯುಕ್ತ ಸಹಕಾರಿಯು ಡಿಸೆಂಬರ್ 2023 ಮಾಹೆಯಲ್ಲಿ ನಡೆಸಿದ 34 ವಾರ್ಷಿಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾವಿಸಲು ಸಾಧ್ಯವಾಗುವಂತೆ ಅದರ ಬಗ್ಗೆ ತರಬೇತಿ ನೀಡುವ ಕಾರ್ಯಗಾರವು ಸಮಯೋಚಿತ ಹಾಗೂ ಅಗತ್ಯವಾಗಿತ್ತು.

ಬದಲಾವಣೆಯಾಗಿರುವ ಲೆಕ್ಕ ಪರಿಶೋಧನಾ ವರದಿಯ ಮಾದರಿಯಂತೆ ಬಹು ಮುಖ್ಯವಾಗಿ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ, ಸದಸ್ಯರ ಹಾಗೂ ಗ್ರಾಹಕರ ಕೆ.ವೈ.ಸಿ ಪಡೆದಿರುವ ಬಗ್ಗೆ, ದ್ರವ್ಯಾಸ್ತಿ ನಿರ್ವಹಣೆ ಮಾನದಂಡಗಳ ಪರಿಶೀಲನೆ, ಸದಸ್ಯರ ಕನಿಷ್ಠ ವ್ಯವಹಾರ ನಿರ್ವಹಣೆ, ಗುರುತಿನ ಚೀಟಿಗಳ ವಿತರಣೆ, ನಗದು ಪರಿಶೀಲನೆ, ಸಾಲದ ಅರ್ಜಿಗಳ ಹಾಗೂ ಭದ್ರತೆಗಳ ಪರಿಶೀಲನೆ, ಕಾಸ್ಟ ಆಫ್ ಮೆನೆಜಮೆಂಟ್, ಕಾಸ್ಟ ಆಫ್ ಫಂಡ್ಸ್ ಕಾರ್ಯಕ್ಷೇತ್ರ ಮೀರಿ ಇರುವ ಸದಸ್ಯರ ಪರಿಶೀಲನೆ, ಚಿನ್ನಾಭರಣ ಸಾಲಗಳ ವಿಮೆ, ಸಾಲದ ಅರ್ಜಿಗಳ ಸಾಲ ಮಂಜೂರಾತಿ ಹಾಗೂ ಸಾಲ ಬಿಡುಗಡೆ ಮಾಡಿರುವ ವಿಧಾನಗಳು, ಸ್ಥಿರಾಸ್ತಿಗಳ ಪರಿಶೀಲನೆ, ಇತರೆ ಜವಾಬ್ದಾರಿಗಳ ಪರಿಶೀಲನೆ, ಪರಿವೀಕ್ಷಣೆ, ವಿಚಾರಣೆ, ವಾಹನಗಳ ನಿರ್ವಹಣೆ, ಸಿಬ್ಬಂದಿ ನೇಮಕಾತಿ, ಹೂಡಿಕೆಗಳ ವಿವರಗಳ ಪರಿಶೀಲನೆ, ವಾರ್ಷಿಕ ಮಹಾ ಸಭೆ ವಿವರಗಳು, ವಿಶೇಷ ಮಹಾಸಭೆ ವಿವರ ಗಣಕೀಕರಣ, ಅನುಪಾಲನಾ ವರದಿ ಸಲ್ಲಿಸಿರುವುದು, ಶೆಡ್ಯೂಲ್‌ಗಳ ಪರಿಶೀಲನೆ ಇತ್ಯಾದಿ ವಿವರಗಳ ಬಗ್ಗೆ ಲೆಕ್ಕ ಪರಿಶೋಧಕರು ಪರಿಶೀಲನೆ ಹಾಗು ವಿಮರ್ಶೆಯನ್ನು ಮಾಡುವುದು ಅಗತ್ಯ ಎಂದು ಲೆಕ್ಕ ಪರಿಶೋಧನಾ ಇಲಾಖೆಯ ಪತ್ರದಲ್ಲಿ ತಿಳಿಸಲಾಗಿದೆ.

ಸಹಕಾರಿ ಲೆಕ್ಕ ಪರಿಶೋಧನೆ ಇಲಾಖೆಯ ಈ ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ಮಾದರಿ ನಮೂನೆಯನ್ನು ಎಲ್ಲಾ ಸಹಕಾರಿ ಸಂಸ್ಥೆಗಳು ಅಳವಡಿಸಿಕೊಳ್ಳಬೇಕು ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಈ ಬಗ್ಗೆ ಅವರಿಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು. ಮತ್ತು ಲೆಕ್ಕ ಪರಿಶೋಧನೆ ಪ್ರಾರಂಭವಾಗುವ ಮುನ್ನ ಸಂಪೂರ್ಣ ಸಿದ್ದತೆಯನ್ನು ಮಾಡಿಕೊಂಡು ಲೆಕ್ಕ ಪರಿಶೋಧಕರಿಗೆ ಅಗತ್ಯ ಮಾಹಿತಿ ನೀಡಿ ಲೆಕ್ಕ ಪರಿಶೋಧನೆ ನಿಗದಿತ ಸಮಯದಲ್ಲಿ ಆಗುವಂತೆ ಮಾಡುವ ಜವಾಬ್ದಾರಿ ಸಂಬಂಧಿಸಿದ ಅಧಿಕಾರಿಗಳದ್ದಾಗಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ರೂಪ – ಸ್ವರೂಪ"

ಹೊಟ್ಟೆಯ ಹಸಿವು ಹಿಂಗಿದಾಗ ಮನುಷ್ಯ ತೃಪ್ತನಾಗುತ್ತಾನೆ. ಜ್ಞಾನದ ಹಸಿವು ಹಿಂಗಿದಾಗ ಸಮಾಧಾನಿ ಆಗುತ್ತಾನೆ. ನಾವು ಬದುಕುವ ಜಗತ್ತಿನ ಸಾಮಾನ್ಯ ಸ್ವರೂಪವನ್ನು ತಿಳಿದಿರಬೇಕು. ಇಲ್ಲಿಯವರೆಗೆ ಶಿಷ್ಯ ನಾಲ್ಕು ಪ್ರಶ್ನೆಗಳನ್ನು ಕೇಳಿದ, ಅವುಗಳಿಗೆ ಪಡೆದ ಉತ್ತರಗಳು ಇಂತಿವೆ :

**ಪ್ರಶ್ನೆ – 1 : ಯಾವುದು ಸತ್ಯ ?**

ಉತ್ತರ : ಯಾವುದು ಸದಾ ಇರುತ್ತದೆಯೋ ಅದು ಸತ್ಯ. ಅದನ್ನು ಋಷಿಗಳು ಬ್ರಹ್ಮವೆಂದೂ, ದಾರ್ಶನಿಕರು ತತ್ವ ಎಂದೂ ವಿಜ್ಞಾನಿಗಳು ಪರಮಮೂಲ ಎಂದೂ ಕರೆದರು. ಈ ಜಗತ್ತಿನಲ್ಲಿ ಕಾಣದ ಒಂದು ಶಕ್ತಿ ಇದೆ. ಆ ಪರಮ ಮೂಲವಸ್ತುವೇ 'ಪರಬ್ರಹ್ಮ'

**ಪ್ರಶ್ನೆ – 2 : ಈ ಜಗತ್ತು ಹೇಗಿದೆ ?**

ಉತ್ತರ : (ಅ) ನೀನು ಹೇಗೆ ನೋಡುತ್ತಿಯೋ ಹಾಗೆಯೇ ಇದೆ. ಎಲ್ಲರಿಗೂ ಜಗತ್ತು ಒಂದೇ ರೀತಿ ಕಾಣುವುದಿಲ್ಲ. ಏಕೆಂದರೆ ನೋಡುವ ದೃಷ್ಟಿಕೋನ ಬದಲಾಗುತ್ತದೆ. ಎಲ್ಲರ ವಿಚಾರಗಳೂ ಒಂದೇ ಅಗಲಿಕ್ಕೆ ಎಂದಿಗೂ ಸಾಧ್ಯವಿಲ್ಲ.

(ಬ) ಜಗತ್ತು ಬದಲಾಗುತ್ತಾ ಹೋಗುತ್ತದೆ. ಜಗತ್ತಿನಲ್ಲಿ ಎಲ್ಲವೂ ಶಾಶ್ವತ ಎಂದು ಭಾವಿಸಬಾರದು. ಜಗತ್ತಿನ ಹೊಯ್ದಾಟದಂತೆ ಜೀವನ ಹೊಯ್ದಾಟವೂ ಇರುತ್ತದೆ. ಜೀವನ ಸ್ಥಿರವಲ್ಲ ಎಂದು ತಿಳಿದ ಮನುಷ್ಯ ಶಾಂತನಾಗುತ್ತಾನೆ.

**ಪ್ರಶ್ನೆ – 3 : ಈ ಜಗತ್ತು ಏನು ಇದರ ರಚನೆಯ ಹಿಂದೆ ಏನಿದೆ ?**

ಉತ್ತರ : ಇದರ ಹಿಂದೆ ಒಂದು ಅದ್ಭುತ ಶಕ್ತಿಯಿದೆ. ಅದು ಭೂಮಿಯಲ್ಲಿ ಬಿದ್ದ ಬೀಜವನ್ನು ದೊಡ್ಡ ಮರವನ್ನಾಗಿ; ಮಗುವನ್ನು ದೊಡ್ಡ ಮನುಷ್ಯನನ್ನಾಗಿ ಮಾಡುತ್ತದೆ. ಆ ಶಕ್ತಿ ಇರುವುದರಿಂದಲೇ ಎಲ್ಲವೂ ನಡೆಯುತ್ತಿದೆ. ಮೈಕಲ್ ಎಂಜಿಲೋ ಹೇಳುತ್ತಾರೆ. "ನಾನು ಒಂದು ಶಿಲೆಯನ್ನು ಕೆತ್ತಿದರೆ ಅದು ಮೊದಲು ಎಷ್ಟು ಇತ್ತೋ ಅಷ್ಟೇ ಇರುತ್ತದೆ. ಆದರೆ ದೇವರು ಕೆತ್ತಿದರೆ ಒಂದು ಅಣುವಿನಿಂದ ಆರು ಅಡಿಗಳವರೆಗೆ ಬೆಳೆಯುತ್ತದೆ". ಹೀಗೆ ಈ ವೈವಿಧ್ಯಮಯ ಜಗತ್ತನ್ನು ರೂಪಿಸಿದವ ದೇವರು. ಅದೊಂದು ಅಪ್ರತಿಮ ಶಕ್ತಿ.

**ಪ್ರಶ್ನೆ – 4 : ನನ್ನ ಸ್ವರೂಪ ಏನು ?**

ಉತ್ತರ : ಇದೊಂದು ಅದ್ಬುತ ಪ್ರಶ್ನೆ, ಏಕೆಂದರೆ ನಮ್ಮ ಬಗ್ಗೆ ನಮಗೇ ಗೊತ್ತಿರುವುದಿಲ್ಲ. ಯಾರು ನಮ್ಮ ಬಗ್ಗೆ ಏನನ್ನುತ್ತಾರೋ ಅದೇ ನಾವೆಂದು ಭಾವಿಸುತ್ತೇವೆ. ಈಗ ಮೂರು ಸಂಖ್ಯೆಗಳಿವೆ ಎಂದು ಭಾವಿಸುವ – 10, 9 ಹಾಗೂ 11 ಎಲ್ಲಿ ಹತ್ತು ಒಂಭತ್ತಕ್ಕಿಂತ ದೊಡ್ಡದು ಆದರೆ ಹತ್ತು ಹನ್ನೊಂದಕ್ಕಿಂತ ಚಿಕ್ಕದು. ಒಂಭತ್ತು ಹಾಗೂ ಹನ್ನೊಂದುಗಳೆರಡೂ ಇಲ್ಲದಿದ್ದಾಗ ಹತ್ತು ಹತ್ತೇ. ಆಗ ಹತ್ತು ಸಣ್ಣದೂ ಅಲ್ಲ. ದೊಡ್ಡದು ಅಲ್ಲ. ಅಂದರೆ ಸಂಬಂಧಗಳೊಂದಿಗೆ ಹೋಲಿಸಿ ನಾವು ನಮ್ಮ ಗುರುತು ಹೇಳುತ್ತೇವೆ. ಆದರೆ ಸಂಬಂಧಗಳೇ ಇಲ್ಲವಾದಾಗ ಉಳಿಯುವ ನಾನಾರು? ಸತ್ಯ ಯಾವಾಗಲೂ ಎದ್ದು ಕಾಣುವುದಿಲ್ಲ. ಅದು ಮರೆಯಲಿರುತ್ತದೆ. ಅದು ಒಳಗಡೆ ಕಾಣದಂತೆ ಮುಚ್ಚಿದೆ. ಅದು ಇದೆ ಆದರೆ ಗೊತ್ತಾಗುವುದಿಲ್ಲ. ಹೇಗೆ ಕಲ್ಲಲ್ಲಿ ಬಂಗಾರ, ಹಾಲಲ್ಲಿ ತುಪ್ಪ ಕಾಣುವುದಿಲ್ಲವೋ ಹಾಗೆಯೇ ನಮ್ಮಲ್ಲಿರುವುದು ನಮಗೆ ಕಾಣುವುದಿಲ್ಲ. ಅದನ್ನು ತೋರಿಸಲು ಒಬ್ಬ ಬೇಕೇ ಬೇಕೇ. ಆಂಗ್ಲ ಭಾಷೆಯಲ್ಲಿ ಒಂದು ಹೇಳಿಕೆಯಿದೆ – "He is the wise who recognises a butterfly in a caterpillar, an eagle in an egg, a saint in a selfish human being" ಅಂದರೆ "ಒಂದು ಕೀಟದಲ್ಲಿ ಚಿಟ್ಟೆಯನ್ನೂ, ಒಂದು ತತ್ತಿಯಲ್ಲಿ ಗರುಡವನ್ನೂ, ಒಬ್ಬ ಸ್ವಾರ್ಥಿಯಲ್ಲಿ ಸಂತನನ್ನೂ ಗುರುತಿಸುವವನೇ ಜಾಣ".

ಒಂದು ಊರು, ಅಲ್ಲೊಂದು ಮನೆಯಿತ್ತು. ಅಲ್ಲಿ ಒಬ್ಬ ತಾಯಿ ಮಗ ಇದ್ದರು. ತಂದೆ ತೀರಿಹೋಗಿದ್ದ, ಮಗನಿಗೆ ಆರೇಳು ವರ್ಷ ವಯಸ್ಸು. ತಾಯಿ ಮಗುವನ್ನು ಜೋಪಾನದಿಂದ ಬೆಳೆಸುತ್ತಿದ್ದಳು. ಒಂದು ದಿನ ಆಕೆಗೆ ಜ್ವರ ಬಂದು ಅವಳ ಸ್ಥಿತಿ ಗಂಭೀರವಾಯಿತು. ಮನೆಯಲ್ಲಿ ಬೇರೆ ಯಾರು ಇರಲಿಲ್ಲ. ತಾಯಿ ಮಗನನ್ನು ಬಳಿಗೆ ಕರೆದಳು. ಒಂದು ಚಿಕ್ಕ ಪೆಟ್ಟಿಗೆ ತೆರೆದು. ಅದರಲ್ಲಿರುವ ಒಂದು ತಾಯಿತವನ್ನು ಮಗನ ಕೊರಳಲ್ಲಿ ಕಟ್ಟಿದಳು. "ನೀನು ಇದನ್ನು ಕಟ್ಟಿಕೊಂಡಿದ್ದರೆ ಶ್ರೀಮಂತನಾಗುತ್ತಿಯಾ. ಇದರಲ್ಲಿ ಎಲ್ಲ ಸಂಪತ್ತು ಇದೆ" ಎಂದು ಹೇಳಿ ಕಣ್ಣು ಮುಚ್ಚಿದಳು. ಮಗು ಎಲ್ಲವನ್ನು ಕಳೆದುಕೊಂಡಿತ್ತು. ಅನಾಥವಾಗಿ ಭಿಕ್ಷೆ ಬೇಡಲಾರಂಭಿಸಿದ. ಎಪ್ಪತ್ತು ವರ್ಷಗಳ ಕಾಲ ಭಿಕ್ಷೆ ಬೇಡಿದ. ತಾಯಿತದಲ್ಲಿರುವ ಶಕ್ತಿ ಅವನಿಗೆ ಗೊತ್ತಿರಲಿಲ್ಲ. ಒಂದು ದಿನ ಅವನು ಗುಡಿಸಲಲ್ಲಿ ಕುಳಿತಿದ್ದಾಗ ಅಲ್ಲಿ ಒಬ್ಬ ಸಂತ ಬಂದ. ಆಗ ಭಿಕ್ಷುಕ ಸಂತನಿಗೆ ತನ್ನ ಕತೆ ಹೇಳಿದ, ತಾಯಿ ಕಟ್ಟಿದ ತಾಯಿತದ ಬಗ್ಗೆ ಹೇಳಿದ. ಆಗ ಸಂತ ಆ ತಾಯಿತವನ್ನು ಪಡೆದುಕೊಂಡು ಅದನ್ನು ಬಿಚ್ಚಿ ಅದರಲ್ಲಿ ಸಂಪತ್ತಿರುವ ಸ್ಥಳದ ನಕ್ಷೆ ಇತ್ತು. ಸಂತ ಹೇಳಿದ "ನೀನು ಕೋಟ್ಯಾಧೀಶ, ಆದರೆ ಗೊತ್ತಿಲ್ಲದ್ದಕ್ಕಾಗಿ ಭಿಕ್ಷುಕನಾಗಿ ಬಾಳೀದೆಯಲ್ಲ!" ಎಂದ ಆ ನಕ್ಷೆಯನ್ನು ಹಿಡಿದು ಸಂಪತ್ತು ಹುಡುಕಿದಾಗ ಹೇರಳ ಸಂಪತ್ತು ಸಿಕ್ಕಿತು. ಆದರೆ ಅಷ್ಟರಲ್ಲಿಯೇ ಆ ಮುದಿ ಭಿಕ್ಷುಕನ ಪ್ರಾಣಪಕ್ಷಿ ಹೊರಟುಹೋಗಿತ್ತು.

ಇದೇ ರೀತಿ ನಿಸರ್ಗ ದೇವತೆ ಎಲ್ಲರಿಗೂ ಸಾಂಧರ್ಭಿಕ ದಿವ್ಯ, ಜ್ಞಾನ ಸಿರಿಯ ತಾಯಿತವನ್ನು ಕಟ್ಟಿದ್ದಾಳೆ, ಅದನ್ನು ಬಿಚ್ಚಿ ನಮ್ಮೊಳಗೆ ಇರುವುದನ್ನು ತೋರಿಸುವ ಒಬ್ಬ ಜ್ಞಾನಿ ನಮಗೆ ಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 32,267 ಆಗಿರುತ್ತದೆ. ಇವುಗಳ ಪೈಕಿ 22949 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,318

**ಡಿಸೆಂಬರ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 591 ಇತ್ಯರ್ಥಗೊಂಡ ಪ್ರಕರಣಗಳು 471

**ಅಮಲ್ಜಾರಿ ಪ್ರಕರಣಗಳು :** ಒಟ್ಟು 8059 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,569 ಪ್ರಕರಣಗಳು ಇತ್ಯರ್ಥಗೊಂಡಿದ್ದು. 6,490 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಒಟ್ಟು 189 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ

## ಸಹಕಾರ ಕ್ಷೇತ್ರದಲ್ಲಿ ಸಮಾಜದ ಸಾಮಾನ್ಯ ವ್ಯಕ್ತಿಗಳಿಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಹೊಂದಲು ಅವಕಾಶವಿದೆ – ಶ್ರೀ ಜಿ. ನಂಜನಗೌಡ



**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ದಕ್ಷಿಣಕನ್ನಡ ಜಿಲ್ಲೆಯ ಒಡಿಯೂರು ಸಂಸ್ಥಾನದ ಆಶ್ರಯದಲ್ಲಿ ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಸಹಯೋಗದೊಂದಿಗೆ ದಿನಾಂಕ 07.12.2023 ರಿಂದ 16.12.2023 ನಡೆಸಲಾಗಿದೆ.

ಸಹಕಾರ ಕ್ಷೇತ್ರದಲ್ಲಿ ಸಮಾಜದ ಸಾಮಾನ್ಯ ವ್ಯಕ್ತಿಗಳಿಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಹೊಂದಲು ಅವಕಾಶವಿದೆ. ಈ ಕ್ಷೇತ್ರದ ಸಾಧನೆಯನ್ನು, ಕಾರ್ಯಕ್ರಮಗಳನ್ನು ಅವರ ಬಳಿ ತಲುಪಿಸುವ ಕಾರ್ಯ ಸಹಕಾರಿಗಳಿಂದ, ಕಾರ್ಯಕರ್ತರುಗಳಿಂದ, ಅಧಿಕಾರಿಗಳಿಂದ ಪರಿಣಾಮಕಾರಿಯಾಗಿ ಆಗಬೇಕಿದೆ. ಅದಕ್ಕಾಗಿ ಅವರುಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪರಿಣಿತಿಯನ್ನು ಪಡೆಯುವುದು ಅವಶ್ಯಕ. ಅದಕ್ಕಾಗಿ ಇಂತಹ ತರಬೇತಿಗಳು ಪೂರಕ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಉದ್ಘಾಟನಾ ಕಾರ್ಯಕ್ರಮದಲ್ಲಿ ತಿಳಿಸಿದರು.

ಈ 10 ದಿನಗಳ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 07.12.2023 ರಂದು ಒಡೆಯೂರು ಸಂಸ್ಥಾನದ ಶ್ರೀ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರ ಹಾಗು ಸಾಧ್ವಿ ಮಾತಾನಂದಮಹಿ ಮಾತೆಯವರ ದಿವ್ಯ ಸಾನಿಧ್ಯದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ರವರು, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್,ಕೆ, ಒಡೆಯೂರು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರೈ, ಇಲಾಖಾ ನಿವೃತ್ತ ಅಪರ ನಿಭಂದಕರಾದ ಶ್ರೀ ಎಚ್.ಎಸ್ ನಾಗರಾಜಯ್ಯ ಹಾಗು ಒಡೆಯೂರು ಸೌಹಾರ್ದ ಸಹಕಾರಿ ಸಂಘ ನಿ ಇದರ ನಿರ್ದೇಶಕರೊಂದಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರುಗಳ ಉಪಸ್ಥಿತಿಯಲ್ಲಿ ನೇರವೇರಿಸಲಾಯಿತು.

### ಈ ಕಾರ್ಯಕ್ರಮದ ವಿಶೇಷತೆಗಳೆಂದರೆ,



ಕಾರ್ಯಕ್ರಮ ಬೆಳಗ್ಗೆ 6.00 ರಿಂದ ಯೋಗ ತರಬೇತಿಯೊಂದಿಗೆ ಪ್ರಾರಂಭವಾಗುತ್ತದೆ, ಯೋಗ ಶಿಬಿರದ ನಂತರ ಪ್ರಾತಃರ್ವಿಧಿಗಳನ್ನು ಮುಗಿಸಿಕೊಂಡು 8.30ಕ್ಕೆ ಉಪಹಾರ ಸ್ವೀಕರಿಸುತ್ತಾರೆ, 9.15ಕ್ಕೆ ತರಬೇತಿ ಸಭಾಂಗಣಕ್ಕೆ ಬರುತ್ತಾರೆ, ತರಬೇತಿ ಸಭಾಂಗಣದಲ್ಲಿ ಮೊದಲಿಗೆ ಪ್ರಾರ್ಥನೆ, ಸಹಕಾರ ಗೀತೆ, ಅತಿಥಿಗಣ್ಯರ ಸ್ವಾಗತ, ಸುವಿಚಾರ, ಮಿಲಿ ಹಾಗು ಇನ್–ಸ್ಟಾಂಟ್ ಮಿಲಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ನಂತರ 9.30 ರಿಂದ ಸಂಜೆ 5.30ವರೆಗೆ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಯುತ್ತವೆ. ಸಂಜೆ 5.30 ರಿಂದ 8ರ ವರೆಗೆ ಅನೌಪಚಾರಿಕ ಸಭೆಗಳನ್ನು ನಡೆಸಿ ಅವರವರ ಸಹಕಾರಿ ಪರಿಚಯ, ಆಟ ಜೊತೆಗೆ ಪಾಠ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ. ಪ್ರತಿಯೊಬ್ಬರು ಒಂದಿಲ್ಲೊಂದು ಜವಬ್ದಾರಿ ನಿರ್ವಹಿಸುವ ಕಾರಣದಿಂದ ವೇದಿಕೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ. ಪ್ರತಿ ಶಿಬಿರದಲ್ಲಿ 4 ಪ್ರಯೋಗಿಕಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆಡಳಿತ ಮಂಡಳಿ ಸಭೆ ನಡೆಸುವುದು, ವೈಯಕ್ತಿಕವಾಗಿ ಎಲ್ಲರು ವಾರ್ಷಿಕ ಸಭೆಯ ನೋಟಿಸ್ ಸಿದ್ದಪಡಿಸುವುದು, swot analysis (ಶಕ್ತಿ, ದೌರ್ಭಲ್ಯ, ಅವಕಾಶಗಳು, ಸವಾಲುಗಳು) ಇವುಗಳನ್ನು ಅವರಿಂದಲೆ ಮಾಡಿಸಲಾಗಿರುತ್ತದೆ. ಲೆಕ್ಕಪತ್ರಗಳ ಸಿದ್ದತೆ ಹಾಗು ತಯಾರಿಸುವಿಕೆ ಹಾಗು ನಾಲ್ಕನೆಯದಾಗಿ ಅವರವರ ಸಹಕಾರಿಯ ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸುವುದು.

### ಅಧ್ಯಯನ ಪ್ರವಾಸ

ಈ ಶಿಬಿರದ ಅಂಗವಾಗಿ ಒಂದು ದಿನಗಳ ಅಧ್ಯಾಯನ ಪ್ರವಾಸವನ್ನು ವಿವಿಧ ಸಹಕಾರಿ ಸಂಘಗಳಿಗೆ ಭೇಟಿ ನೀಡಲಾಗಿದೆ. ಈ ಬಾರಿ ಒಡಿಯೂರು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ, ದಕ್ಷಿಣ ಕನ್ನಡ. ಶ್ರೀ ಸರಸ್ವತಿ ಸೌಹಾರ್ದ ಸಹಕಾರಿ ನಿ, ಪುತ್ತೂರು, ಕ್ಯಾಂಪ್ಕೋ ಚಾಕುಲೇಟ್ ತಯಾರಿಕಾ ಘಟಕ, ಪುತ್ತೂರು, ಜೇನು ವ್ಯವಸಾಯ ಸಾಕಾಣಿಕ ಸಹಕಾರ ಸಂಘ, ಪುತ್ತೂರು, ಇಡ್ಕಿದು ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಪಾಟರ್ಸ್

ಸಹಕಾರ ಸಂಘಗಳಿಗೆ ಭೇಟಿ ನೀಡಿ ಅಧ್ಯಾಯನ ಮಾಡಲಾಗಿದೆ.

**ಇವೆಂಟ್ ಮ್ಯಾನೇಜ್‌ಮೆಂಟ್ (ಸಭೆ ಹಾಗೂ ಕಾರ್ಯಕ್ರಮಗಳ ನಿರ್ವಹಣೆ) :** ಶಿಬಿರಾರ್ಥಿಗಳಿಗೆ ಸಭೆ ಹಾಗು ಕಾರ್ಯಕ್ರಮಗಳನ್ನು ಏರ್ಪಡಿಸಿ ನಿರ್ವಹಿಸುವ ಹಾಗು ವ್ಯವಸ್ಥೆಗಳನ್ನು ಮಾಡಿಕೊಳ್ಳುವ ಕುರಿತು ಈ ಸಂದರ್ಭದಲ್ಲಿ ವಹಿಸಲಾಗಿರುತ್ತದೆ. ಪಾರ್ಥನೆಯಿಂದ ವಂದನಾರ್ಪಣೆಯ ವರೆಗೆ ಎಲ್ಲಾ ಕಾರ್ಯಕ್ರಮಗಳನ್ನು ಶಿಬಿರಾರ್ಥಿಗಳೆ ನಿರ್ವಹಿಸುವ ಕಾರ್ಯವನ್ನು ವಹಿಸಲಾಗಿರುತ್ತದೆ.

**ಪರೀಕ್ಷೆ ಹಾಗೂ ಮೌಲ್ಯಮಾಪನ**

ಕೊನೆಯ ದಿನದಂದು ಪರೀಕೆಯನ್ನು ನಡೆಸಲಾಗಿರುತ್ತದೆ. ಈ ಪರಿಕ್ಷೇಯು ಒಟ್ಟು 100 ಪ್ರಶ್ನೆಗಳು ಮತ್ತು ಪ್ರತಿ ಪ್ರಶ್ನೆಗೆ ಒಂದು ಅಂಕಗಳಂತೆ 100 ಅಂಕಗಳು ಇರುತ್ತದೆ. ಹೆಚ್ಚಿನ ಅಂಕ ಪಡೆದವರಿಗೆ ಪ್ರಥಮ. ದ್ವಿತಿಯ, ತೃತಿಯ ಹಾಗು ಎರಡು ಸಮಾದಾನಕರ ಬಹುಮಾನಗಳನ್ನು ನೀಡಲಾಗುತ್ತದೆ.

## ಸಮಾರೋಪ ಕಾರ್ಯಕ್ರಮ

### ನಿರಂತರ ತರಬೇತಿ ಹಾಗೂ ಅಧ್ಯಯನವೇ ಸಹಕಾರ ಕ್ಷೇತ್ರದ ಅಭಿವೃದ್ಧಿಯ ತಳಹದಿ : ಶ್ರೀ ಎಸ್. ಆರ್. ಸತೀಶ್ಚಂದ್ರ



ದಿನಾಂಕ 16.12.2023 ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಇದರ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಸಮಾರೋಪವನ್ನು ಹಮ್ಮಿಕೊಳ್ಳಲಾಗಿತ್ತು ಸದರಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ಪರಮಪೂಜ್ಯ ಶ್ರೀ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ಗಾಣಗಾಪುರ ಅಂಚೆ, ಒಡಿಯೂರು ಇವರು ವಹಿಸಿದ್ದರು, ಸಾದ್ವೀ ಶ್ರೀ ಶ್ರೀ ಮಾತಾನಂದಮಯೀ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ಗಾಣಗಾಪುರ ಅಂಚೆ, ಒಡಿಯೂರು ಇವರು ಶಿಬಿರಾರ್ಥಿಳಿಗೆ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಸ್. ಆರ್. ಸತೀಶ್‌ಚಂದ್ರ ಮಾನ್ಯ ಅಧ್ಯಕ್ಷರು, ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಹಾಗೂ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ತೃಪ್ತಿಕರ ಹಾಗೂ ಶಿಸ್ತುಬದ್ಧ ಎಂದು ಸಮಾರೋಪ ಭಾಷಣವನ್ನು ಮಾಡಿದರು.

ಮುಖ್ಯಅತಿಥಿಗಳಾಗಿ ಶ್ರೀ ಕೆ. ಪಿ. ಸುಚರಿತ ಶೆಟ್ಟಿಯವರು ಮಾನ್ಯ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿ., ದಕ್ಷಿಣ ಕನ್ನಡ ಇವರು ಮಾತನಾಡಿ ಈ ರೀತಿಯ ತರಬೇತಿ ಕಾರ್ಯಕ್ರಮ ಸಹಕಾರಿ ಕ್ಷೇತ್ರದಲ್ಲಿ ವಿರಳ. ಉತ್ತಮ ಸ್ಥಳದ ಆಯ್ಕೆ, ಉತ್ತಮ ವಿಷಯಗಳ ಆಯ್ಕೆ, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳು, ಹಿರಿಯರ ಮಾರ್ಗದರ್ಶನ, ಇವುಗಳು ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗಿವೆ ಎಂದು ತಿಳಿಸಿದರು. ಶ್ರೀ ಎ. ಸುರೇಶ್ ರೈ ಮಾನ್ಯ ಅಧ್ಯಕ್ಷರು ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಒಡಿಯೂರು, ಬಂಟ್ವಾಳ-ತಾ, ದಕ್ಷಿಣ ಕನ್ನಡ ಇವರು ಮಾತನಾಡಿ ಸದಸ್ಯರ ಹಾಗೂ ಸಾರ್ವಜನಿಕರ ಸೇವೆ ನಿಮ್ಮ ಮುಖ್ಯ ಗುರಿಯಾಗಿರಲಿ ಎಂದು ತಿಳಿಸಿದರು.

ಶ್ರೀ ಶರಣಗೌಡ ಜಿ. ಪಾಟೀಲ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಮಾತನಾಡಿ ಸಹಕಾರ ಕ್ಷೇತ್ರದ ಸಾಧನೆ, ಅವಕಾಶಗಳ ಮತ್ತು ಕಾರ್ಯಚಟುವಟಿಕೆಗಳ ಅರಿವು ಸಿಬ್ಬಂದಿಯವರಿಗೆ ಅವಶ್ಯಕ ಎಂದು ತಿಳಿಸಿದರು. ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಶಿಬಿರಾರ್ಥಿಗಳಿಗೆ 10 ದಿನಗಳ ತರಬೇತಿಯಲ್ಲಿ ಭಾಗವಹಿಸುವಿಕೆಯ ಪ್ರಮಾಣ ಪತ್ರ ನೀಡಲಾಯಿತು.

ತರಬೇತಿಯಲ್ಲಿ ವ್ಯವಸ್ಥೆಗಾಗಿ ತಂಡಗಳನ್ನು ರಚಿಸಲಾಗಿತ್ತು. ಸದರಿ ತಂಡಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ತಂಡಗಳಿಗೆ ಬಹುಮಾನ ನೀಡಲಾಯಿತು.



ಗಣ್ಯರೊಂದಿಗೆ 22ನೇ ತಂಡದ ಶಿಬಿರಾರ್ಥಿಗಳು



ಪ್ರಮಾಣ ಪತ್ರ ವಿತರಣೆ

**ಬಹುಮಾನ ವಿಜೇತ ತಂಡಗಳ ಮತ್ತು ಶಿಬಿರಾರ್ಥಿಗಳ ಪಟ್ಟಿ :**

1. ಉತ್ತಮ ವ್ಯವಸ್ಥಾಪನ ತಂಡ – **ಭಜರಂಗಿ ತಂಡ**
2. ಉತ್ತಮ ಊಟೋಪಚಾರ ತಂಡ – **ಶ್ರೀ ಗುರುಬಸವೇಶ್ವರ ತಂಡ**
3. ಉತ್ತಮ ಸಮಯ ಪಾಲನೆ ತಂಡ – **ದತ್ತಾಂಜನೇಯ ತಂಡ**
4. ಉತ್ತಮ ಸಾಂಸ್ಕೃತಿಕ ತಂಡ – **ಶ್ರೀ ಗುರುದತ್ತಾ**
5. ಉತ್ತಮ ವರದಿ ತಂಡ – **ಭಜರಂಗಿ ತಂಡ**
6. ಉತ್ತಮ ಪ್ರಾರ್ಥನೆ – **ಶ್ರೀಮತಿ ಪ್ರತೀಕ್ಷಾ**
7. ಉತ್ತಮ ಸುವಿಚಾರ – **ಶ್ರೀ ಕಿರಣ ಗೂಳಪ್ಪಾ ಕುದರಿ**
8. ಉತ್ತಮ ಮಿಲಿ – **ಕುಮಾರಿ ಶ್ರದ್ಧಾ ಜೆ. ಶೆಟ್ಟಿ**
9. ಉತ್ತಮ ಇನ್ಸ್ಟೆಂಟ್ ಮಿಲಿ – **ವಿಜಯಲಕ್ಷ್ಮಿ**
10. ಉತ್ತಮ ಮಹಿಳಾ ಶಿಬಿರಾರ್ಥಿ – **ಶ್ರೀಮತಿ ವೀಣಾಶ್ರೀ**
11. ಉತ್ತಮ ಪುರುಷ ಶಿಬಿರಾರ್ಥಿ – **ಶ್ರೀ ಜಗದೀಶ ರಾ ಹಂಚಿನಮನಿ**
12. ಪರೀಕ್ಷೆಯಲ್ಲಿ ಪ್ರಥಮ ಬಹುಮಾನ – **ಶ್ರೀ ವಿನೋದ್ ಭರಣಿ**
13. ಪರೀಕ್ಷೆಯಲ್ಲಿ ದ್ವಿತೀಯ ಬಹುಮಾನ – **ಶ್ರೀ ಸಾಗರ ಶ್ರೀಕಾಂತ ಮಗದುಮ್**
14. ಪರೀಕ್ಷೆಯಲ್ಲಿ ತೃತೀಯ ಬಹುಮಾನ – **ಶ್ರೀ ಶಂಕರಪ್ಪ ಬಸಪ್ಪ ಪಾಟೀಲ**
15. ಪರೀಕ್ಷೆಯಲ್ಲಿ ಸಮಾಧಾನಕರ ಬಹುಮಾನ – **ಶ್ರೀ ನಬೀಸಾಬ್ ಹಾಗೂ ಶ್ರೀ ನಿಶಾಂತ**

## 10 ದಿನಗಳ ತರಬೇತಿಯ ಬಗ್ಗೆ

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯಲ್ಲಿ ಇದು 22ನೇ ತಂಡ, ಇದುವರೆಗೆ 21 ಶಿಬಿರಗಳಲ್ಲಿ 1300 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡಿರುತ್ತಾರೆ. ಅವರವರ ಸಹಕಾರಿಗೆ ಉತ್ತಮ ಸಿಬ್ಬಂದಿಯಾಗಿ ಅವರ ವ್ಯಕ್ತಿತ್ವವನ್ನು ವಿಕಸನಗೊಳ್ಳುವುದರ ಜೊತೆಗೆ ಅವರ ಸಹಕಾರಿಗೆ ಆಸ್ತಿಯಾಗಿ ಹೊರಹೊಮ್ಮಿದ್ದಾರೆ. ಕೆಲವರಂತು ಅವರ ಸಹಕಾರಿಯ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಇನ್ನೂ ಕೆಲವರು ಒಂದು ಹೆಜ್ಜೆ ಮುಂದುವರೆದು ಅವರದ್ದೆ ಆದ ಸೌಹಾರ್ದ ಸಹಕಾರಿ ಸಂಘಗಳನ್ನು ಹುಟ್ಟು ಹಾಕಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯವಾಗಿದೆ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಮ್ಮಿಕೊಳ್ಳುತ್ತಿರುವ ಈ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವು ಹಲವು ವಿಶೇಷತೆಗಳಿಂದ ಕೂಡಿರುತ್ತದೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ಹೆಚ್ಚಿನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳು ಭಾಗವಹಿಸುತ್ತಾ ಬಂದಿರುತ್ತಾರೆ. ಪ್ರಸ್ತುತ 22ನೇ ತಂಡದಲ್ಲಿ 15 ಜಿಲ್ಲೆಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದಾರೆ ಈ ಕಾರ್ಯಕ್ರಮದಲ್ಲಿ ಒಟ್ಟಾರೆ 24 ವಿಷಯಗಳ ಬಗ್ಗೆ 21 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಶಿಬಿರಾರ್ಥಿಗಳಿಗೆ ಮಾಹಿತಿಯನ್ನು ನೀಡಿದ್ದಾರೆ, ಈ ಶಿಬಿರವನ್ನು ಇಂತಹ ಪುಣ್ಯ ಕ್ಷೇತ್ರದಲ್ಲಿ ನಡೆಸಲು ಅವಕಾಶ ಮಾಡಿಕೊಟ್ಟ ಸ್ವಾಮಿ ಶ್ರೀ ಶ್ರೀ ದೇವಾನಂದ ಸ್ವಾಮೀಜಿರವರಿಗೆ ಸಾಧ್ವಿ ಮಾತಾನಂದಮಹಿರವರಿಗೆ ಹಾಗು ಸಂಸ್ಥಾನದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ತರಬೇತಿ ಯಶಸ್ವಿಯಾಗಲು ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸಿದೆ.

## ಸಂಯುಕ್ತ ಸಹಕಾರಿಗೆ ಮನವಿ



**ಬೆಳಗಾವಿ** : ದಿನಾಂಕ 11 ಡಿಸೆಂಬರ್ 2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ಮಾನ್ಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್. ಇವರುಗಳ ಸಮ್ಮುಖದಲ್ಲಿ ಶ್ರೀ ರೇವಣ್ಣ ಸಿದ್ದೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಗುರ್ಲಾಪುರ, ತಾ: ಮೂಡಲಗಿ ಜಿ: ಬೆಳಗಾವಿ ಸಹಕಾರಿಯ ವತಿಯಿಂದ ವಾರ್ಷಿಕ ವಂತಿಕೆ ಹಾಗೂ ಶಿಕ್ಷಣ ನಿಧಿಯನ್ನು ಸ್ವೀಕರಿಸಲಾಯಿತು.

## ಡಿಸೆಂಬರ್ – 2023 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 05 ಸೌಹಾರ್ದ ಸಹಕಾರಿಗಳಿಗೆ ಹಾಗೂ ಸದಸ್ಯ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ ರಾಜೀನಾಮೆಯಿಂದಾಗಿ ಕೋರಂ ಕೊರತೆ ಉಂಟಾಗಿರುವ 02 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಡಿಸೆಂಬರ್ ತಿಂಗಳಲ್ಲಿ ಒಟ್ಟು 07 ಸೌಹಾರ್ದ ಸಹಕಾರಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

# ಅಖಿಲ ಭಾರತ ಮೂರನೇ ರಾಷ್ಟ್ರೀಯ ಮಹಿಳಾ ಅಧಿವೇಶನ - ಮಹಿಳಾ ಸಹಕಾರಿಗಳ ಸಕ್ರಿಯ ಭಾಗವಹಿಸುವಿಕೆ




**ಕಾನ್ಹ ಶಾಂತಿವನಂ, ಹೈದ್ರಾಬಾದ್ :** ದಿನಾಂಕ 15 ಮತ್ತು 16 ಡಿಸೆಂಬರ್ 2023ರಂದು ಸಹಕಾರ ಭಾರತಿಯ ವತಿಯಿಂದ ಅಖಿಲ ಭಾರತ ಮೂರನೇ ರಾಷ್ಟ್ರೀಯ ಮಹಿಳಾ ಅಧಿವೇಶನವು ಕಾನ್ಹ ಶಾಂತಿವನಂ, ಚೇಗೂರು, ಭಾಗ್ಯನಗರ (ಹೈದ್ರಾಬಾದ್-ತೆಲಂಗಾಣ) ಇಲ್ಲಿ ಮಹಿಳಾ ಸಹಕಾರಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಯಶಸ್ವಿಯಾಗಿ ಜರುಗಿತು.

ಮಾನವನ ಮೆದುಳು-ಮನಸ್ಸಿನ ಸಮತೋಲಿತ ಬೆಳವಣಿಗೆಯ ಗುರಿಯನ್ನು ಹೊಂದಿರುವ ಕೇಂದ್ರವಾದ "ಹಾರ್ಟ್‌ಫುಲ್‌ನೆಸ್" ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕಮಲೇಶ್ ಅವರು ಈ ಅಧಿವೇಶನವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ದೀನಾನಾಥ್ ಠಾಕೂರ್, ಪ್ರಧಾನ ಕಾರ್ಯದರ್ಶಿಯಾದ ಡಾ. ಉದಯ್ ಜೋಶಿ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾದ ಶ್ರೀ ಸಂಜಯ್ ಪಚ್ಪೋರ್ ಸೇರಿದಂತೆ ಪ್ರಮುಖ ನಾಯಕರು ಉಪಸ್ಥಿತ-ರಿದ್ದರು. ಈ ಅಧಿವೇಶನದಲ್ಲಿ ದೇಶದಾದ್ಯಂತ ಸಹಕಾರಿ ಸಂಸ್ಥೆಗಳ ಮಹಿಳಾ ನಿರ್ದೇಶಕರು, ಸ್ವಸಹಾಯ ಸಂಘಗಳ ಪ್ರತಿನಿಧಿಗಳು, ಫೆಡರೇಷನ್‌ಗಳು/ಅಸೋಸಿಯೇಷನ್‌ಗಳ ಪ್ರತಿನಿಧಿಗಳು ಉಪಸ್ಥಿತರಿದ್ದು, 24 ರಾಜ್ಯಗಳ ಸುಮಾರು 400 ಜಿಲ್ಲೆಗಳಿಂದ 2800ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯದಿಂದ 600ಕ್ಕೂ ಹೆಚ್ಚು ಮಹಿಳಾ ಸಹಕಾರಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಸಹಕಾರ ಭಾರತಿಯ ಮಹಿಳಾ ಪ್ರಕೋಷ್ಠ – ಕರ್ನಾಟಕ ಇದರ ಮುಖಸ್ಥರು ಹಾಗೂ ಸಂಯುಕ್ತ ಸಹಕಾ-ರಿಯ ನಿರ್ದೇಶಕರಾಗಿರುವ ಶ್ರೀಮತಿ ಶೈಲಜಾ ವಿ. ತಪಲಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಬಿ. ಭಟ್, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ, ಶ್ರೀಮತಿ ಸರಸ್ವತಿ ಎನ್. ರವಿ, ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಮಣಿ.ಬಿ.ಎನ್., ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ಕಾಶಿನಾಥ್ ಬೆಲ್ದಾಳೆ, ಸೇರಿದಂತೆ ಪ್ರಮುಖರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀಮತಿ ಶೋಭಾ.ಆರ್., ಶ್ರೀಮತಿ ದಿವ್ಯ.ಟಿ., ಶ್ರೀಮತಿ ಶೈಲಜಾ ಎಸ್., ಶ್ರೀಮತಿ ರೇಷ್ಮಾ ಪಾಟೀಲ್ ಇವರುಗಳನ್ನು ನಿಯೋಜಿಸಲಾಗಿದ್ದು, ಈ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಅಧಿವೇಶನದ ಮೊದಲನೆಯ ದಿನದಂದು ಬೆಳಗ್ಗಿನ ಅವಧಿಯಲ್ಲಿ ಮಹಿಳಾ ಸಬಲೀಕರಣ, ಭಾರತದಲ್ಲಿ ಸಹಕಾರ ಚಳುವಳಿ ಬೆಳವಣಿಗೆ ಕುರಿತು ಅವಧಿಗಳು ಜರುಗಿದವು. ಮಧ್ಯಾಹ್ನದ ಅವಧಿಯಲ್ಲಿ ದೇಶದ ವಿವಿಧ ಮಹಿಳಾ ಸಹಕಾರಿ ಸಂಸ್ಥೆಗಳಲ್ಲಿ ಆಯ್ದ 7 ಸಹಕಾರಿ ಸಂಸ್ಥೆಗಳ ಯಶೋಗಾಥೆಗಳನ್ನು ಪ್ರಸ್ತುತಪಡಿಸಲಾಯಿತು. ಕರ್ನಾಟಕ ರಾಜ್ಯದಿಂದ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿ, ಉತ್ತರ ಕನ್ನಡ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಸರಸ್ವತಿ ಎನ್. ರವಿರವರು ತಮ್ಮ ಸಹಕಾರಿ ಸಂಸ್ಥೆಯ ಯಶೋಗಾಥೆಯನ್ನು ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಿಧಾನ ಸಭಾ ಸದಸ್ಯರಾದ ಮಾಜಿ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆರವರು ವೇದಿಕೆಯ ಮೇಲೆ ಉಪಸ್ಥಿತರಿದ್ದು, ಮಹಿಳಾ ಸಹಕಾರಿಗಳನ್ನುದ್ದೇಶಿಸಿ ಮಾತನಾಡಿದರು.

ಸುಪ್ರಿಂ ಕೋರ್ಟ್‌ನ ವಕೀಲರಾದ ಶ್ರೀಮತಿ ಮೋನಿಕಾರವರು ಮಹಿಳೆ ಅಂದು-ಇಂದು-ಮುಂದು ವಿಮರ್ಶೆಯನ್ನು ಪ್ರಸ್ತುತಪಡಿಸಿದರು.

ಕರ್ನಾಟಕ ರಾಜ್ಯದಿಂದ ಉತ್ಕೃಷ್ಟ ಮಹಿಳಾ ಸಹಕಾರಿ ಸಂಸ್ಥೆಯಾಗಿ ನವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಚಂದಾಪುರ, ಶಿಗ್ಗಾಂವ್ ತಾ॥, ಹಾವೇರಿ ಜಿಲ್ಲೆ ಈ ಸಹಕಾರಿಯನ್ನು ಸನ್ಮಾನಿಸಲಾಯಿತು.

ಈ ಅಧಿವೇಶನದ ಮೂಲಕ 1) ಮಹಿಳಾ ಪ್ರತಿನಿಧಿಗಳಿಗೆ ಶೇ.33ರಷ್ಟು ಮೀಸಲಾತಿ ನೀಡಲು ಕೇಂದ್ರ ಸರ್ಕಾರ ಈಗಾಗಲೇ ನಾರಿ ಶಕ್ತಿ ವಂದನ್ ಅಧಿನಿಯಮವನ್ನು ಜಾರಿಗೊಳಿಸಿದ್ದು, ಮಹಿಳಾ ಪ್ರತಿನಿಧಿಗಳನ್ನು ಸರ್ಕಾರಿ ನಾಮನಿರ್ದೇಶಿತರನ್ನಾಗಿ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ವಿವಿಧ ಸಹಕಾರಿ ಅಪೆಕ್ಸ್ ಸಂಸ್ಥೆಗಳಲ್ಲಿ ನೇಮಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡಬೇಕು, 2) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಭಾಗವಹಿಸುವ ನ್ಯಾಯಯುತ ಅವಕಾಶವನ್ನು ಮಹಿಳಾ ಸಹಕಾರಿ ಸಂಸ್ಥೆಗಳಿಗೆ ಸೂಕ್ತ ಆದ್ಯತೆ ನೀಡಿದರೆ, ಇಡೀ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಪ್ರಸ್ತುತ ವ್ಯವಸ್ಥೆಗಿಂತ ಪಾರದರ್ಶಕ ಮತ್ತು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪ್ರಕ್ರಿಯೆಯಲ್ಲಿ ಮಹಿಳಾ ಸಹಕಾರಿಗಳನ್ನು ತೊಡಗಿಸಿಕೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಮಾಡಲಾಯಿತು.





## ಪ್ರವೇಶ ತರಬೇತಿ ಕಾರ್ಯಕ್ರಮ



**ರಾಯಚೂರು** : ದಿನಾಂಕ 05.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೆರಿ ಕಲಬುರಗಿ ವತಿಯಿಂದ ನೂತನವಾಗಿ 2022 ರಿಂದ 2023ರವರೆಗೆ ನೋಂದಣಿಗೊಂಡ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಪ್ರವೇಶ ತರಬೇತಿಯನ್ನು ಗಾಂಧಿ ಕಾಲೇಜು ಆವರಣ, ಮಾನವಿ ಜಿ॥ ರಾಯಚೂರು ಇಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾನವಿ ಪಟ್ಟಣದ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಇದರ ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ರೋಹಿಣಿಯವರು ಹಾಗೂ ವೇದಿಕೆ ಮೇಲಿನ ಗಣ್ಯರು ನೇರವೆರಿಸಿದರು. ಮುಖ್ಯ ಅತಿಥಿಗಳಾಗಿ ಗಾಂಧಿ ಕಾಲೇಜಿನ ಆಡಳಿತಾಧಿಕಾರಿ ಹಾಗೂ ಮಾನವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ ನಿ., ಇದರ ನಿರ್ದೇಶಕರುಗಳಾದ ಶ್ರೀ ರಾಮುಲಿಂಗಪ್ಪ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ರವರು ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೆರಿಸಿದರು. ನಿರೂಪಣೆಯನ್ನು ಶ್ರೀ ನಟರಾಜರವರು ನಿರ್ವಹಿಸಿದರು.

ಮೊದಲನೆಯ ಅವಧಿಯಲ್ಲಿ ಗುಣಮಟ್ಟದ ಸಾಲ ನೀಡುವಿಕೆ ಮತ್ತು ಸಾಲ ದಾಖಲಾತಿಗಳು, ಲೆಕ್ಕಪತ್ರಗಳ ನಿರ್ವಹಣೆ ಎಂಬ ವಿಷಯದ ಕುರಿತು ಶ್ರೀ ನಾಗರಾಜ ಮುಖ್ಯಕಾರ್ಯನಿರ್ವಾಹಕರು ಮಾನವಿ ಪಟ್ಟಣ ಸಹಕಾರಿ ಬ್ಯಾಂಕ್ ಇವರು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಕಾಯ್ದೆ, ನಿಯಮಗಳು, ಶಾಸನಬದ್ದ ಕರ್ತವ್ಯಗಳು ಎಂಬ ವಿಷಯದ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪನ್ಯಾಸ ನೀಡಿದರು.

ಮಧ್ಯಾಹ್ನ 2.30ರ ನಂತರ ವಾರ್ಷಿಕ ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆಗಳು ಎಂಬ ವಿಷಯದ ಕುರಿತು ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ರವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ 90 ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಯಾಗಿ ಉಪನಿಬಂಧಕರಾದ ಶ್ರೀ ಕಿಶೋರ ಕುಮಾರ ನೇಮಕ



ಕರ್ನಾಟಕ ರಾಜ್ಯ, ಇವರ ಆದೇಶ ಸಂಖ್ಯೆ ಆರ್.ಸಿ.ಎಸ್./ಸಿಬ್ಬಂದಿ–1 ಸಿಆರ್–42/2023–24 ದಿನಾಂಕ 22.11.2023ರ ಪ್ರಕಾರ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಈ ಪೀಠದ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಳಗಾವಿ ಉಪವಿಭಾಗ, ಇವರನ್ನು ಅಧಿಕಪ್ರಭಾರದಲ್ಲಿರಿಸಿ, ಆದೇಶಿಸಲಾಗಿರುವುದನ್ನು ಆಡಳಿತಾತ್ಮಕ ಕಾರಣಗಳಿಂದ ಹಿಂಪೆದು, ಮುಂದಿನ ಆದೇಶದವರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ನಿ–441, ದಾವಾ ಪಂಚಾಯ್ತಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಇವರನ್ನು ರಾಜ್ಯದ ನಾಲ್ಕು ವಿಭಾಗಗಳ ಸೌಹಾರ್ದ ಸಹಕಾರಿಗಳ ಅಮಲ್ಜಾರಿ ಪ್ರಕರಣಗಳ ಇತ್ಯರ್ಥಕ್ಕಾಗಿ ವಸೂಲಾಧಿಕಾರಿಯಾಗಿ ಕಾರ್ಯನಿರ್ವಹಿಸಲು ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಬೆಂಗಳೂರು ಪೀಠದ ಈಗ ಕಾರ್ಯ ನಿರ್ವಹಿಸುತ್ತೀರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪ್ರೇಮಾನಂದ ಬಿ.. ಇವರು ದಿನಾಂಕ 28.11.2023ರಂದು ಅಧಿಕಾರ ಸ್ವೀಕರಿಸಿ ಅಮಲ್ಜಾರಿ ಪ್ರಕರಣಗಳ ಸುನಾವಣೆಯನ್ನು ನಡೆಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ಇವರ ಆದೇಶ ಸಂಖ್ಯೆ ಆರ್.ಸಿ.ಎಸ್./ಸಿಬ್ಬಂದಿ–1 ಸಿಆರ್–14/2023–24 ದಿನಾಂಕ 04.12.2023ರ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರು, (ನಿ–441) ಐಸಿಡಿಪಿ, ಬೆಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ಮಾರ್ಪಡಿಸಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ ಬೆಂಗಳೂರು ಇವರನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು, (ನಿ–441) ಸಹಕಾರ ಸಂಘಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಈ ಹುದ್ದೆಯ ಅಧಿಕ ಪ್ರಭಾರದಲ್ಲಿಸಿ ಆದೇಶಿಸಿರುತ್ತಾರೆ. ಈ ಆದೇಶದನ್ವಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಕಿಶೋರ ಕುಮಾರ್, ಇವರು ದಿನಾಂಕ 05.12.2023 ನ್ಯಾಯಾಲಯದ ಪ್ರಭಾರ ವಹಿಸಿಕೊಂಡಿರುತ್ತಾರೆ

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2023-24ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳ



**ಬೆಂಗಳೂರು :** ದಿನಾಂಕ 27.12.2023ರಂದು ಬೆಂಗಳೂರು ನಗರ ವಲಯ(2&3) ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ನಾರಾಯಣ ಬಾಬು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜ. ಪಾಟೀಲ, ಭಾಗವಹಿಸಿದ್ದರು.



**ತುಮಕೂರು :** ದಿನಾಂಕ 30.12.2023ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್, ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ತುಮಕೂರು ಜಿಲ್ಲೆಯ ಉಪನಿಬಂಧಕರಾದ ಶ್ರೀ ಎನ್. ಮೂರ್ತಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ರಂಗಸ್ವಾಮಿ, ತುಮಕೂರು ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್, ಬೆಂಗಳೂರು ಇವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 01.01.2024ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮೊದಲು ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ಶ್ರೀ ಶಶಿಧರ, ಎಸ್. ಜಿ. ಮಾನ್ಯ ಅಧೀಕ್ಷಕ, ಇಂಜಿನಿಯರ್, ಮೆಸ್ಕಾಂ ಹಾಗೂ ಮಾನ್ಯ ಉಪಾಧ್ಯಕ್ಷರು ಶ್ರೀ ಕಾಯಕ ಜ್ಯೋತಿ ಸೌಹಾರ್ದ ಸಹಕಾರಿ, ಶಿವಮೊಗ್ಗ ಇವರು ಧ್ವಜಾರೋಹಣವನ್ನು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಇವರು ವಹಿಸಿದ್ದರು.




**ಚಿತ್ರದುರ್ಗ :** ದಿನಾಂಕ 28.12.2023ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಜೆ.ಸಿ.ಆರ್ ಶಾಖೆ, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ಇವರು ಗಿಡಕ್ಕೆ ನೀರು ಹಾಕುವುದರ ಮೂಲಕ ನೆರವೇರಿಸಿದರು.



**ವಿಜಯಪುರ :** ದಿನಾಂಕ: 29.12.2023 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಕಾರ್ಯಕ್ರಮದ ಉದ್ಘಾಟಕರಾಗಿ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ.ಪಾಟೀಲ ಇವರು ವಹಿಸಿದ್ದರು. ಸಭೆಯಲ್ಲಿ ಅತಿಥಿಗಳಾಗಿ ಶ್ರೀ ಅಮರನಾಥ ಬಿರಾದಾರ ಇವರು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ: 29.12.2023 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 02.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಸವದತ್ತಿ, ರಾಮದುರ್ಗ, ಮತ್ತು ಯರಗಟ್ಟಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದರು.



**ಬೆಳಗಾವಿ** : ದಿನಾಂಕ: 30.12.2023 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ರಾಯಭಾಗ, ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ರವರು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 03.01.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಚೇರಿ ವತಿಯಿಂದ ಬೆಳಗಾವಿ, ಖಾನಾಪುರ, ಹುಕ್ಕೇರಿ ಹಾಗೂ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಹಾಂತ ಭವನ ಮಹಾಂತೇಶ ನಗರ ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು..



**ಗದಗ** : ದಿನಾಂಕ: 03.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಗದಗ ಜಿಲ್ಲೆ ವತಿಯಿಂದ ಇದರ ವತಿಯಿಂದ ಗದಗ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ನಕ್ಷತ್ರ ಹೋಟೆಲ್, ರೈತ ಭವನ ಹತ್ತಿರ, ಗದಗ ಇಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆರವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆರವರು ವಹಿಸಿದ್ದರು,



**ಹಾವೇರಿ** : ದಿನಾಂಕ 26.12.2023ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ ಶಿವಲಿಂಗಪ್ಪನವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಭಾಗವಹಿಸಿದ್ದರು.



**ಉತ್ತರ ಕನ್ನಡ** : ದಿನಾಂಕ 27.12.2023 ರಂದು ಶಿರಸಿ, ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ ಮತ್ತು ಮುಂಡಗೋಡ ತಾಲ್ಲುಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಕರ ವಾರ್ಷಿಕ ಸಭೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ. ನಾಯಕರವರು ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಿ ಕೆ ರಾಮಪ್ಪ, ನಿವೃತ್ತ ಉಪ ನಿರ್ದೇಶಕರು ಲೆಕ್ಕಪ–ರಿಶೋಧನಾ ಇಲಾಖೆ ಇವರು ಭಾಗವಹಿಸಿದ್ದರು,

ದಿನಾಂಕ 28.12.2023 ರಂದು ತಾಲ್ಲೂಕುಗಳಾದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ಮತ್ತು ಜೋಯಿಡಾ ತಾಲ್ಲುಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಕರ ವಾರ್ಷಿಕ ಸಭೆಯನ್ನು ಮಹಾಲಕ್ಷ್ಮೀ ಕಂಫರ್ಟ್, ಬಿ ಎಂ ರಸ್ತೆ, ಕುಮಟಾ ಇಲ್ಲಿ ಹಮ್ಮಿಕೊಳ್ಳಲಾಯಿತು, ಸಂಪನ್ಮೂಲ ವ್ಯಕ್ತಿಯಾದ ಶ್ರೀ ಜಿ ಕೆ ರಾಮಪ್ಪ, ಹಾಗೂ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು.



**ಬಾಗಲಕೋಟ** : ದಿನಾಂಕ 27.12.2023 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಸ್. ಆರ್. ಪಾಟೀಲ್, ಮಾಜಿ ಸಚಿವರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್. ಪಾಟೀಲ್‌ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಉಪಸ್ಥಿತರಿದ್ದರು.



**ಧಾರವಾಡ** : ದಿನಾಂಕ: 30.12.2023 ರಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿಯವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ವಹಿಸಿದ್ದರು ಅತಿಥಿಗಳಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಭಾಗವಹಿಸಿದ್ದರು ಮತ್ತು ವೇದಿಕೆ ಮೇಲೆ ಮಾನ್ಯ ಶ್ರೀ ಮನೋಜ್ ಜೋಷಿ ಮತ್ತು ಶ್ರೀ ಅಶೋಕ್ ಬ್ಯಾಹಟ್ಟಿ ಮತ್ತು ಶ್ರೀಮತಿ ಉಮಾ ಜಿ ತಾರ್ಯಾಳ ಮುಖ್ಯ ಕಾರ್ಯನಿರ್ವಾಹಕರು ವೇದಿಕೆ ಮೇಲೆ ಉಪಸ್ಥಿತ–ರಿದ್ದರು.



**ಮೈಸೂರು** : ದಿನಾಂಕ: 30.12.2023 ರಂದು ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಮಾನ್ಯ ನಿರ್ದೇಶಕರು ಹಾಗೂ ಶಿಕ್ಷಣ ಮತ್ತು ಸಲಹಾ ಸಮಿತಿಯ ಸದಸ್ಯರಾದ ಡಾ. ಎಚ್.ವಿ ರಾಜೀವ್ ರವರು ನೆರವೇರಿಸಿದರು.



**ಉಡುಪಿ :** ದಿನಾಂಕ: 28.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಡಯಾನ ಹೋಟೆಲ್ ಉಡುಪಿ ಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿದ್ದರು.



**ಮಂಡ್ಯ :** ದಿನಾಂಕ: 28.12.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಮೈಸೂರು ಇದರ ವತಿಯಿಂದ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ– 2023 ಅನ್ನು ಮಂಡ್ಯ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಮಂಡ್ಯ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಅನಿತಾ ಕೆ ರವರು, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ ಇವರು ನೆರವೇರಿಸಿದರು




**ದಕ್ಷಿಣ ಕನ್ನಡ :** ದಿನಾಂಕ: 29.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀನಿವಾಸ ಹೋಟೆಲ್.ಮಂಗಳೂರು ಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ದಕ್ಷಿಣಕನ್ನಡ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ ರಮೇಶ್ ಹೆಚ್ .ಎನ್ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ಭಾಗವಹಿಸಿದ್ದರು



**ಚಾಮರಾಜನಗರ :** ದಿನಾಂಕ: 27.12.2023ರಂದು ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ– 2023 ಅನ್ನು ಮಹಾಮನೆ ಸಭಾಂಗಣ, ಚಾಮರಾಜನಗರ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಜ್ಯೋತಿ ಅರಸ್ ರವರು, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಚಾಮರಾಜನಗರ ಜಿಲ್ಲೆ ಇವರು ನೆರವೇರಿಸಿದರು.



**ಹಾಸನ :** ದಿನಾಂಕ: 30.12.2023ರಂದು ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ 2023 ಅನ್ನು ಶ್ರೀ ಬಸವರಾಜೇಂದ್ರ ಶಾಲೆಯ ಸಭಾಂಗಣ, ಹಾಸನ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆಯನ್ನು ಶ್ರೀ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಪುಷ್ಪಗಿರಿ ಮಹಾಸಂಸ್ಥಾನ ಮಠ, ಹಳೇಬೀಡು ಇವರು ನೆರವೇರಿಸಿದರು.



**ಕೊಡಗು :** ದಿನಾಂಕ: 27.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಯನ್ನು ದಿ ಮಾರ್ಕರಾ ಹೋಟೆಲ್ ಮಡಿಕೇರಿ ಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣರಾವ್ ರವರು ನೆರವೇರಿಸಿದರು.



**ಚಿಕ್ಕಮಗಳೂರು :** ದಿನಾಂಕ: 28.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಯನ್ನು ವಾಸವಿ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ನಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಚಿಕ್ಕಮಗಳೂರು ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಶ್ರೀಮತಿ ಶಶಿರೇಖಾ ರವರು ನೆರವೇರಿಸಿದರು



**ಕಲಬುರಗಿ :** ದಿನಾಂಕ: 02.01.2024 ರಂದು ಕಲಬುರ್ಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಶ್ರೀ ವಿಶ್ವನಾಥ ಮಲಕೂಡ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಕಲಬುರ್ಗಿ ಪ್ರಾಂತ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿದೇಶಕರಾದ ಶ್ರೀ ಸಂಜೀವ ಮಹಾಜನ್ ಹಾಗೂ ಶ್ರೀ ಎಸ್ ಎಸ್ ಪಾಟೀಲ್, ಅಧ್ಯಕ್ಷರು, ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 29.12.2023 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಕೊಪ್ಪಳ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ದಸ್ತಗಿರಿ ಅಲಿರವರು ನೆರವೆರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪ್ರಕಾಶ ಸಜ್ಜನ ಉಪಸ್ಥಿತರಿದ್ದರು.



**ರಾಯಚೂರು :** ದಿನಾಂಕ 28.12.2023 ರಂದು ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ, ಲಿಂಗಸೂಗುರು ಮತ್ತು ಮಾನವಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ರಾಯಚೂರು ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರು ಹಾಗೂ ಕೊಪ್ಪಳ ಲೋಕಸಭಾ ಕ್ಷೇತ್ರದ ಮಾಜಿ ಸಂಸದರಾದ ಶ್ರೀ ಕೆ. ವಿರೂಪಾಕ್ಷಪ್ಪರವರು ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿಂಧನೂರು ಉಪವಿಭಾಗದ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮಲ್ಲಯ್ಯ ಸಾಲಗುಂದರವರು ಭಾಗವಹಿಸಿದರು.



**ಬೆಂಗಳೂರು** : ದಿನಾಂಕ 29.12.2023ರಂದು ಬೆಂಗಳೂರು ನಗರ(1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೇಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪ್ರೇಮಾನಂದ ಬಿ.ಪಿ. ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ(ನಿ.441), ಬೆಂಗಳೂರು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಹಿಸಿದ್ದರು



**ರಾಯಚೂರು** : ದಿನಾಂಕ 29.12.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ, & ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ' ಉದ್ಘಾಟನೆಯನ್ನು ಶ್ರೀ ವಿಜಯ ಭಾಸ್ಕರ ಮಾನ್ಯ ಅಧ್ಯಕ್ಷರು ಗೀತಾ ಸೌಹಾರ್ದ ಸಹಕಾರಿ ಸಂಘ ನಿ.,ರಾಯಚೂರು ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಮೆಹಬೂಬ ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಲಿಂಗಸೂಗುರು ಭಾಗವಹಿಸಿದರು.



**ಯಾದಗಿರಿ** : ದಿನಾಂಕ 03.01.2024 ರಂದು ಯಾದಗಿರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಮತಿ ಶೈಲಜಾ ತಪಲಿಯವರು ನೆರವೆರಿಸಿದರು.



**ವಿಜಯನಗರ** : ದಿನಾಂಕ 03.01.2024 ರಂದು ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರವಿಕುಮಾರ ನೆರವೆರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ವಹಿಸಿದ್ದರು.



**ಬೀದರ** : ದಿನಾಂಕ 06.01.2024 ರಂದು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ್ ನೆರವೆರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಹಕಾರ ಇಲಾಖೆಯ ಉಪ ನಿಬಂಧಕರಾದ ಮಂಜುಳಾ ಎಸ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರಾಕಲೇ ಉಪಸ್ಥತರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

**ಶಾಸನಬದ್ಧ ಸಹಕಾರಿ ಸಂಸ್ಥೆ**

**ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ನಮ್ಮ ಧ್ಯೇಯ**

### ಜನವರಿ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಫೆಬ್ರವರಿ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | | |

### ಮಾರ್ಚ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಏಪ್ರಿಲ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

### ಮೇ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಜೂನ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಜುಲೈ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಆಗಸ್ಟ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

### ಸೆಪ್ಟೆಂಬರ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

### ಅಕ್ಟೋಬರ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ನವೆಂಬರ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಡಿಸೆಂಬರ್ - 2024

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಸಂಯುಕ್ತ ಸಹಕಾರಿಯ ರಜಾ ದಿನಗಳು 2024

1. ಜನವರಿ 15 ಮಕರ ಸಂಕ್ರಾಂತಿ
2. ಜನವರಿ 26 ಗಣರಾಜ್ಯೋತ್ಸವ
3. ಮಾರ್ಚ್ 08 ಮಹಾಶಿವರಾತ್ರಿ
4. ಏಪ್ರಿಲ್ 09 ಚಂದ್ರಮಾನ ಯುಗಾದಿ
5. ಮೇ 01 ಕಾರ್ಮಿಕರ ದಿನಾಚರಣೆ
6. ಜೂನ್ 17 ಬಕ್ರೀದ್
7. ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ
8. ಸೆಪ್ಟೆಂಬರ್ 07 ವರಸಿದ್ಧಿ ವಿನಾಯಕ ವ್ರತ
9. ಸೆಪ್ಟೆಂಬರ್ 16 ಈದ್-ಮಿಲಾದ್
10. ಅಕ್ಟೋಬರ್ 2 ಗಾಂಧೀ ಜಯಂತಿ
11. ಅಕ್ಟೋಬರ್ 11 ಆಯುಧಪೂಜೆ
12. ಅಕ್ಟೋಬರ್ 31 ನರಕ ಚತುರ್ದಶಿ
13. ನವೆಂಬರ್ 01 ಕನ್ನಡ ರಾಜ್ಯೋತ್ಸವ
14. ನವೆಂಬರ್ 02 ಬಲಿಪಾಡ್ಯಮಿ
15. ಡಿಸೆಂಬರ್ 25 ಕ್ರಿಸ್‌ಮಸ್

ತಿಂಗಳ ಎರಡನೇ ಶನಿವಾರ, ವಾರದ ಎಲ್ಲಾ ಭಾನುವಾರಗಳು ಹಾಗೂ ಮೇಲೆ ತಿಳಿಸಿದ 15 ದಿನಗಳು ಮಾತ್ರ.

"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ,



# 2024

ಸಹಕಾರಿಗಳ ನಡೆ - ಗುಣಮಟ್ಟದ ಕಡೆ

ಮಲ್ಲೇಶ್ವರಂ, ಬೆಂಗಳೂರು - 560 055 ದೂ : 080-23378375 - 80

## ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2023-24ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳ ವಿವರಗಳು

| ಕ್ರ. ಸಂ. | ದಿನಾಂಕ | ಜಿಲ್ಲೆ/ತಾಲ್ಲೂಕು | ಸ್ಥಳ | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಮುಖ್ಯಕಾರ್ಯ ನಿರ್ವಾಹಕರ ಸಂಖ್ಯೆ ಹಾಗೂ ಇತರರು |
|---|---|---|---|---|---|
| ಬೆಂಗಳೂರು ವಿಭಾಗ | | | | | |
| 01 | 21.12.2023 | ದಾವಣಗೆರೆ | ಚೇತನ ಹೋಟೆಲ್, ದಾವಣಗೆರೆ | 56 | 56 |
| 02 | 22.12.2023 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ತಾಲೂಕು ಪಂಚಾಯತಿ ಆವರಣ, ಡಿ.ಸಿ.ಸಿ ಬ್ಯಾಂಕ್ ಹಿಂಭಾಗ, ಚಿಕ್ಕಬಳ್ಳಾಪುರ | 34 | 34 |
| 03 | 26.12.2023 | ಕೋಲಾರ | ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಎರಡನೆಯ ಮಹಡಿ, ಡಿ.ಸಿ.ಸಿ ಬ್ಯಾಂಕ್ ಹತ್ತಿರ ಕೋಲಾರ | 18 | 18 |
| 04 | 27.12.2023 | ಬೆಂಗಳೂರು ನಗರ (2&3ನೇ ವಲಯ) ಹಾಗೂ ರಾಮನಗರ | ಉದಯ ಸೌಹಾರ್ದ ಸಹಕಾರಿ ನಿ, ಹನುಮಂತನಗರ, ಬೆಂಗಳೂರು | 56 | 56 |
| 05 | 28.12.2023 | ಚಿತ್ರದುರ್ಗ | ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಚಿತ್ರದುರ್ಗ | 57 | 57 |
| 06 | 29.12.2023 | ಬೆಂಗಳೂರು ನಗರ (1&4) ಮತ್ತು ಬೆಂಗಳೂರು ಗ್ರಾಮಾಂತರ | ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು | 56 | 56 |
| 07 | 30.12.2023 | ತುಮಕೂರು | ಶಿವಾಜಿ ಸೌಹಾರ್ದ ಸಹಕಾರಿ ನಿ, ತುಮಕೂರು | 138 | 138 |
| 08 | 01.01.2024 | ಶಿವಮೊಗ್ಗ | ಮಥುರಾ ಪ್ಯಾರಡೈಸ್, ಶಿವಮೊಗ್ಗ | 110 | 95 |
| ಮೈಸೂರು ವಿಭಾಗ | | | | | |
| 09 | 27.12.2023 | ಚಾಮರಾಜನಗರ | ಮಹಾಮನೆ ಸಭಾಂಗಣ, ರೋಟರಿ ಶಾಲೆ ಹಿಂಭಾಗ, ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ. | 22 | 30 |
| 10 | 27.12.2023 | ಕೊಡಗು | ದಿ ಫೋರ್ಟ್ ಮರ್ಕರಾ ಬೊಟಿಕ್ ಹೋಟೆಲ್, ಕೊಡವ ಸಮಾಜ ಸಂಕೀರ್ಣ, ಮಡಿಕೇರಿ | 13 | 28 |

| | | | | | |
|---|---|---|---|---|---|
| 11 | 28.12.2023 | ಮಂಡ್ಯ | ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಭಾಂಗಣ, ಮಂಡ್ಯ. | 24 | 39 |
| 12 | 28.12.2023 | ಉಡುಪಿ | ಹೋಟೇಲ್ ಡಯಾನ, ತಾಲ್ಲೂಕು ಕಛೇರಿ ಹತ್ತಿರ, ಉಡುಪಿ | 112 | 125 |
| 13 | 28.12.2023 | ಚಿಕ್ಕಮಗಳೂರು | ಶ್ರೀ ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ನೇಕಾರರ ರಸ್ತೆ, ತಾ: ಚಿಕ್ಕಮಗಳೂರು ಜಿ: ಚಿಕ್ಕಮಗಳೂರು–577 | 30 | 30 |
| 14 | 29.12.2023 | ಮಂಗಳೂರು | ಹೋಟೇಲ್ ಶ್ರೀನಿವಾಸ, ಹಂಪನಕಟ್ಟೆ, ಮಂಗಳೂರು. | 96 | 105 |
| 15 | 30.12.2023 | ಮೈಸೂರು | ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೆಷನ್(ರಿ), ರೋಟರಿ ಸೆಂಟ–ರ್(ಕ್ಲಬ್), ಜೆ.ಎಲ್.ಬಿ ರೋಡ್, ಮೈಸೂರು. | 46 | 53 |
| 16 | 30.12.2023 | ಹಾಸನ | ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ಸಂಘ ನಿ., ಶ್ರೀ ಬಸವರಾಜೇಂದ್ರ ಶಾಲಾ ಆವರಣ, ಈದ್ಗಾ ಮೈದಾನ ಎದರು, ಹಾಸನ | 27 | 51 |
| **ಕಲಬುರಗಿ ವಿಭಾಗ** | | | | | |
| 17 | 22.12.2023 | ಬಳ್ಳಾರಿ | ನಕ್ಷತ್ರಾ ಹೋಟೆಲ್,ಗಾಂಧಿ ನಗರ ಅಂಜನಾ ಡೈಗ್ನೋಸ್ಟಿಕ್ ಹತ್ತಿರ ಬಳ್ಳಾರಿ | 77 | 77 |
| 18 | 22.12.2023 | ಬೀದರ | ಶಾರದರೂಟಶೆಟ್, ಮಾರುತಿ ಶೋರೂಂ ಹತ್ತಿರ, ಬೀದರ | 73 | 73 |
| 19 | 28.12.2023 | ಸಿಂಧನೂರು | ಸಿರಿ ರೆಸ್ಟೊರೆಂಟ್, ಶ್ರೀಪುರ ಜಂಕ್ಷನ್, ಗಂಗಾವತಿ ಮೆನ್ ರೋಡ್, ಸಿಂಧನೂರು | 230 | 230 |
| 20 | 29.12.2023 | ರಾಯಚೂರು | ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ ಆವರಣ ರಾಯಚೂರು | 85 | 85 |
| 21 | 29.12.2023 | ಕೊಪ್ಪಳ | ಶ್ರೀ ಚನ್ನಬಸವಸ್ವಾಮಿ ಕಲಾಮಂದಿರ, ವಿ.ಆರ್.ಎಲ್ ಆಫಿಸ್ ಹತ್ತಿರ, ಶಿವ ಚಿತ್ರಮಂದಿರದ ಹಿಂಭಾಗ, ಬನ್ನಿಗಿಡ ಕ್ಯಾಂಪ್, ಗಂಗಾವತಿ, ಜಿ॥ ಕೊಪ್ಪಳ | 275 | 275 |
| 22 | 02.01.2024 | ಕಲಬುರಗಿ | ಪ್ರಾಂತೀಯ ಕಛೇರಿ ಕಲಬುರಗಿ. ತರಬೇತಿ ಸಭಾಂಗಣ | 86 | 95 |
| 23 | 03.01.2024 | ಯಾದಗಿರಿ | ಹೋಟೆಲ್ ಮಾತೋಶ್ರೀ ಪ್ಯಾಮಿಲಿ ರಸ್ಟೊರೆಂಟ್ ಬಾಪು ನಗರ ಕೆಇಬಿ ಆಫಿಸ್ ಎದುರುಗಡೆ, ಶಹಾಪುರ ಜಿ॥ ಯಾದಗಿರಿ | 45 | 45 |
| 24 | 05.01.2024 | ವಿಜಯನಗರ | ಹೊಟೆಲ್ ಮಲ್ಲಿಗೆ, ಹಂಪಿ ರಸ್ತೆ, ವಿಜಯನಗರ | 83 | 114 |

| ಬೆಳಗಾವಿ ವಿಭಾಗ | | | | | |
|---|---|---|---|---|---|
| 25 | 26.12.2023 | ಹಾವೇರಿ | ರಜನಿ ಸಭಾಂಗಣ, ಮಾಗಾವಿ ಚೆಂಬರ್ಸ್ ಹಿಂಭಾಗ, ಹಾವೇರಿ | 96 | 114 |
| 26 | 27.12.2023 | ಬಾಗಲಕೋಟ | ಸಾಯಿ ಮಂದಿರ, ಬಸವೇಶ್ವರ ಇಂಜಿನಿಯ-ರಿಂಗ್ ಕಾಲೇಜ್ ಸರ್ಕಲ್ ಹತ್ತಿರ, ವಿದ್ಯಾಗಿರಿ, ಬಾಗಲಕೋಟ | 240 | 290 |
| 27 | 27.12.2023 | ಶಿರಸಿ, ಸಿದ್ದಾಪುರ, ಮುಂಡಗೋಳ, ಯಲ್ಲಾಪುರ, ದಾಂಡೇಲಿ, ಹಳಿಯಾಳ | ವಿನಾಯಕ ಸಭಾಭವನ, ಶಿರಸಿ. | 36 | 44 |
| 28 | 28.12.2023 | ಕುಮುಟಾ, ಹೊನ್ನವರ, ಭಟ್ಕಳ, ಅಂಕೋಲಾ, ಜೋಯಿಡಾ | ಮಹಾಲಕ್ಷ್ಮೀ ಕಂಫರ್ಟ್, ಕುಮುಟಾ | 86 | 94 |
| 29 | 29.12.2023 | ಗೋಕಾಕ ಮತ್ತು ಮೂಡಲಗಿ ತಾಲ್ಲೂಕುಗಳು | ರೋಟರಿ ಕ್ಲಬ್, ಗೋಕಾಕ | 120 | 131 |
| 30 | 29.12.2023 | ವಿಜಯಪುರ | ಶ್ರೀ ಸಂಗನಬಸವ ಮಂಗಲ ಕಾರ್ಯಾಲಯ, ಲಿಂಗದ ಗುಡಿ ರಸ್ತೆ, ವಿಜಯಪುರ | 259 | 318 |
| 31 | 30.12.2023 | ಧಾರವಾಡ | ಹುಬ್ಬಳ್ಳಿ ರೆಸಿಡೆನ್ಸಿ, ಹುಬ್ಬಳ್ಳಿ | 79 | 88 |
| 32 | 30.12.2023 | ಚಿಕ್ಕೋಡಿ, ಅಥಣಿ, ರಾಯಬಾಗ, ಕಾಗವಾಡ, ನಿಪ್ಪಾಣಿ ತಾಲ್ಲೂಕುಗಳು | ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ತರಬೇತಿ ಸಭಾಂಗಣ ಚಿಕ್ಕೋಡಿ | 172 | 178 |
| 33 | 02.01.2024 | ಬೈಲಹೊಂಗಲ, ಸವದತ್ತಿ, ರಾಮದುರ್ಗ ಮತ್ತು ಯರಗಟ್ಟಿ ತಾಲ್ಲೂಕುಗಳು | "ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಾಧುನವರ್ ಕಾಂಪ್ಲೆಕ್ಸ್, ಬೈಲಹೊಂಗಲ. | 47 | 81 |
| 34 | 03.01.2024 | ಹುಕ್ಕೇರಿ, ಬೆಳಗಾವಿ, ಖಾನಾಪೂರ ಮತ್ತು ಚನ್ನಮ್ಮನ ಕಿತ್ತೂರು ತಾಲ್ಲೂಕುಗಳು | ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ | 285 | 346 |
| 35 | 03.01.2024 | ಗದಗ | ನಕ್ಷತ್ರ ಹೋಟೆಲ್, ರೈತಭವನ ಹತ್ತಿರ, ಗದಗ. | 43 | 51 |

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮೊದಲ ಸೆಮಿಸ್ಟರ್ ಫಲಿತಾಂಶ

## DIPLOMA IN CO-OPERATIONS AND BANKING MANAGEMENT
## FIRST SEMESTER EXAMINATION JULY, 2023
## STATUS OF FIRST SEMESTER RESULT

**CENTRE CODE: 001 CENTRE: BENGALURU**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 80 | 70 | 10 | 87.5 % |

**CENTRE CODE: 002 CENTRE: UDUPI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 68 | 62 | 6 | 91.2 % |

**CODE: 003 CENTRE: SIRSI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 33 | 28 | 5 | 84.8 % |

**CODE: 004 CENTRE: SINDHANUR**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 58 | 34 | 24 | 58.6 % |

**CENTRE CODE: 005 CENTRE: JAMAKHANDI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 64 | 46 | 18 | 71.8 % |

**CENTRE CODE: 006 CENTRE: SHIVAMOGA**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 64 | 47 | 17 | 73.4 % |

**CENTRE CODE: 007 CENTRE: HUBBALLI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 54 | 34 | 20 | 62.9 % |

**CENTRE CODE: 008 CENTRE: BAGALKOTE**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 50 | 42 | 8 | 84.0 % |

**CENTRE CODE: 009 CENTRE: BELLARY**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 36 | 28 | 8 | 77.8 % |

**CENTRE CODE: 010 CENTRE: HOSAPETE**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 55 | 41 | 14 | 74.5 % |

**CENTRE CODE: 011 CENTRE: BELLAD BAGEWADI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 62 | 15 | 47 | 24.2 % |

# ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರ ಚಳುವಳಿಯ ಇತ್ತೀಚಿನ ವಿದ್ಯಮಾನಗಳ ಕುರಿತು ಸಮಾಲೋಚನಾ ಸಭೆಯಲ್ಲಿ ಭಾಗವಹಿಸುವ ಕುರಿತು ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055.
www.souharda.coop, Ph: 080-23378375-80, E-mail: souharda@souharda.coop

ಸಂಖ್ಯೆ:ಸಂಸ/ಶಿವಿ/ಸಸ/1/2023-24 /1316 ದಿನಾಂಕ:27.12.2023

ಇವರಿಗೆ :
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ
ಮಾನ್ಯ ಅಧ್ಯಕ್ಷರುಗಳಿಗೆ

ಮಾನ್ಯರೇ,

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರ ಚಳುವಳಿಯ ಇತ್ತೀಚಿನ ವಿದ್ಯಮಾನಗಳ ಕುರಿತು ಸಮಾಲೋಚನಾ ಸಭೆಯಲ್ಲಿ ಭಾಗವಹಿಸುವ ಕುರಿತು.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ತರಬೇತಿ/ ಶಿಕ್ಷಣ, ಪ್ರಚಾರ ಹಾಗೂ ನಿಯಂತ್ರಣ ಜವಾಬ್ದಾರಿಯನ್ನು ನಿರ್ವಹಿಸುವ ಶಾಸನಬದ್ಧವಾಗಿ ರಚನೆಗೊಂಡು ಕಾರ್ಯನಿರ್ವಹಿಸುತ್ತಿರುವ ಸಹಕಾರ ಕ್ಷೇತ್ರದ ಸಂಸ್ಥೆಯಾಗಿರುವುದು ತಮಗೆ ತಿಳಿದ ವಿಷಯವಾಗಿದೆ.

ರಾಜ್ಯದ ಸಹಕಾರ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವ ದೃಷ್ಟಿಯಿಂದ ಮಾನ್ಯ ಸಹಕಾರ ಸಚಿವರು ರಾಜ್ಯ ಸರ್ಕಾರದ ಮೂಲಕ ಒಂದು ಸಮಿತಿಯನ್ನು ರಚಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ನ್ನು ತಿದ್ದುಪಡಿ ಮಾಡಲು ತೀರ್ಮಾನಿಸಿರುತ್ತಾರೆ. ಆದ್ದರಿಂದ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಆಗಬೇಕಿರುವ ತಿದ್ದುಪಡಿಗಳ ಕುರಿತು ಹಾಗೂ ಸೌಹಾರ್ದ ಸಹಕಾರ ಚಳುವಳಿಯ ಇತ್ತೀಚಿನ ವಿದ್ಯಮಾನಗಳ ಕುರಿತು ಸಮಾಲೋಚಿಸಲು **"ಸೌಹಾರ್ದ ಸಹಕಾರಿಗಳ ರಾಜ್ಯ ಮಟ್ಟದ ಸಮಾಲೋಚನಾ ಸಭೆ"**ಯನ್ನು **ದಿನಾಂಕ 09.01.2024, ಮಂಗಳವಾರದಂದು "ಶ್ರೀ ಅಖಿಲ ಹವ್ಯಕ ಮಹಾಸಭಾ - ಹವ್ಯಕ ಭವನ", 11ನೇ ಅಡ್ಡರಸ್ತೆ, 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ರೈಲ್ವೆ ನಿಲ್ದಾಣದ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-560003 ಇಲ್ಲಿ ಬೆಳಿಗ್ಗೆ 10:30 ಗಂಟೆಗೆ** ನಡೆಸಲು ನಿರ್ಣಯಿಸಿದೆ.

ಸಹಕಾರಿಗಳ ಈ ಸಮಾಲೋಚನಾ ಸಭೆಯಲ್ಲಿ ತಮ್ಮ ಸೌಹಾರ್ದ ಸಹಕಾರಿ ಸಂಸ್ಥೆಯಿಂದ ಮಾನ್ಯ ಅಧ್ಯಕ್ಷರು ಭಾಗವಹಿಸಬೇಕಿದೆ. ಒಂದು ವೇಳೆ, ಅಧ್ಯಕ್ಷರು ಅನಿವಾರ್ಯ ಕಾರಣಗಳಿಂದಾಗಿ ಭಾಗವಹಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಂತಹ ಸೌಹಾರ್ದ ಸಹಕಾರಿ ಸಂಸ್ಥೆಯಿಂದ ಒಬ್ಬರು ನಿರ್ದೇಶಕರನ್ನು ಪ್ರತಿನಿಧಿಯಾಗಿ ಕಳುಹಿಸಬಹುದಾಗಿದೆ. ಈ ಸಮಾಲೋಚನಾ ಸಭೆಯಲ್ಲಿ ಭಾಗವಹಿಸುವಿಕೆಯನ್ನು ಖಚಿತಪಡಿಸಲು ಸಂಯುಕ್ತ ಸಹಕಾರಿಯಿಂದ ವಾಟ್ಸ್ ಆಪ್ ಮೂಲಕ ಕಳುಹಿಸಲಾದ **ಗೂಗಲ್ ಫಾರಂ** ಅನ್ನು ಭರ್ತಿ ಮಾಡಿ, **ದಿನಾಂಕ 03 ಜನವರಿ 2024ರೊಳಗೆ ಕಳುಹಿಸಿ,** ತಮ್ಮ ಭಾಗವಹಿಸುವಿಕೆಯನ್ನು ವ್ಯವಸ್ಥೆ ದೃಷ್ಟಿಯಿಂದ ಖಚಿತಪಡಿಸಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

Karnataka State Souharda Federal Co-operative Ltd. Reg. No. RSR / SOU / ACT / 136 / Regn. 051/2001-02 Dated: 04-01-2002 ★ Bengaluru ★

ತಮ್ಮ ವಿಶ್ವಾಸಿ
(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# 23ನೇ ಸ್ಥಾಪನಾ ದಿನ

## ರಾಜ್ಯದಲ್ಲಿ ಸಂಯುಕ್ತ ಸಹಕಾರಿಯು ಮಾದರಿ ಸಹಕಾರಿ ಸಂಸ್ಥೆಯಾಗಿ ಹೊರಹೊಮ್ಮಿ ಸರ್ವಸ್ಪರ್ಶಿಯಾಗಿ ಕಾರ್ಯನಿರ್ವಹಿಸುತ್ತಿದೆ - ಶ್ರೀ ಶರಣಗೌಡ ಜಿ. ಪಾಟೀಲ ವ್ಯವಸ್ಥಾಪಕ ನಿರ್ದೇಶಕರು




**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಂಸ್ಥಾಪನ ದಿನವಾಗಿ ದಿನಾಂಕ 04.01.2024 ರಂದು ಸಂಯುಕ್ತ ಸಹಕಾ–ರಿಯ "ಸೌಹಾರ್ದ ಸಹಕಾರಿ ಸೌಧ" ನಲ್ಲಿ ಆಚರಣೆ ಮಾಡಲಾಯಿತು. "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997" ರಾಜ್ಯದಲ್ಲಿ 1–1–2001 ರಿಂದ ಜಾರಿಗೆ ಬಂದ್ದು, ಜವಾಬ್ದಾರಿಯುತ ಸದಸ್ಯ, ಸ್ವಯಂ ಆಡಳಿತ ನಿರ್ವಹಣೆ, ಪ್ರಗತಿಪರ ಕಾರ್ಯಕ್ರಮಗಳು ಸೌಹಾರ್ದ ಸಹಕಾರಿಗಳ ಯಶಸ್ಸಿನ ತಳಹದಿ."ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ" ಸೌಹಾರ್ದ ಸಹಕಾರಿಗಳ ಧ್ಯೇಯವನ್ನಾಗಿಸಿಕೊಂಡು 2002ರಲ್ಲಿ ಸಂಯುಕ್ತ ಸಹಕಾರಿ ನೋಂದಣಿಯಾಗಿ ಕರ್ನಾಟಕ ರಾಜ್ಯ ಸೌಭಹಾರ್ದ ಸಂಯುಕ್ತ ಸಹಕಾರಿ ನಿಯಮಿತವು ಕಾರ್ಯನಿರ್ವಹಿಸುತ್ತಾ ಯಶಸ್ವಿಯಾಗಿ 23 ವರ್ಷಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ಸರಕಾರದ ಸಾರ್ವಜನಿಕರ ಹಾಗೂ ಸಹಕಾರಿಗಳ ಮನ್ನಣೆಯನ್ನುಗಳಿಸಿ ಉತ್ತಮ ಪ್ರಗತಿ ಸಾಧಿಸುತ್ತ ಮುನ್ನಡೆಯುತ್ತಿದೆ. ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು ಕಾರ್ಯನಿರ್ವಹಿಸುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮೇಲ್ವಿಚಾರಣೆ ಉಸ್ತುವಾರಿ ಹಾಗೂ ನಿಯಂತ್ರಣ ಜವಾಬ್ದಾರಿಯನ್ನು ನಿರ್ವಹಿಸುವ ಸಂಸ್ಥೆಯಾಗಿರುತ್ತದೆ.

ಕಾರ್ಯಕ್ರಮದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯು ಸರ್ವಸ್ಪರ್ಶಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸೌಹಾರ್ದ ಸಹಕಾರಿಗಳ ಏಳಿಗಾಗಿ ಸದಾ ಮಾರ್ಗದರ್ಶನವನ್ನು ನೀಡುತ್ತಿದೆ. ಕಾಲಕಾಲಕ್ಕೆ ತನ್ನ ಸದಸ್ಯ ಸಹಕಾರಿಗಳಿಗೆ ನಿರ್ದೇಶನವನ್ನು ನೀಡಿ ಸಹಕಾರಿಯ ಯಶಸ್ಸಿಗೆ ಶ್ರಮಿಸುತ್ತಿದೆ. ಅಲ್ಲದೆ ಸದಸ್ಯರಿಂದಲೇ ಆಯ್ಕೆಗೊಳ್ಳುವ ಪ್ರತಿನಿಧಿಗಳಿಂದಲೇ ಆಡಳಿತ ಮಂಡಳಿಯವರು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾಗುವ ಶಾಸನಬದ್ಧ ಮಾರ್ಗದರ್ಶನಗಳನ್ನು ನೀಡುವ ದೇಶದ ಏಕೈಕ ಸಂಸ್ಥೆಯಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಸಾರಥ–'ವನ್ನು ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅವಶ್ಯಕವೆನಿಸುವ ಎಲ್ಲ ಕಾನೂನು ಬದ್ಧ ಹಾಗೂ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಶಿಕ್ಷಣ, ತರಬೇತಿ, ಪ್ರಚಾರ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದರು–ಸಂಯುಕ್ತ ಸಹಕಾರಿಯ ಬೆಳವಣಿಗೆ ಕುರಿತು ಹಲವಾರು ಸಿಬ್ಬಂದಿವರ್ಗದವರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

---

# ಕಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

ದಿನಾಂಕ 07 ಡಿಸೆಂಬರ್ 2023 ರಂದು ಹೋಟೆಲ್ ಸಾಮ್ರಾಟ್ ವಿನಾಯಕ ಸಭಾ ಭವನ, ಯಲ್ಲಾಪುರ ರಸ್ತೆ, ಶಿರಸಿ, ಇಲ್ಲಿ ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ, ಮುಂಡಗೋಡ ಮತ್ತು ಜೋಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರುಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜನೆ ಮಾಡಲಾಗಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ ಜೆ ನಾಯಕ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಂ–ಯುಕ್ತ ಸಹಕಾರಿ ನಿ., ರವರು ವಹಿಸಿದ್ದರು ಸದರಿ ಸಭೆಯಲ್ಲಿ ಕಲಂ 34ರ ಮಾಹಿತಿ ಸಲ್ಲಿಸದಿರುವ ಸಹಕಾರಿಗಳ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನೆ ಬಾಕಿ ಇರುವ ಸಹಕಾರಿಗಳ ಅವಲೋಕನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡಿಲ್ಲದ ಸಹಕಾ–ರಿಗಳಿಗೆ ಪಾವತಿಸುವಂತೆ ಮಾಹಿತಿ ನೀಡಲಾಯಿತು. ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಕಳುಹಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿ ಮಾಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಸದಸ್ಯ ಸಹಕಾರಿ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ಸದರಿ ಸಭೆಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 07 ಡಿಸೆಂಬರ್ 2023 ರಂದು ಹೋಟೆಲ್ ಸಾಮ್ರಾಟ್ ವಿನಾಯಕ ಸಭಾ ಭವನ, ಯಲ್ಲಾಪುರ ರಸ್ತೆ, ಶಿರಸಿ, ಇಲ್ಲಿ ಶಿರಸಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರುಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜನೆ ಮಾಡಲಾಗಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ ಜೆ ನಾಯಕ

ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರು ವಹಿಸಿದ್ದರು ಸದರಿ ಸಭೆಯಲಿ ಕಲಂ 34ರ ಮಾಹಿತಿ ಸಲ್ಲಿಸದಿರುವ ಸಹಕಾರಿಗಳ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನೆ ಬಾಕಿ ಇರುವ ಸಹಕಾರಿಗಳ ಅವಲೋಕನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡಿಲ್ಲದ ಸಹಕಾರಿಗಳಿಗೆ ಮಾಹಿತಿ ನೀಡುವುದು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಕಳುಹಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿ ಮಾಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಸದಸ್ಯ ಸಹಕಾರಿ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ಸದರಿ ಸಭೆಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೊಪ್ಪಳ** : ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ ಗಂಗಾವತಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ನೇರವೇರಿಸಿದರು.



**ಮಂಡ್ಯ** : ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯು ದಿನಾಂಕ 26/12/2023ರ ಮಂಗಳವಾರದಂದು ಮನೆ ಮನೆಗೆ ಸೌಹಾರ್ದ ಬಸವಜ್ಯೋತಿ 140ನೇ ಧಾರ್ಮಿಕ ಕಾರ್ಯಕ್ರಮವು ದುದ್ದ ಹೋಬಳಿಯ ಬೇವುಕಲ್ಲು ಗ್ರಾಮದಲ್ಲಿ ನೇರವೇ–ರಿತು. ಈ ಸಂದರ್ಭದಲ್ಲಿ 2024ನೇ ಸಾಲಿನ ಕ್ಯಾಲೆಂಡರ್ ನ್ನು ಕಾರ್ಯಕ್ರಮದ ಅಧ್ಯಕ್ಷರಾದ ಎಸ್ ನಾಗರಾಜು ರವರ ನೇತೃತ್ವದಲ್ಲಿ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಷ.ಬ್ರ.ಶ್ರೀ ಮುಮ್ಮಡಿ ಷಡಕ್ಷರ ದೇಶಿಕೇಂದ್ರಶಿವಾಚಾರ್ಯ ಸ್ವಾಮಿಗಳು ಶ್ರೀ ವೀರ ಸಿಂಹಾಸನ ಸಂಸ್ಥಾನ ಮಠ, ಧನಗೂರು ಮಳವಳ್ಳಿ ತಾ!! ಹಾಗೂ ದುದ್ದ ಹೋಬಳಿಯ ಎಲ್ಲಾ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದು ಹಾಗೂ ನಮ್ಮ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರ ಸಮ್ಮುಖದಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು



**ಮಂಡ್ಯ** : ಸಕ್ಕರೆನಾಡು ಪತ್ತಿನ ಸೌಹಾರ್ದ ಸಹಕಾರಿಯ 2024ರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ** ; ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ. ಇದರ 2024ರ ಕ್ಯಾಲೆಂಡರ್ ಅನ್ನು ಸಮುದಾಯದ ಸರ್ಕಾರಿ ನೌಕರರು ಹಾಗೂ ಮಂಡ್ಯ ಜಿಲ್ಲೆಯ ಅಧಿಕಾರಿಗಳಾದ ಶ್ರೀಮತಿ ಹೇಮಾವತಿಪ್ರಸನ್ನ ಮೇಡಂ ರವರು ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಬಿ ಟಿ ಗುರುರಾಜ್, ಭೈರವ ಸೌಹಾರ್ದ ಅಧ್ಯಕ್ಷರಾದ ವೆಂಕಟೇಗೌಡ, ನಿರ್ದೇಶಕರುಗಳಾದ ರಮೇಶ್ ಮಾಯಪ್ಪನಹಳ್ಳಿ, ಮಂಜುನಾಥ್ ಮಾರಾಳಗಲ ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಯಲ್ಲಿ 24ನೇ ಸೌಹಾರ್ದ ಸಹಕಾರಿ ದಿನಾಚರಣೆ



**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತಾಶ್ರಯದಲ್ಲಿ ನಡೆದ 24ನೇ ವರ್ಷದ ಸಹಕಾರಿ ದಿನಾಚರಣೆಯನ್ನು ದಿನಾಂಕ 01.01.2024 ರಂದು ಕೇಂದ್ರ ಕಛೇರಿಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಸಮ್ಮುಖದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಬೆಳಗ್ಗೆ 9.00ಗಂಟೆಗೆ ಧ್ವಜಾರೋಹಣ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಕಾರ್ಯಕ್ರಮವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟಿಲ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾನ್ಯ ಉಪಪ್ರಧಾನ ವ್ಯವಸ್ಥಾಪರಾದ ಶ್ರೀ ನಾರಾಯಣ ಹೆಗ್ಡೆ ಹಾಗೂ ಮಾನ್ಯ ಉಪಪ್ರಧಾನ ವ್ಯವಸ್ಥಾಪಕಿಯವರಾದ ಶ್ರೀಮತಿ ಶೊಭರವರು ಪಾಲ್ಗೊಂಡಿದ್ದರು. ಧ್ವಜಾರೋಹಣದ ನಂತರದಲ್ಲಿ ಸಹಕಾರ ಗೀತೆಯನ್ನು ಎಲ್ಲಾ ಸಿಬ್ಬಂದಿ ವರ್ಗದವರು ಒಟ್ಟಿಗೆ ಹಾಡಿದರು. ನಂತರದಲ್ಲಿ ಸಹಕಾರ ಬಗ್ಗೆ ಸಿಬ್ಬಂದಿಗಳು ಅವರವರ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ನಂತರದಲ್ಲಿ ಸಿಬ್ಬಂದಿಯವರಿಗಾಗಿ ರಂಗೋಲಿ ಸ್ಪರ್ಧೆ ಏರ್ಪಡಿಸಿದ್ದರು ಹಾಗೂ ಕ್ವಿಜ್ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ದೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ನೀಡಲಾಯಿತು. ರಂಗೋಲಿ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಶ್ರೀಮತಿ ದಿವ್ಯ ಟಿ ಮತ್ತು ಎರಡನೇ ಬಹುಮಾನವನ್ನು ಶ್ರೀಮತಿ ಶೋಭ ಆರ್ ಹಾಗೂ ಮೂರನೇ ಬಹುಮಾನವನ್ನು ಶ್ರೀಮತಿ ಸವಿತ ಎನ್ ಇ ಹಾಗೂ ಸಮಾಧಾನಕರ ಬಹುಮಾನವನ್ನು ಶ್ರೀಮತಿ ವಿಜಯಶ್ರೀ ಪಿ ಮತ್ತು ಶ್ರೀಮತಿ ಕವಿತ ಆರ್ ಇವರುಗಳು ಪಡೆದುಕೊಂಡರು. ಹಾಗೂ ಕ್ವಿಜ್ ಕಾರ್ಯಕ್ರಮದಲ್ಲಿ ಮೊದಲ ಬಹುಮಾನವನ್ನು ಶ್ರೀ ವೆಂಕಟೇಶ್ ರಾಥೋಡ್ ಮತ್ತು ಎರಡನೇ ಬಹುಮಾನವನ್ನು ಶ್ರೀಮತಿ ರೇಣುಕಾ ಎಂ ವಿ ಹಾಗೂ ಮೂರನೇ ಬಹುಮಾನವನ್ನು ಶ್ರೀ ಬಲರಾಮ್ ಎನ್ ಹಾಗೂ ಸಮಾಧಾನಕರ ಬಹುಮಾನವನ್ನು ಶ್ರೀ ಶಂಕರ್ ಎಸ್. ರವರು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಕೇಂದ್ರ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಈ-ಸ್ಟಾಂಪಿಂಗ್, ಬೆಂಗಳೂರು ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಭಾಗವಹಿಸಿದ್ದರು. ಇದೇ ರೀತಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಿದ ವರದಿಗಳನ್ನು ಸ್ವಾಭಿಮಾನಿ ಸಹಕಾರಿ ಡಿಜಿಟಲ್ ಪ್ರಕಟಣೆಯಲ್ಲಿ ಪ್ರಕಟಿಸಲಾಗಿದೆ.



**ಬೆಳಗಾವಿ** : ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರವೀಂದ್ರ ಪಾಟೀಲ ರವರು ನೆರವೇರಿಸಿದರು.



**ಬೀದರ** : ದಿನಾಂಕ 01.01.2024 ರಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ಇವರು ನೆರವೇರಿಸಿದರು.



**ಮೈಸೂರು** : ದಿನಾಂಕ 01.01.2024 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಹೆಚ್.ವಿ ರಾಜೀವ್ ಇವರು ನೆರವೇರಿಸಿದರು.

**ವಿಜಯನಗರ** : ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಹಾಗೂ ಆದರ್ಶ ಬ್ಯಾಂಕಿನ ನಿರ್ದೇಶಕರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 24ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಚಾಮರಾಜನಗರ :** ದಿನಾಂಕ 01.01.2024 ರಂದು ಜೈಭೀಮ್ ಬಿಸಿನೆಸ್ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಹೊಸಪೇಟೆ :** ದಿನಾಂಕ 01.01.2024 ರಂದು ಪ್ರಗತಿಕೃಷ್ಣ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 01.01.2024ರಂದು ಶ್ರೀ ಮಾತಾ ಚೌಡೇಶ್ವರಿ ಸೌಹಾರ್ದ ಲಕ್ರೆಡಿಟ್ ಕೋ-ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ವತಿಯಿಂದ ಸಹಕಾರಿ ಬಾವುಟ ಹಾರಿಸುವುದರ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಡಗು :** ದಿನಾಂಕ 01.01.2024 ರಂದು ನಂ 566 ಕೊಡವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ. ಲಿ, ವಿರಾಜಪೇಟೆ ಇದರ ಕಛೇರಿಯಲ್ಲಿ ಸೌಹಾರ್ದ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನೆಲ್ಲಮಕ್ಕಡ ಪಿ. ಮುತ್ತಣ್ಣ, ಉಪಾಧ್ಯಕ್ಷರಾದ ಶ್ರೀ ಚೇಂದಂಡ ವಸಂತ ಕುಮಾರ್ ಹಾಗೂ ಆಡಳಿತ ಮಂಡಳಿಯ ಮಾನ್ಯ ನಿರ್ದೇಶಕರು ಹಾಜರಿದ್ದರು.



**ಉಡುಪಿ :** ದಿನಾಂಕ 01.01.2024 ರಂದು ಹಂಸ ಚೈತನ್ಯ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉಡುಪಿ :** ದಿನಾಂಕ 01.01.2024 ರಂದು ದೈವಜ್ಞ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಧ್ವಜಾರೋಹಣವನ್ನು ಶ್ರೀ ಕೆ ರವೀಂದ್ರ ಶೇಟ್ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ, ಯಲಹಂಕ ಉಪನಗರ, ಬೆಂಗಳೂರು ಕೇಂದ್ರ ಕಛೇರಿ ಬೈರತಿ ಶಾಖೆ ಮತ್ತು ವರ್ತೂರು ಶಾಖೆಯಲ್ಲಿ ದಿನಾಂಕ 01.01.2024 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಯುತ.ಎಂ.ಮುನಿರೆಡ್ಡಿ ರವರು ಹಾಗೂ ಉಪಾಧ್ಯಕ್ಷರಾದ ಶ್ರೀಯುತ.ಎಸ್.ಎನ್.ಸಂಪತ್‌ಕುಮಾರ್ ರವರು ಹಾಗೂ ಸಹಕಾರಿಯ ನಿರ್ದೇಶಕರುಗಳು ಧ್ವಜಾರೋಹಣ ನೆರವೇರಿಸಿದರು. ಸಹಕರಿಯ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



**ಬೆಳಗಾವಿ :** ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿಯಲ್ಲಿ ದಿನಾಂಕ:01–01–2024 ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆ ನಿಮಿತ್ತ ಸಹಕಾರ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಯಪಾಲ ಪಾ ಚೌಗಲಾ ಇವರು ನೇರವೆರಿಸಿದರು ಪ್ರಧಾನ ವ್ಯವಸ್ಥಾಪಕರಾದ ಆನಂದ ಭೂ ಚೌಗಲಾ ಸೌಹಾರ್ದ ಕಾಯ್ದೆಗಳ ಬಗ್ಗೆ ತಿಳುವಳಿಕೆ ನೀಡಿದರು ನಿರ್ದೇಶಕರಾದ ಶ್ರೀ ಜಯಪಾಲ ಚೌಗಲಾ, ಪ್ರಕಾಶ ಚೌಗಲಾ ಹಾಗೂ ಸಿಬ್ಬಂದಿ ವರ್ಗದವರೂ ಹಾಜರಿದ್ದರು.




ದಿನಾಂಕ 01.01.2024 ರಂದು ಮಂಗಳಾ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಯಿತು.




ಮಂಡ್ಯ : ಮಂಡ್ಯದ ಸಾಮಿಯಾನ ಮಾಲೀಕರ ಸೌಹಾರ್ದ ಸಹಕಾರ ಸಂಘದಿಂದ ಸೌಹಾರ್ದ ಸಹಕಾರ ದಿನಾಚರಣೆಯನ್ನು ದಿನಾಂಕ 01.01.2024 ರಂದು ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಆಚರಿಸಲಾಯಿತು. ಧ್ವಜಾರೋಹಣವನ್ನು ಸಂಘದ ಅಧ್ಯಕ್ಷರಾದ ಶ್ರೀ ಎ.ಸಿ . ರಮೇಶರವರು ಹಾಗೂ ನಿರ್ದೇಶಕರುಗಳು ಹಾಗೂ ಸಿಇಒ ಎಚ್ ಎಂ ಬಸವರಾಜ್ ರವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಯಿತು ಕಾರ್ಯಕ್ರಮದಲ್ಲಿ ಧ್ವಜಾರೋಹಣ ಸಹಕಾರದ ಪಿತಾಮರಾದ ಪಾಟೀಲ್ ರವರ ಭಾವಚಿತ್ರಕ್ಕೆ ಪುಸ್ಪಾರ್ಚನೆ ಮಾಡಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.




ದಿನಾಂಕ 01.01.2024 ರಂದು ಮಹಾಲಿಂಗೇಶ್ವರ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉಡುಪಿ :** ದಿನಾಂಕ 01.01.2024 ರಂದು ತಾಯಿ ಮೂಕಾಂಬಿಕಾ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಲಕ್ಷ್ಮಣ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಉಡುಪಿ :** ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ (ನಿ) ಅಂಬಲ್ ಪಾಡಿ ಉಡುಪಿ ಇದರ ವತಿಯಿಂದ ಸ್ಪಂದನಾ ದಿವ್ಯಾಂಗರ ಸಂರಕ್ಷಣೆ ಕೇಂದ್ರ ನೇಜಾರ್ ಇಲ್ಲಿಗೆ ಒಂದು ಕಪಾಟು ನೀಡಿ, ದಿವ್ಯಾಂಗರೊಂದಿಗೆ ಉಪಹಾರ ಮಾಡುವುದರ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆ ಹೊಸಹರುಷದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ನವೀನ್ ಚಂದ್ರ ಭಂಡಾರಿ ,ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಾಲತಿ ಅಶೋಕ್ ಭಂಡಾರಿ, ನಿರ್ದೇಶಕರಾದ ಸದಾಶಿವ ಬಂಗೇರ ,ಶೇಖರ್ ಸಾಲಿಯನ್, ರಾಜು ಸಿ ಭಂಡಾರಿ , ಉಪ ನಿರ್ದೇಶಕರಾದ ಸತೀಶ್ ಸುವರ್ಣ ,ಭರತ್ ಸುವರ್ಣ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ದಿನಾಂಕ 01–01–2024 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗೋಪಾಲ್. ಎಸ್.ಜಿ, ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ. ಶ್ರೀ ಹರಿಕೃಷ್ಣ ಯು ವ್ಯವಸ್ಥಾಪಕರಾದ ಶ್ರೀ ಈಶ್ವರಯ್ಯ ಎಸ್ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




**ಚಾಮರಾಜನಗರ :** ದಿನಾಂಕ 01.01.2024 ರಂದು ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಮಂಗಳೂರು :** ದಿನಾಂಕ 01.01.2024 ರಂದು ಅಶ್ವಿನಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಉಡುಪಿ :** ದಿನಾಂಕ 01.01.2024 ರಂದು ವಿಶ್ವಭಾರತಿ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 01.01.2024ರಂದು ಶ್ರೀ ಕಾಳಿಕಾಂಬ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇವರ ವತಿಯಿಂದ ಸಹಕಾರಿ ಬಾವುಟ ಹಾರಿಸುವುದರ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 01.01.2024ರಂದು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ನಿ, ಎಸ್.ಎಸ್. ಪುರಂ ಶಾಖೆ, ತುಮಕೂರು ಇಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರ ಬಾವುಟ ಹಾರಿಸುವುದರ ಮೂಲಕ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ, ಒಕ್ಕೂಟದ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ಶ್ರೀ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 01-01-2024 ರಂದು ಶ್ರೀ ಪದ್ಮಾವತಿ ಸೌಹರ್ದ ಸಹಕಾರಿ ನಿಯಮಿತ, ಟಿ. ದಾಸರಹಳ್ಳಿ, ಬೆಂಗಳೂರು ಇದರ ಆಡಳಿತ ಮಂಡಳಿ ವತಿಯಿಂದ "ಅಮ್ಮನ ಮಡಿಲು ಟ್ರಸ್ಟ್" ಗಂಗೊಂಡನಹಳ್ಳಿ, ಬೆಂಗಳೂರು ಇಲ್ಲಿ ನಿರಾಶ್ರೀತರ ಶಿಬಿರ ಇದ್ದು ಶಿಬಿರಿದಲ್ಲಿರುವ ನಿರ್ವಶಿತರು ಸುಮಾರು 70 ಜನಗಳಿಗೆ ಮಧ್ಯಾಹ್ನದ ಉಟದ ವ್ಯವಸ್ಥೆಮಾಡಿ ಹಸಿದ ಹೊಟ್ಟೆಗೆ ಒಂದ್ಹೊತ್ತಿನ ಹಸಿವು ನೀಗಿಸುವ ನಿಟ್ಟಿನಲ್ಲಿ ಈ ಮೂಲಕ ಸಹಕಾರಿಯು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು.



**ಮಂಡ್ಯ :** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯಿಂದ ದಿನಾಂಕ 01/01/2024ರ ಸೋಮವಾರದಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರಿಯ ಉಪಾಧ್ಯಕ್ಷರಾದ ಡಿ.ದ್ಯಾವಣ್ಣ ರವರ ನೇತೃತ್ವದಲ್ಲಿ ಆಚರಣೆ ಮಾಡಲಾಯಿತು. ಈ ಸಂಧರ್ಭದಲ್ಲಿ ನಮ್ಮ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರ ಸಮ್ಮುಖದಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.



**ಮಂಗಳೂರು :** 2024ನೇ ವರ್ಷಕ್ಕೆ ಸೌಹಾರ್ದ ಸಹಕಾರಿಗೆ ಪಾದಾರ್ಪಣೆ ಆದ ಸಂದರ್ಭದಲ್ಲಿ ಮಹಿಳಾ ಅಭ್ಯುದಯ ಸಹಕಾರಿ ಸಂಘ (ನಿ.) ಅಳಪೆ ಮಂಗಳೂರು ಇಲ್ಲಿ ದಿನಾಂಕ 01-01-2024 ರಂದು ಸಹಕಾರಿಯ ಅಧ್ಯಕ್ಷರಾದ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ಹಾಗೂ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದ ಉಪಸ್ಥಿತಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರ ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಸದಸ್ಯೆಗೆ ಆರೋಗ್ಯ ಸಮಸ್ಯೆ ಇದ್ದ ಕಾರಣ ಅವರಿಗೆ ಸಹಕಾರಿಯ ವತಿಯಿಂದ ರೂ.5000 ದೇಣಿಗೆಯನ್ನು ನೀಡಲಾಯಿತು.




**ರಾಯಚೂರು :** ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ರಾಯಚೂರು ಸಹಕಾರಿಯಲ್ಲಿ ದಿನಾಂಕ 01.01.2024 ರಂದು ಶ್ರೀ ಮಲ್ಲಿಕಾರ್ಜುನಯ್ಯ ಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸೌಹಾರ್ದ ಸಹಕಾರಿಯ ದಿನಾಚರಣೆಯಲ್ಲಿ ಶ್ರೀ ಪರಮೇಶ್ವರ ಸಾಲಿಮಠ, ಶ್ರೀ ವಿರೂಪಾಕ್ಷಯ್ಯ ಸ್ವಾಮಿ, ಶ್ರೀ ಬಸವಪ್ರಭು ಹಿರೇಮಠ, ಶ್ರೀ ವಸಂತಕುಮಾರ್, ಮಲ್ಲಿಕಾರ್ಜುಯ್ಯ ನಂದಿಕೋಲ್ ಮಠ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಹಕಾರಿಯ ಸಿಬ್ಬಂದಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಉತ್ತರ ಕನ್ನಡ :** ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಸಿದ್ದಾಪುರ (ಉ.ಕ) ಈ ಸಂಘದ ಮುಂದಿನ 5 ವರ್ಷಗಳ ಅವಧಿಗೆ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಜರುಗಿರುತ್ತದೆ. ದಿನಾಂಕ 17–12–2023 ರಂದು, ಮಂಡಳಿಯ ಚುನಾವಣೆಗೆ ನಾಮಪತ್ರ ಸಲ್ಲಿಸಿದ ಎಲ್ಲಾ 12 ಸ್ಪರ್ಧಿಗಳು ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಿರುತ್ತಾರೆ.

ದಿನಾಂಕ 29–12–2023 ರಂದು ಸಂಘದ ಪ್ರಧಾನ ಕಛೇರಿಯಲ್ಲಿ ನಡೆದ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಆನಂದ ಈರಾ ನಾಯ್ಕ್, ಮತ್ತು ಉಪಾಧ್ಯಕ್ಷರಾಗಿ ಶ್ರೀ ವೆಂಕಟೇಶ ಬಿಕ್ಕು ಶೇಟ್ ರವರುಗಳು ಮುಂದಿನ 5 ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾ ರಿಟರ್ನಿಂಗ್ ಅಧಿಕಾರಿಯಾದ ಶ್ರೀ ಟಿ.ವಿ ಶ್ರೀನಿವಾಸ್ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಘೋಷಣೆ ಮಾಡಿರುತ್ತಾರೆ.

## ಶ್ರೀ ಮಲೈಮಹದೇಶ್ವರ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ



ಶ್ರೀ ಎನ್ ವೀರಪ್ಪ
ಅಧ್ಯಕ್ಷರು



ಶ್ರೀ ವೃಷಭೇಂದ್ರಸ್ವಾಮಿ
ಉಪಾಧ್ಯಕ್ಷರು



**ಬೆಳಗಾವಿ :** ದಿನಾಂಕ 25.12.2023 ರಂದು ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸದಲಗಾ ಸಹಕಾರಿಯ 5 ವರ್ಷಗಳ ಅವಧಿಗೆ ನಿರ್ದೇಶಕ ಮಂಡಳಿ ಚುನಾವಣೆಯು ಜರುಗಿದ್ದು ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಅದೇ ರೀತಿ ದಿನಾಂಕ 03.01.2024 ರಂದು ಜರುಗಿದ ಪದಾಧಿಕಾರಿಗಳ ಚುನಾವಣೆಯಲಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಪ್ರಕಾಶ ಜಿನಗೌಡಾ ಪಾಟೀಲ ಮತ್ತು ಉಪಾಧ್ಯಕ್ಷರಾಗಿ ಶ್ರೀ ಉದಯಕುಮಾರ ಬಾಬಾಸಾಬ ಪಾಟೀಲ ಇವರು ಆಯ್ಕೆಯಾಗಿರುತ್ತಾರೆಂದು ರಿಟರ್ನಿಂಗ ಅಧಿಕಾರಿ ಶ್ರೀ ಎಸ್.ಪಿ ಪೂಜಾರಿ ಇವರು ಘೋಷಿಸಿರುತ್ತಾರೆ.



**ಚಿಕ್ಕಮಗಳೂರು :** ದಿನಾಂಕ 01.01.2024 ರಂದು ಸಮಾನ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರಾದ ಹಾಗೂ ಮಾನ್ಯ ಶಾಸಕರಾದ ಶ್ರೀಯುತ ಹೆಚ್. ತಮ್ಮಯ್ಯ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ರುಕ್ಮಿಣಿಯಮ್ಮ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಚಿಕ್ಕಮಗಳೂರು ಮತ್ತು ಅರಳಗುಪ್ಪೆ ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರಿಗೆ ಭೇಟಿ ನೀಡಿ ಅಲ್ಲಿನ ರೋಗಿಗಳಿಗೆ ಹಣ್ಣು ಹಂಪ್ಪಲು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಕೆ.ಬಿ ದೇವರಾಜ್ ಇವರ ವಹಿಸಿದರು.



**ತುಮಕೂರು :** ದಿನಾಂಕ 01.01.2024 ರಂದು ಎಸ್.ಎಸ್.ವಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕ್ಯಾಲೆಂಡರ್ ಬಿಡುಗಡೆ



**ಮೈಸೂರು :** ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕರ್ಣಾಟಕ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರವರಾದ ಶ್ರೀ ಡಾ ॥ ಅರುಣ್ ರವರು ದಿನಾಂಕ 19/12/2023 ನೇ ಮಂಗಳವಾರ ಬಿಡುಗಡೆಗೊಳಿಸಿದರು. ಈ ವೇಳೆ ಅಧ್ಯಕ್ಷರಾದ ಪಿ.ಕೆ.ಸೋಮಣ್ಣ, ಉಪಾಧ್ಯಕ್ಷರಾದ ಕೆ.ಡಿ.ಕಾರ್ಯಪ್ಪ, ಮುಖ್ಯಕಾರ್ಯನಿರ್ವಹಣಾಧಿಕಾ–ರಿಯಾದ ಬಿ.ಯು.ನಂಜಪ್ಪ, ನಿರ್ದೇಶಕರಾದ ಎಂ.ಎಂ.ನಾಣಯ್ಯ, ಸಿ.ಪಿ.ಪಾವನ, ಎಂ.ಎಸ್.ಸುಬ್ರಮಣಿ, ಬ್ಯಾಂಕಿನ ಸೀನಿಯರ್ ಮ್ಯಾನೇಜರ್ ಅಜಿತ್, ಬ್ರಾಂಚ್ ಮ್ಯಾನೇಜರ್ ಸುರೇಶ್ ಹಾಗೂ ಹಿರಿಯ ಅಧಿಕಾರಿಗಳು ಹಾಜರಿದ್ದರು.



**ಚಾಮರಾಜನಗರ :** ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿಯಮಿತ ಮರಿಯಾಲದಲ್ಲಿ "ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ಮರಿಯಾಲ ಶ್ರೀಮಠದ ಅಧ್ಯಕ್ಷರು ಹಾಗೂ ಸಹಕಾರಿಯ ಸಂಸ್ಥಾಪಕರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳು ಸಹಕಾ–ರಿಯ ಧ್ವಜಾರೋಹಣ ನೆರವೇರಿಸಿದ್ದರು ಹಾಗೂ ಸಹಕಾರಿಯ ನೂತನ ವರ್ಷದ ದಿನದರ್ಶಿಕೆ (ಕ್ಯಾಲೆಂಡರ್) ಯನ್ನು ಬಿಡುಗಡೆ ಮಾಡಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಗೌರವ ಅಧ್ಯಕ್ಷರಾದ ಶ್ರೀ ಕುಮಾರಸ್ವಾಮಿಗಳು ಅಧ್ಯಕ್ಷರಾದ ಬಿ. ನಂಜುಂಡಸ್ವಾಮಿ, ಉಪಾಧ್ಯಕ್ಷರಾದ ಜಿ. ಪ್ರಸನ್ನ ನಿರ್ದೇಶಕರುಗಳಾದ ಪಿ. ಮಹದೇವಸ್ವಾಮಿ,ಹೆಚ್. ಆರ್. ಮಂಜು,ಶ್ರೀನಿವಾಸ್, ನಾಗೇಶ್,ಎಂ. ಆರ್. ಸ್ವಾಮಿ, ಶ್ರೀಮತಿ ಸೀತಾಲಕ್ಷ್ಮಿ, ಶ್ರೀಮತಿ ಶ್ವೇತಾ, ಸಿಇಓ ಶ್ರೀಮತಿ ಸೌಮ್ಯ ಹಾಗೂ ದಿನದರ್ಶಿಕೆ ಪ್ರಯೋಜ–ಕರಾದ ಜಗದೀಶ್ ಹಾಗೂ ರವಿ, ದೀಪು ಹಾಗೂ ವೀರಭದ್ರಸ್ವಾಮಿಗಳು ಉಪಸ್ಥಿತರಿದ್ದರು.



**ಹೊಸಪೇಟೆ :** ದಿನಾಂಕ 25.12.2023 ರಂದು ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಹೊಸಪೇಟೆಯ ಅಧ್ಯಕ್ಷರಾದ ಶ್ರೀ ಜಿ ಭರಮಪ್ಪ ಇವರು 2024ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು.



**ಮೈಸೂರು :** ಭುವನೇಶ್ವರಿ ಸೌಹಾರ್ದ ಸಹಕಾರಿಯ 2024ರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ್ ಇವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿ ಆಡಳಿತ ಮಂಡಳಿ ಸದಸ್ಯರ ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಪಾಂಡವಪುರ :** ಪಾಂಡವಪುರ ಗಾಣಿಗರ ಸೌಹಾರ್ದ ಕಚೇರಿಯಲ್ಲಿ 2024 ನೆಯ ಸಾಲಿನ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಇತರ ನಿರ್ದೇಶಕರುಗಳು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ಚಾಮರಾಜನಗರ :** "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ರವರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



**ಹಾಸನ :** ಹಾಸನ ಜಿಲ್ಲಾ ದರ್ಪಣ ಕನ್ನಡ ದಿನ ಪತ್ರಿಕೆ ವತಿಯಿಂದ 8ನೇ ವರ್ಷದ ಕ್ಯಾಲೆಂಡರ್‌ನ್ನು ವಿಜ್ಞಾನ ಪರಿಷತ್ ರಾಜ್ಯಾಧ್ಯಕ್ಷರಾದ ಹುಲಿಕಲ್ ನಟರಾಜ್, ವೈದ್ಯೆ ಡಾ॥ ಸೌಮ್ಯ ಮಣಿ, ಮಕ್ಕಳ ತಜ್ಞ ಡಾ॥ ದಿನೇಶ್ ಬೈರೇಗೌಡ, ನಗರಸಭೆ ಆಯುಕ್ತ ಸತೀಶ್ ಕುಮಾರ್, ವಿಜ್ಞಾನ ಪರಿಷತ್ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ್, ದರ್ಪಣ ಪತ್ರಿಕೆ ಸಂಪಾದಕರಾದ ಗೋಪಾಲ್, ದರ್ಪಣ ಸೌಹಾರ್ದ ಸಂಘದ ಅಧ್ಯಕ್ಷರಾದ ರೂಪಾ, ವಕೀಲರಾದ ಡಿ.ಟಿ.ಪ್ರಸನ್ನ, ಪರ್ತ್ರಕರ್ತ ಸ್ವಾಗತ್ ಹಾಜರಿದ್ದರು.



**ಮಂಡ್ಯ :** ದಿನಾಂಕ 22-12-2023 ನೆಯ ಶುಕ್ರವಾರದಂದು ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ವತಿಯಿಂದ 2024 ನೆಯ ವರ್ಷದ ದಿನಚರಿಯನ್ನು ಸಂಘದ ಕಛೇರಿಯಲ್ಲಿ ಮಂಡ್ಯ ತಾಲ್ಲೂಕು ಅವ್ವೇರಹಳ್ಳಿಯ ಪಟ್ಟದ ಮಠಾಧ್ಯಕ್ಷರಾದ ಶ್ರೀ.ಶ್ರೀ.ಶ್ರೀ ಶಿವಲಿಂಗ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಬಿಡುಗಡೆ ಮಾಡಲಾಯಿತು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಮೇಶರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಇತರ ಸಹಕಾರಿಗಳ ಆಧ್ಯಕ್ಷರುಗಳಾದ ಶ್ರೀ ಗುರುರಾಜ್ , ಸಿದ್ದಲಿಂಗು ವಹಿಸಿದ್ದರು ಈ ಸಮಾರಂಭಕ್ಕೆ ಆಡಳಿತ ಮಂಡಳಿಯ ನಿರ್ದೇಶಕರುಗಳು ಭಾಗವಹಿಸಿದ್ದರು.



**ಮೈಸೂರು :** ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರಿ ಅಧ್ಯಕ್ಷರಾದ ಕೆ. ಆರ್.ಶ್ಯಾಮ್ ಸುಂದರ್ ಹಾಗೂ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನೆರವೇರಿಸಲಾಯಿತು.



**ಹೂವಿನಹಡಗಲಿ :** ದಿನಾಂಕ 30.12.2023 ರಂದು ನಿತ್ಯಶ್ರೀ ಪತ್ತಿನ ಸಹಕಾರಿ ಹೂವಿನಹಡಗಲಿ ಯ 2024 ರ "ಕ್ಯಾಲೆಂಡರ್" ಅನ್ನು ಶಾಖಾ ಕಛೇರಿ ಹೊಳಲುನಲ್ಲಿ ಸಹಕಾರಿಯ ಸಿಬ್ಬಂದಿಗಳಿಂದ ಬಿಡುಗಡೆ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಸಂತೋಷ್.ಕೆ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮತಿ ನಿತ್ಯಶ್ರೀ, ಶಾಖ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ದವರಾದ ಶಂಭುನಾಥ, ಆನಂದ್, ಲಕ್ಕಪ್ಪ, ಭಾಗ್ಯ, ಸಾವಿತ್ರ ಹಾಜರಿದ್ದರು. ಇ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂತೋಷ್. ಕೆ ಮಾತನಾಡಿ ಒಂದು ಸಹಕಾರಿ ಅಭಿವೃದ್ಧಿ ಹೊಂದಬೇಕಾದರೆ ಸದಸ್ಯರ ಪ್ರಾಮಾಣಿಕ ವ್ಯವಹಾರ ಎಷ್ಟು ಮುಖ್ಯವೋ ದೇ ರೀತಿ ಸಿಬ್ಬಂದಿಗಳ ಪ್ರಾಮಾಣಿಕ ಕಾರ್ಯ ತುಂಬಾ ಮುಖ್ಯವಾದದ್ದು ಎಂದು ತಿಳಿಸಿದರು.

# ಸ್ವಸಹಾಯ ಸಂಘಗಳ ವಾರ್ಷಿಕ ಸಮಾವೇಶ




**ಮೂಡುಬಿದಿರೆ :** ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ. ಮೂಡುಬಿದಿರೆ ಪ್ರವರ್ತಿಸಲ್ಪಟ್ಟ ಸ್ವಸಹಾಯ ಸಂಘಗಳ ವಾರ್ಷಿಕ ಸಮಾವೇಶ ದಿನಾಂಕ: 26/11/2023 ರಂದು ಕಾಮಧೇನು ಸಭಾಭವನ, ಮೂಡುಬಿದಿರೆ ಇಲ್ಲಿ ಜರುಗಿತು. ಸಮಾವೇಶದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ನೆರವೇ–ರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಪ್ರೊ. ಎಂ. ವಾಸುದೇವ ಭಟ್ ಅವರು ವಹಿಸಿದರು, ಡಾ. ನಾಗವೇಣಿ ಮಂಚಿ ಪ್ರಾಧ್ಯಾಪಕರು, ಸರಕಾರಿ ಕಾಲೇಜು, ಕಾರ್ ಸ್ಟ್ರೀಟ್ ಮಂಗಳೂರು ಇವರು ಪ್ರಧಾನ ಭಾಷಣ ಮಾಡಿದರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ರಮೇಶ್ಚಂದ್ರ ಪಿ. ಉಪಸ್ಥಿತರಿದ್ದರು. ಸಮಾವೇಶದ ಪ್ರಯುಕ್ತ ನಡೆಸಲಾದ ರಂಗೋಲಿ, ರಸಪ್ರಶ್ನೆ, ಜಾನಪದ ಗೀತೆ, ಜಾನಪದ ನೃತ್ಯ, ಔಷಧೀಯ ಸಸ್ಯ ಗುರುತಿಸುವಿಕೆ, ವಂದೇಮಾತರಂ ಗಾಯನ, ಹೂ ಮತ್ತು ಕೇಪಳ ಹೂ ಕಟ್ಟುವ, ಭಾಷಣ ಸ್ಪರ್ಧೆಗಳಲ್ಲಿ 273 ಸದಸ್ಯರು ಭಾಗವಹಿಸಿದರು. ಕಾರ್ಯಕ್ರಮದ ಸಮಾರೋಪದ ಮುಖ್ಯ ಅತಿಥಿಯಾಗಿ ರೊ. ಶಂಕರ್ ಎ. ಕೋಟ್ಯಾನ್, ಕ್ಲಬ್ ಸೇವಾ ನಿರ್ದೇಶಕರು, ರೋಟರಿ ಕ್ಲಬ್ ಮೂಡುಬಿದಿರೆ ಟೆಂಪಲ್ ಟೌನ್ ಉಪಸ್ಥಿತರಿದ್ದು ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ಸಹಕಾರಿಯ ಒಟ್ಟು 188 ಸ್ವಸಹಾಯ ಗುಂಪುಗಳ ಪೈಕಿ 169 ಗುಂಪುಗಳಿಂದ 1865 ಸದಸ್ಯರ ಪೈಕಿ 1103 ಸದಸ್ಯರು ಭಾಗವಹಿಸಿದರು. ಸಮಾವೇಶದಲ್ಲಿ ಪ್ರಸಕ್ತ ಸಾಲಿನಲ್ಲಿ ಶ್ರೀ ಚಾಮುಂಡೇಶ್ವರಿ ಸ್ವಸಹಾಯ ಸಂಘವು ನಡೆಸಿದ ಸೇವಾ ಚಟುವಟಿಕೆ, ಸಭೆ ನಿರ್ವಹಣೆ, ಲೆಕ್ಕ ಪತ್ರ ನಿರ್ವಹಣೆ, ಸಾಲ ಮರುಪಾವತಿ, ಹಾಜರಾತಿ ಹಾಗೂ ಇನ್ನಿತರ ವಾರ್ಷಿಕ ಚಟುವಟಿಕೆಗಳನ್ನು ಪರಿಗಣಿಸಿ 2023–2024ನೇ ಸಾಲಿನ ಉತ್ತಮ ಸಂಘ ಪ್ರಶಸ್ತಿ ಪಡೆಯಿತು ಹಾಗೂ ಸಮಾವೇಶದ ಪ್ರಯುಕ್ತ ನಡೆಸಲಾದ ಸಾಂಸ್ಕೃತಿಕ ಮತ್ತು ಕ್ರೀಡಾಕೂಟದಲ್ಲಿ ಗರಿಷ್ಠ ಅಂಕಗಳಿಸಿದ ಶ್ರೀ ಮಣಿಕಂಠ ಸ್ವಸಹಾಯ ಸಂಘ 2023–2024ನೇ ಸಾಲಿನ ಚಾಂಪಿಯನ್ ಪ್ರಶಸ್ತಿ ಪಡೆಯಿತು. ಸಮಾವೇಶದಲ್ಲಿ ರೋಟರಿ ಕ್ಲಬ್ ಮೂಡುಬಿದಿರೆ ಟೆಂಪಲ್ ಟೌನ್ ಇದರ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಸದಸ್ಯರಿಗೆ ಉಚಿತವಾಗಿ ಮಧುಮೇಹದ ರಕ್ತ ಪರೀಕ್ಷೆ, ರಕ್ತದೊತ್ತಡ ಪರೀಕ್ಷೆ, ಕಿವಿ–ಮೂಗು–ಗಂಟಲು ಪರೀಕ್ಷೆ ನಡೆಸಿ ಉಚಿತವಾಗಿ ಔಷಧಿಯನ್ನು ನೀಡಲಾಯಿತು.

ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಪ್ರವರ್ತಿಸಲ್ಪಟ್ಟ ಸ್ವಸಹಾಯ ಗುಂಪುಗಳ ವಾರ್ಷಿಕ ಸಮಾವೇಶದ ಪೂರ್ವಭಾವಿ ಸಮಾಲೋಚನಾ ಸಭೆ ದಿನಾಂಕ: 24/09/2023 ರಂದು ಸಹಕಾರಿಯ "ಸೌಹಾರ್ದ ಸೌಧ" ಕಟ್ಟಡದಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಶ್ಯಾಮ್ ಹೆಗ್ಡೆ ವಹಿಸಿದರು. ಸಹಕಾರಿಯ ನಿರ್ದೇಶಕರಾದ ಶ್ರೀಯುತ ರೋಹನ್ ಬಂಗೇರ ಸಮಾವೇಶದ ಉದ್ದೇಶವನ್ನು ಪ್ರಾಸ್ತಾವಿಕ ಮಾತುಗಳಲ್ಲಿ ತಿಳಿಸಿದರು ಹಾಗೂ ನಿರ್ದೇಶಕರಾದ ಶ್ರೀಯುತ ಗೋಪಾಲ ಕೃಷ್ಣ ಭಟ್ ವಿವಿಧ ಆಟೋಟ ಸ್ಪರ್ಧೆಗಳ ವಿವರವನ್ನು ತಿಳಿಸಿದರು. ಸಭೆಯಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಯುತ ರಮೇಶ್ಚಂದ್ರ ಹಾಗೂ ಸಹಕಾರಿಯ ನಿರ್ದೇಶಕರು, ಸಿಬ್ಬಂದಿಗಳು ಉಪಸ್ಥಿತ–ರಿದ್ದರು. ಒಟ್ಟು 111 ಗುಂಪುಗಳ ಸದಸ್ಯ ಪ್ರತಿನಿಧಿಗಳು ಭಾಗವಹಿಸಿ ಮಾಹಿತಿಯನ್ನು ಪಡೆದರು.

---



**ಕಲಬುರಗಿ :** ದಿನಾಂಕ 01.01.2024 ರಂದು ಕಲಬುರ್ಗಿ ಪ್ರಾಂತಿಯ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ಯವರು, ಮಾನ್ಯ ನಿಕಟ ಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್ ಇವರು ನೆರವೇರಿಸಿದರು.

# ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಲಿಮಿಟೆಡ್, ಸಹಕಾರಿ ನಡೆದು ಬಂದ ದಾರಿ.




1905 ರಲ್ಲಿ ಕರ್ನಾಟಕದ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನಹಾಳದಲ್ಲಿ ಮೊದಲ ಸಹಕಾರಿ ಸಂಘವು ಪ್ರಾರಂಭವಾಗುವುದರೊಂದಿಗೆ ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭಕ್ಕೆ ಮುನ್ನುಡಿ ಬರೆದಿದ್ದು ಇದರ ಕಾರಣಿಕರ್ತ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಅವರನ್ನು ದೇಶ ಸಹಕಾರಿಯ ಪಿತಾಮಹ ಎಂದು ಗೌರವಿಸಿತು. 1959 ರಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಜಾರಿಗೆ ಬಂದ ನಂತರದಲ್ಲಿ ರಾಜ್ಯದಲ್ಲಿ ಅನೇಕ ಸಹಕಾರಿ ಸಂಘಗಳನ್ನು ಹುಟ್ಟುಹಾಕುವುದರೊಂದಿಗೆ ಸಹಕಾರಿ ಚಳುವಳಿಗೆ ವೇಗ ಸಿಕ್ಕಿತು. ಇದೇ ಪ್ರೇರಣೆಯನ್ನು ಪಡೆದು ಜಿಲ್ಲೆಯ ಕೇಂದ್ರ ಸ್ಥಾನವಾದ ಧಾರವಾಡದಲ್ಲಿ ಸಹಕಾರಿ ಸಂಘವಾಗಿ ಉಗಮವಾಗಿ ನಂತರದಲ್ಲಿ ಸೌಹಾರ್ದ ಸಹಕಾರಿ ಸಂಘವಾಗಿ ಬೆಳೆದು ಈ ಭಾಗದಲ್ಲಿ ಕಳೆದ 50 ವರ್ಷಗಳಿಂದ ನಿರಂತರವಾಗಿ ಸದಸ್ಯರಿಗೆ ಸೇವೆಯನ್ನು ನೀಡುತ್ತ ಬಂದಿರುವ ಸಂಸ್ಥೆಯೇ ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಲಿ.,

**ಸಂಸ್ಥೆಯ ಉಗಮ :** 1973 ನೇ ಇಸ್ವಿಯಲ್ಲಿ ಧಾರವಾಡದ ಸುಪ್ರಸಿದ್ಧ ವ್ಯಾಪಾರಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರೂ ಆಗಿದ್ದ ಶ್ರೀ ನಾರಾಯಣರಾವ್ ಟಿಕಾರೆಯವರು ಧಾರವಾಡ ಅರ್ಬನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸಾಯಿಟಿಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಾಯಿಸಿ ಸ್ಥಾಪನೆ ಮಾಡಿದರು. ಅದು ದಿನಾಂಕ 02.05.1973 ರಿಂದ ತನ್ನ ಸದಸ್ಯ ಗ್ರಾಹಕರಿಗೆ ಸೇವೆಯನ್ನು ನೀಡುತ್ತ ಬಂದಿತು. ಧಾರವಾಡ ತಾಲ್ಲೂಕಿನಾದ್ಯಂತ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿದ್ದ ಸಂಸ್ಥೆಯು ಕ್ರಮೇಣ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಿಗೆ ವಿಸ್ತಾರಗೊಂಡಿತು.

ಸಂಸ್ಥೆಗೆ ತನ್ನ ಸದಸ್ಯರ ಬಲವು ಹೆಚ್ಚುತ್ತಲೇ, ಅವರಿಗೆ ಹಲವಾರು ರೀತಿಯ ನಗುಮುಖದ ಸೇವೆಯನ್ನು ನೀಡುವುದರ ಜೊತೆಗೆ ತನ್ನ ಕಾರ್ಯಕ್ಷೇತ್ರದಲ್ಲಿ ಇನ್ನೊಂದು ಶಾಖೆಯನ್ನು ತೆರೆಯಬೇಕೆಂದು ಯೋಚಿಸಿ 80ರ ದಶಕದಲ್ಲಿ ಹಳೇಹುಬ್ಬಳ್ಳಿಯಲ್ಲಿ ಒಂದು ಶಾಖೆಯನ್ನು ಹೊಂದುವ ಮೂಲಕ ತನ್ನ ಕಾರ್ಯವನ್ನು ವಿಸ್ತರಿಸಿಕೊಂಡಿತು. ಹಳೇಹುಬ್ಬಳ್ಳಿಯು ವಾಣಿಜ್ಯ ಕೇಂದ್ರವಿರುವುದರಿಂದ ಸಂಸ್ಥೆಯು ತನ್ನ ಸೇವೆಯ ಮೂಲಕ ಸುಲಭವಾಗಿ ಸದಸ್ಯ ಗ್ರಾಹಕರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು. ದಿನದಿಂದ ದಿನಕ್ಕೆ ವ್ಯವಹಾರವು ವೃದ್ಧಿಯಾಗುತ್ತ ಸಂಸ್ಥೆಯು ಧಾರವಾಡ–ಹುಬ್ಬಳ್ಳಿಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿಕೊಳ್ಳತೊಡಗಿತು. ಸಾವಿರದ ಲೆಕ್ಕದಲ್ಲಿ ಆಗುತ್ತಿದ್ದ ಲಾಭವು ಲಕ್ಷಗಳಿಗೆ ವಿಸ್ತರಿಸಿತು.

2001ರಲ್ಲಿ ಧಾರವಾಡ ಹುಬ್ಬಳ್ಳಿಯ ಮಧ್ಯದ ಭಾಗವಾದ ನವನಗರದಲ್ಲಿ ಶಾಖೆಯನ್ನು ತೆರೆದು ಹಲವು ನಿವೃತ್ತ ನೌಕರರಿಗೆ ಮಾಸಿಕ ಬಡ್ಡಿ ಪಾವತಿಸುವ ಠೇವಣಿ ಯೋಜನೆಯಲ್ಲಿ ಆಧಾರವಾಗಿ ನಿಂತಿತು ಕ್ರಮೇಣ ಠೇವಣಿ ಬ್ರ್ಯಾಂಚ್ ಎಂದೇ ಪ್ರಖ್ಯಾತವಾಗಿ ವ್ಯವಹಾರವನ್ನು ದ್ವಿಗುಣಗೊಳಿಸಿತು.

2013ರಲ್ಲಿ ಹಳೇಹುಬ್ಬಳ್ಳಿಯದೇ ಭಾಗವಾಗಿರುವ ನೇಕಾರನಗರದಲ್ಲಿ ಶಾಖೆಯನ್ನು ವಿಸ್ತರಿಸಲಾಯಿತು. ನೇಕಾರನಗರದ ಸದಸ್ಯರು ಸೇವೆಯನ್ನು ಪಡೆಯಲು ಹಳೇಹುಬ್ಬಳ್ಳಿಗೆ ಆಗಮಿಸಬೇಕಿತ್ತು. ಕ್ರಮೇಣ ಅವರೆಲ್ಲರ ಖಾತೆಗಳನ್ನು ನೇಕಾರನಗರಕ್ಕೆ ವರ್ಗಾಯಿಸಿಕೊಂಡು ಅವರೆಲ್ಲರಿಗೂ ಅನುಕೂಲವಾಗುವಂತೆ ಸೇವೆಯನ್ನು ನೀಡಲು ಪ್ರಾರಂಭಿಸಲಾಯಿತು. ಲಕ್ಷಗಳ ಲೆಕ್ಕದಲ್ಲಿ ಇರುತ್ತಿದ್ದ ಲಾಭವು ಕೋಟಿಯ ಲೆಕ್ಕಕ್ಕೆ ವಿಸ್ತಾರಗೊಂಡಿತು. ಈ ಭಾಗದ ಜನರ ವಿಶ್ವಾಸವನ್ನು ವೃದ್ಧಿಸಿಗೊಂಡಿತು.

2013ರಲ್ಲಿ ಧಾರವಾಡ ಜಿಲ್ಲೆಯಿಂದ ಪ್ರಥಮ ಬಾರಿಗೆ ತನ್ನ ಕಾರ್ಯವ್ಯಾಪ್ತಿಯಲ್ಲಿರುವ ಹೊರ ಜಿಲ್ಲೆಯಾದ ಗದಗ ಪಟ್ಟಣಕ್ಕೆ ಸಂಸ್ಥೆಯು ತನ್ನ ಬಾಹುಗಳನ್ನು ಚಾಚಿತು. ಗದಗ ಪಟ್ಟಣದ ಮುಖ್ಯಭಾಗವಾದ ಬೆಟಗೇರಿಯಲ್ಲಿ ತನ್ನ ಶಾಖೆಯನ್ನು ತೆರೆದು ಅಲ್ಲಿನ ನೇಕಾರ ಬಂಧುಗಳಿಗೆ ಸೇವೆಯನ್ನು ನೀಡುತ್ತಾ ಅವರಿಗೆ ಆಸರೆಯಾಗಿ ನಿಂತಿದೆ.

2015ರಲ್ಲಿ ಸಂಸ್ಥೆಯು ತನ್ನ 6ನೇ ಶಾಖೆಯನ್ನು ಶಿರಹಟ್ಟಿ ತಾಲ್ಲೂಕಿನ ಸಂತೆ ಶಿಗ್ಲಿ ಗ್ರಾಮದಲ್ಲಿ ವಿಸ್ತರಿಸಿ ಅಲ್ಲಿಯೂ ಸಹ ನೇಕಾರ ಬಂಧುಗಳಿಗೆ, ಅಲ್ಲಿನ ಕೈಮಗ್ಗಗಳಲ್ಲಿ ನೇಯ್ಗೆಯನ್ನು ಮಾಡಲು ಪ್ರೋತ್ಸಾಹಿಸಿ ಸೇವೆಯನ್ನು ನೀಡುವಲ್ಲಿ ಬಹಳ ಮುತುವರ್ಜಿ ವಹಿಸಿತು. ಆ ಶಾಖೆಯ ವ್ಯಾಪ್ತಿಯಲ್ಲಿ ಸದಸ್ಯರಿಂದ ಸಂಗ್ರಹವಾಗುವ ಠೇವಣಿಗಿಂತ ಅಲ್ಲಿ ಸಾಲದ ಅವಶ್ಯಕತೆ ಇರುವುದನ್ನು ಮನಗಂಡು ಹಳೆಹುಬ್ಬಳ್ಳಿ ಶಾಖೆಯಿಂದ ಸಾಲವನ್ನು ಪಡೆದು ಶಿಗ್ಲಿ ಶಾಖೆಯ ಸದಸ್ಯರಿಗೆ ಸಾಲವನ್ನು ನೀಡಲಾಯಿತು. ಹೀಗೆ ಸಂಸ್ಥೆಯು ಒಟ್ಟು 6 ಶಾಖೆಗಳನ್ನು ಹೊಂದಿ 115 ಕೋಟಿಗೆ ವ್ಯವಹಾರವನ್ನು ಹೆಚ್ಚಿಸಿ, ಹಳೇಯ ಮುಂಬೈ ಕರ್ನಾಟಕ ಭಾಗದಲ್ಲಿ ಹಲವು ಪ್ರಥಮಗಳ ಸಹಕಾ–ರಿಯಾಗಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿದೆ.

**ಪ್ರಧಾನ ಕಛೇರಿ :** ಕಳೆದ 2017 ರಿಂದ ಸಂಸ್ಥೆಯ ಪ್ರಧಾನ ಕಛೇರಿ ಕಾರ್ಯಾರಂಭವಾಗಿ ಎಲ್ಲ ಶಾಖೆಗಳ ಆರ್ಥಿಕ ಅಂಕಿ–ಅಂಶಗಳ ಕ್ರೂಢೀಕರಣ, ಸದಸ್ಯತ್ವದ ನಿರ್ವಹಣೆ, ಶಾಖೆಗಳಿಗೆ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ, ಆಡಳಿತಾತ್ಮಕ ವಿಷಯಗಳ ನಿರ್ವಹಣೆ, ಮಂಡಳಿ ಸಭೆಗಳು, ಸಾಮಾನ್ಯ ಸಭೆಗಳ ನಿರ್ವಹಣೆ, ಕಾಯ್ದೆಯನುಸಾರ ಇಲಾಖೆಗಳಿಗೆ ಅವಧಿಯೊಳಗಾಗಿ ವಿದ್ಯುಕ್ತ ವರದಿಗಳ ಸಲ್ಲಿಕೆ, ಸಿಬ್ಬಂದಿಗಳ

ವೇತನ, ರಜೆ, ತರಬೇತಿಗಳ ಯೋಜನೆ ಮತ್ತು ನಿರ್ವಹಣೆ ನಡೆಯುತ್ತಿದೆ.

**ಸ್ವಂತ ಕಟ್ಟಡಗಳು :** ಸಂಸ್ಥೆಯ ಧಾರವಾಡ, ಹಳೇಹುಬ್ಬಳ್ಳಿ ಮತ್ತು ನವನಗರಗಳ ಶಾಖೆಗಳು ಸ್ವಂತ ಕಟ್ಟಡದಲ್ಲಿಯೇ ಸಂಘದ ಚಟುವಟಿ–ಕೆಗಳನ್ನು ನಡೆಸುತ್ತಿವೆ. ಪ್ರಸ್ತುತ ನವನಗರದ ಕಟ್ಟಡದ ಮೇಲ್ಭಾಗದಲ್ಲಿ ಸುಸಜ್ಜಿತವಾದ "ಸಮೃದ್ಧಿ" ಸಭಾಭವನ ನಿರ್ಮಿಸಿದ್ದು ಸಂಸ್ಥೆಯ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ತರಬೇತಿಯನ್ನು ನೀಡುವ ಕೇಂದ್ರವಾಗಿದೆ ಅಲ್ಲದೇ ಸದಸ್ಯ ಗ್ರಾಹಕರ ಉಪಯೋಗಕ್ಕಾಗಿ ಉಪಲಬ್ಧವಿದೆ. ನೇಕಾರನಗರದಲ್ಲಿ ಖುಲ್ಲಾ ಜಾಗೆಯನ್ನು ಖರೀದಿಸಲಾಗಿದ್ದು ಬರುವ ದಿನಗಳಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗುವುದು ಅಲ್ಲದೇ ಧಾರವಾಡದ ರಾಮನಗರದಲ್ಲಿ ಸುಸಜ್ಜಿತವಾಗಿ ನಿರ್ಮಿಸಿದ ಕಟ್ಟಡವೊಂದನ್ನು ಖರೀದಿ ಮಾಡಿಕೊಳ್ಳಲಾಗುತ್ತಿದ್ದು ಸಂಘದ ಇನ್ನೊಂದು ಶಾಖೆಯನ್ನು ತೆರೆಯುವುದು ಮತ್ತು ಪ್ರಧಾನ ಕಛೇರಿಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತ–ರಿಸುವ ಉದ್ದೇಶವನ್ನು ಹೊಂದಿದೆ.

**ಹಲವು ಪ್ರಥಮಗಳು :**

**ಸೇವಾ ಮನೋಭಾವನೆಯ ಗುಣ :** ಸಂಸ್ಥೆಯು ಆರಂಭದ ಕಾಲದಿಂದಲೂ ಸಾಮಾಜಿಕ ಬದ್ಧತೆಯನ್ನಿಟ್ಟುಕೊಂಡು, ಹಿರಿಯರ ಮಾರ್ಗದರ್ಶನದಂತೆ ಕಾರ್ಯವನ್ನು ನಿರ್ವಹಿಸುತ್ತ ನಡೆದಿದೆ. ಈ ಸಂಸ್ಥೆಯ ಪ್ರಥಮದಿಂದಲೇ ಕಾಯ್ದೆಯನ್ವಯ ಚುನಾಯಿತರಾದ ನಿರ್ದೇಶಕರು ಯಾವುದೇ ಸಭಾಭತ್ಯೆ ಪಡೆಯದೇ ಸೇವಾಮನೋಭಾವನೆಯಿಂದ ತಮ್ಮ ಸಮಯವನ್ನು ವ್ಯಯಿಸಿ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸುತ್ತ ಬಂದಿದ್ದು 50 ವರ್ಷಗಳ ನಂತರವೂ ಅದೇ ಪ್ರಥ ಮುಂದುವರೆದಿದೆ. ಇದೊಂದು ಸಂಸ್ಥೆಯ ಹೆಗ್ಗಳಿಕೆ.

**ಆಡಳಿತ ಮಂಡಳಿ :** ಸಂಸ್ಥೆಯ ಪ್ರಾರಂಭದಿಂದಲೂ ಕಾಯ್ದೆಯನುಸಾರ ಚುನಾಯಿತಗೊಂಡ ಆಡಳಿತ ಮಂಡಳಿಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತ ಬಂದಿದ್ದು ಮಂಡಳಿಯ ಸೂಕ್ತ ಮಾರ್ಗದರ್ಶನದಿಂದ ಸಂಸ್ಥೆಯು ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ಕಾಯ್ದೆಯನುಸಾರ ಚುನಾವಣೆ ಪ್ರಕ್ರಿಯೆಗಳು ನಡೆದು ಯಾವುದೇ ಸ್ಪರ್ಧೆ ನಡೆಯದೇ ಪರಸ್ಪರರ ಮಧ್ಯೆ ವಿಶ್ವಾಸ, ಸಹಮತದಿಂದ ಮಂಡಳಿಯ ರಚನೆಯಾಗುತ್ತಿರುವುದು ಸಮಾಜದ ಇಂದಿನ ಸ್ಪರ್ಧಾತ್ಮಕ ವಾತಾವರಣದಲ್ಲಿ ನಮ್ಮ ಸಂಸ್ಥೆಯು ಮೇಲ್ಪಂಕ್ತಿಯಾಗಿದೆ. ಇದೊಂದು ಸಂಸ್ಥೆಯ ಹೆಗ್ಗಳಿಕೆ

**ಕೌಟುಂಬಿಕ ವಾತಾವರಣ :** ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಲ್ಲರೂ ಒಂದೇ ಕುಟುಂಬದವರಂತೆ ಪರಸ್ಪರ ಸಹಕಾರವನ್ನು ನೀಡುತ್ತ ದಿನದ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಮನೆಗೆ ಹೋಗುವುದು ಮತ್ತು ವರ್ಷದ ಅನೇಕ ಸಂದರ್ಭಗಳಲ್ಲಿ ಸಿಬ್ಬಂದಿಗಳು ಒಟ್ಟಿಗೆ ಸೇರುವ ಸಂದರ್ಭಗಳು ಬಂದಾಗ ಪರಸ್ಪರ ತಮ್ಮ ತಮ್ಮ

ಅನುಭವಗಳನ್ನು ಹಂಚಿಕೊಳ್ಳುವುದು. ಹೊಸ ಹೊಸ ಸಿಬ್ಬಂದಿಗಳು ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ ಅವರಿಗೆ ಸಹಕಾರಿಗಳಾಗಿ ತಮ್ಮೊಂದಿಗೆ ಜೋಡಿಸಿಕೊಂಡು ಹೋಗುವ ಪ್ರವೃತ್ತಿ. ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಯಥೇಚ್ಛವಾಗಿ ಉದ್ಯೋಗಾವಕಾಶಗಳು ಇದ್ದಾಗ್ಯೂ ಸಹಿತ ಈ ಸಂಸ್ಥೆಗೆ ನೇಮಕವಾದ ಸಿಬ್ಬಂದಿಗಳು ಇಲ್ಲಿನ ಪಾರಿವಾರಿಕ ವಾತಾವರಣದಲ್ಲಿ ಬೆರೆತು ಕಾರ್ಯದಲ್ಲಿ ಮಗ್ನರಾಗಿ ಮುಂದುವರೆದಿದ್ದಾರೆಯೇ ಹೊರತು ಇಲ್ಲಿನ ಕೆಲಸದ ಅನುಭವವನ್ನು ಪಡೆದು ಬೇರೆ ಕ್ಷೇತ್ರದ ಕಡೆಗೆ ಮುಖ ಮಾಡಿರುವ ಉದಾಹರಣೆಗಳು ವಿರಳ. ಇದೊಂದು ಸಂಸ್ಥೆಯ ಹೆಗ್ಗಳಿಕೆ.

**ಸೀರೆ ಅಡಮಾನ ಸಾಲ :** ಸಂಘದ ಹಳೇಹುಬ್ಬಳ್ಳಿ, ನೇಕಾರನಗರ ಮತ್ತು ಬೆಟಗೇರಿ ಶಾಖೆಗಳಲ್ಲಿ ನೇಕಾರರು ನೇಯ್ದ ಸೀರೆಗಳನ್ನು ನಮ್ಮ ಸಂಘದ ಶಾಖೆಗಳಲ್ಲಿ ಅಡವಿಟ್ಟುಕೊಂಡು ಅವುಗಳ ಮೇಲೆ ಸಾಲವನ್ನು ವಿತರಿಸುವ ವಿನೂತನ ಯೋಜನೆಯನ್ನು ಸದಸ್ಯರಿಗೆ ಪರಿಚಯಿಸಿದೆ. ಕಳೆದ 10 ವರ್ಷಗಳಿಂದ ಈ ಯೋಜನೆಯು ಜಾರಿಯಲ್ಲಿದ್ದು ನೇಕಾರರಿಗೆ ಇದರಿಂದ ಬಹಳ ಅನುಕೂಲವಾಗಿದೆ. ಇನ್ನೂ ಈ ಯೋಜನೆಯು ಚಾಲ್ತಿಯಲ್ಲಿದೆ. ಇದೊಂದು ಸಂಸ್ಥೆಯ ಹೆಗ್ಗಳಿಕೆ.

**ಸಮಾಜಮುಖಿ ಚಿಂತನೆ :** ಸಂಘವು ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸಹಾಯ–ಸಹಕಾರ ನೀಡುತ್ತ ಬಂದಿದ್ದು ಪ್ರಕೃತಿ ವಿಕೋಪದ ಸಂದರ್ಭದಲ್ಲಿ, ಕೋವಿಡ್ ನಂತಹ ಭೀಕರ ಪರಿಸ್ಥಿತಿಯಲ್ಲಿಯೂ ಕೂಡ ಸಾಮಾಜಿಕ ಕಾಳಜಿಯನ್ನು ತೋರಿ ಅನೇಕ ರೀತಿಯ ಸಹಾಯಧನವನ್ನು ನೀಡುವುದರೊಂದಿಗೆ ಸಂಘದ ಧರ್ಮಾರ್ಥ ನಿಧಿಯ ಸದ್ಬಳಕೆಯನ್ನು ಮಾಡುತ್ತಿರುವುದು ಸಂಸ್ಥೆಯ ಹೆಗ್ಗಳಿಕೆ.

**ಪ್ರೋತ್ಸಾಹ ಧನ :** ಎಸ್.ಎಸ್.ಎಲ್.ಸಿ.ಯಿಂದ ಸ್ನಾತಕೋತ್ತರ ಪದವಿಯವರೆಗೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಸಹಕಾರಿ ಸಂಘದ ವತಿಯಿಂದ ಕಳೆದ ಅನೇಕ ವರ್ಷಗಳಿಂದ ಪ್ರೋತ್ಸಾಹಧನವನ್ನು ನೀಡುತ್ತ ಬಂದಿದೆ. ಇಂದಿಗೂ ಈ ಕಾರ್ಯ ಮುಂದುವರೆದಿದೆ.

ಇದೀಗ ಸಂಸ್ಥೆಗೆ 50 ವರ್ಷಗಳು ತುಂಬಿ "ಸುವರ್ಣ ಮಹೋತ್ಸವ" ಆಚರಣೆಗೆ ಸಿದ್ಧವಾಗಿದೆ. ಈ ಸಂದರ್ಭದಲ್ಲಿಯೂ ಕೂಡ ಸಹಕಾರಿ ಸಂಘದ ಪ್ರಸ್ತುತ ಆಡಳಿತ ಮಂಡಳಿಯ ಚಿಂತನೆಯು, ಸಾಮಾಜಿಕ ಬದ್ಧತೆಯನ್ನು ಮರೆಯದೇ ಹಲವು ಮುಖಗಳಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲು ಹೊರಟಿದೆ. ಅದರಲ್ಲಿ ಸಂಘದ ಸದಸ್ಯ–ರಿಗಾಗಿ, ಸಿಬ್ಬಂದಿಗಳು ವ ಅವರ ಪರಿವಾರದವರಿಗಾಗಿ ಮತ್ತು ಸಮಾಜ–ಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಹಕಾರ ಕ್ಷೇತ್ರದಲ್ಲಿ ಮತ್ತೊಂದು ಮೇಲ್ಪಂಕ್ತಿಯಾಗಿದೆ ಎನುವುದರಲ್ಲಿ ಸಂಶಯವಿಲ್ಲ.



ಸಹಕಾರಿಯ ಆಡಳಿತ ಮಂಡಳಿ ಸದಸ್ಯರು

## ಉದ್ಘಾಟನೆ



**ಮಂಡ್ಯ :** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ನೂತನ ಶಾಖೆಯನ್ನು ದಿನಾಂಕ 10.12.2023 ರಂದು ಭಾನುವಾರ ಮಂಡ್ಯ ತಾಲ್ಲೂಕಿನ ದುದ್ದ ಹೋಬಳಿಯ ಬೇವುಕಲ್ಲು ಗ್ರಾಮದಲ್ಲಿ ನಿ.ಪ್ರ.ಸ್ವ. ಶ್ರೀ ಶ್ರೀ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮಿಗಳು, ಶಾಂತೇಶ್ವರ ಕದಂಬ ಜಂಗಮ ಮಠ, ವೈದ್ಯನಾಥಪುರ, ಇವರ ಜೊತೆಗೂಡಿ ಹಲವು ಮಠಾಧೀಶರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಎಸ್. ನಾಗರಾಜು ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಶಿವಕುಮಾರ ಬಿರಾದಾರ, ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಇವರು ಉಪಸ್ಥಿತರಿದ್ದರು.

## ದಿ ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿ ಸಂಘದ ಸುವರ್ಣ ಮಹೋತ್ಸವ



**ಧಾರವಾಡ :** ದಿ ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿ ಸಂಘದ ಸುವರ್ಣ ಮಹೋತ್ಸವದ ಪ್ರಯುಕ್ತ ಸುವರ್ಣ ಮಹೋತ್ಸವ ಸಂಚಾಲನಾ ಸಮಿತಿ ಆಶ್ರಯದಲ್ಲಿ, ದಿ ಕರ್ನಾಟಕ ಕ್ಯಾನ್ಸರ ಥೆರಪಿ ಮತ್ತು ಸಂಶೋಧನಾ ಸಂಸ್ಥೆ ನವನಗರ–ಹುಬ್ಬಳ್ಳಿ, ರೋಟರಿ ಸಂಸ್ಥೆ ನವನಗರ, ಇನ್ನರವ್ಹೀಲ್ ಕ್ಲಬ್ ನವನಗರ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಧಾರವಾಡ ಇವರ ಸಹಯೋಗದೊಂದಿಗೆ ದಿನಾಂಕ 25.11.2023 ರ ಶನಿವಾರದಂದು ನವನಗರ ಶಾಖೆಯ ಸಮೃದ್ಧಿ ಸಭಾಭವನದಲ್ಲಿ ಮಹಿಳೆಯರಿಗೆ ಕ್ಯಾನ್ಸರ್ ಅರಿವು ಕಾರ್ಯಕ್ರಮವನ್ನು ಏರ್ಪಡಿಲಾಗಿತ್ತು.

ಕಾರ್ಯಕ್ರಮದಲ್ಲಿ ದಿ ಕರ್ನಾಟಕ ಕ್ಯಾನ್ಸರ ಥೆರಪಿ ಮತ್ತು ಸಂಶೋಧನಾ ಸಂಸ್ಥೆ ನವನಗರ–ಹುಬ್ಬಳ್ಳಿ ಇದರ ವೈದ್ಯಾಧಿಕಾರಿಯಾಗಿರುವ ಡಾ. ಶ್ರೀಮತಿ ಸಾಯಿಕುಮಾರಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕ್ಯಾನ್ಸರ್ ಖಾಯಿಲೆಯ ಪರಿಣಾಮಗಳು, ಅದಕ್ಕೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಕುರಿತು ಜಾಗೃತಿಯನ್ನು ಮೂಡಿಸಿದರು.

ಕಾರ್ಯಕ್ರಮದಲ್ಲಿ ಇನ್ನುಳಿದಂತೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಹಾಗೂ ಕ್ಯಾನ್ಸರ್ ಆಸ್ಪತ್ರೆಯ ರಕ್ತನಿಧಿ ವಿಭಾಗದ ಅಧೀಕ್ಷರೂ ಆಗಿರುವ ಡಾ. ಉಮೇಶ ಹಳ್ಳಿಕೇರಿ, ಮಹಾನಗರ ಪಾಲಿಕೆಯ 27 ನೇ ವಾರ್ಡನ ಸದಸ್ಯರಾಗಿರುವ ಶ್ರೀಮತಿ ಸುನೀತಾ ಮಾಳವದಕರ್, ಇನ್ನರ್‌ವ್ಹೀಲ್ ಕ್ಲಬ್ ನ ಅಧ್ಯಕ್ಷರು ಹಾಗೂ ರೋಟರಿ ಶಾಲೆಯ ಪ್ರಾಂಶುಪಾಲರೂ ಆಗಿರುವ ಡಾ. ಶ್ರೀಮತಿ ವಿಜಯಶ್ರೀ ಕಲಬುರ್ಗಿ, ರೋಟರಿ ಕ್ಲಬ್ ನವನಗರ ಇದರ ಅಧ್ಯಕ್ಷರಾಗಿರುವ ಶ್ರೀಮತಿ ಶಿಲ್ಪಾ ಆರ್ ಲಗ್ಲಿ ಇವರು ಮುಖ್ಯತಿಥಿಗಳಾಗಿ ಆಗಮಿಸಿದ್ದರು. ಸಹಕಾರಿಯು ತನ್ನ ಆರ್ಥಿಕ ಚಟುವಟಿಕೆಗಳನ್ನಲ್ಲದೇ ಈ ರೀತಿ ಸಾಮಾಜಿಕ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು.

ಸಹಕಾರಿ ಸಂಘದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮುಕುಂದ ಪೂಜಾರ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ನಮ್ಮ ಸಹಕಾರಿ ಸಂಘವು ಸುವರ್ಣ ಮಹೋತ್ಸವದ ನಿಮಿತ್ತ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ನಮ್ಮ ಸದಸ್ಯ, ಗ್ರಾಹಕರಿಗೆ ಆರೋಗ್ಯ ತಪಾಸಣೆಯನ್ನು ಈಗಾಗಲೇ ಎಲ್ಲ ಶಾಖೆಗಳಲ್ಲಿ ಆಯೋಜನೆ ಮಾಡಲಾಗಿ–ತ್ತು ನಾರಾರು ಜನರು ಇದರ ಸದುಪಯೋಗವನ್ನು ಪಡೆದುಕೊಂಡಿದ್ದು ಎರಡನೇ ಹಂತದಲ್ಲಿ ಮಹಿಳೆಯರಿಗಾಗಿ ಕ್ಯಾನ್ಸರ್ ಅರಿವು ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಬರಲಿರುವ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳ ಸಮಾರೋಪ ಸಮಾರಂಭವನ್ನು ಆಯೋಜನೆ ಮಾಡಲಾಗುತ್ತಿದ್ದು ಎಲ್ಲ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಸಕ್ರೀಯವಾಗಿ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿಕೊಂಡರು.

ಸಹಕಾರಿ ಸಂಘದ ಅಧ್ಯಕ್ಷರಾಗಿರುವ ಶ್ರೀ ಗುರುಪಾದಪ್ಪ ಢಗೆ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಇಂದಿನ ಕಾರ್ಯಕ್ರಮದಲ್ಲಿ ಬಂದಿರುವ ಸಂಖ್ಯೆಯನ್ನು ನೋಡಿದರೆ ಬಹಳ ಖುಷಿಯಾಗುತ್ತದೆ. ಕ್ಯಾನ್ಸರ್ ಕುರಿತು ನಿಮಗೆ ಇಲ್ಲಿ ಮೂಡಿಸುತ್ತಿರುವ ಅರಿವನ್ನು ನೀವೂ ನಿಮ್ಮ ಸುತ್ತ ಮುತ್ತಲಿನ ನಾಲ್ಕಾರು ಜನಕ್ಕೆ ಹಂಚಿದರೆ, ನಾವು ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಬಾಳಾಸಾಹೇಬ ಪೋಳ ಇವರು ವಂದನಾರ್ಪಣೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಒಟ್ಟು 94 ಜನ ಮಹಿಳೆಯರು ಹಾಜರಿದ್ದು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು

ಸಭಾ ಕಾರ್ಯಕ್ರಮದ ನಂತರದಲ್ಲಿ ಮಹಿಳೆಯರಿಗೆ ಕ್ಯಾನ್ಸರ್ ಖಾಯಿಲೆಯ ಲಕ್ಷಣಗಳು ಇತ್ಯಾದಿ ಕುರಿತು ಡಾ. ಶ್ರೀಮತಿ ಸಾಯಿಕುಮಾರಿ ಇವರು ಪಿ.ಪಿ.ಟಿ. ಮೂಲಕ ತಿಳುವಳಿಕೆಯನ್ನು ನೀಡಿದರು. ಭಾಗವಹಿಸಿದ್ದ ಮಹಿಳೆಯರು ಅನೇಕರು ಅವರೊಂದಿಗೆ ಸಂವಾದವನ್ನು ನಡೆಸಿದರು.

ಕ್ಯಾನ್ಸರ್ ಅರಿವು ಕಾರ್ಯಕ್ರಮವನ್ನು ವೃಕ್ಷಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಹಾಗೂ ಕ್ಯಾನ್ಸರ್ ಆಸ್ಪತ್ರೆಯ ರಕ್ತನಿಧಿ ವಿಭಾಗದ ಅಧೀಕ್ಷರೂ ಆಗಿರುವ ಡಾ. ಉಮೇಶ ಹಳ್ಳಿಕೇರಿ, ರೋಟರಿ ಕ್ಲಬ್ ನವನಗರ ಇದರ ಅಧ್ಯಕ್ಷರಾಗಿರುವ ಶ್ರೀಮತಿ ಶಿಲ್ಪಾ ಆರ್ ಲಗ್ಲಿ, ಇನ್ನರ್‌ವ್ಹೀಲ್ ಕ್ಲಬ್ ನ ಅಧ್ಯಕ್ಷರು ಹಾಗೂ ರೋಟರಿ ಶಾಲೆಯ ಪ್ರಾಂಶುಪಾಲರೂ ಆಗಿರುವ ಡಾ. ಶ್ರೀಮತಿ ವಿಜಯಶ್ರೀ ಕಲಬುರ್ಗಿ, ಮಹಾನಗರ ಪಾಲಿಕೆಯ 27 ನೇ ವಾರ್ಡನ ಸದಸ್ಯರಾಗಿರುವ ಶ್ರೀಮತಿ ಸುನೀತಾ ಮಾಳವದಕರ್, ದಿ ಕರ್ನಾಟಕ ಕ್ಯಾನ್ಸರ ಥೆರಪಿ ಮತ್ತು ಸಂಶೋಧನಾ ಸಂಸ್ಥೆ ನವನಗರ–ಹುಬ್ಬಳ್ಳಿ ಇದರ ವೈದ್ಯಾಧಿಕಾರಿಯಾಗಿರುವ ಡಾ. ಶ್ರೀಮತಿ ಸಾಯಿಕುಮಾರಿ ಮತ್ತು ಸಹಕಾರಿ ಸಂಘದ ಅಧ್ಯಕ್ಷರಾಗಿರುವ ಶ್ರೀ ಗುರುಪಾದಪ್ಪ ಢಗೆ ಇವರು ಉಪಸ್ಥಿತರಿದ್ದರು.

# ಒಡಿಯೂರು ಸೌಹಾರ್ದ ಸಹಕಾರಿ ನೂತನ ಕಟ್ಟಡದ ಅದ್ದೂರಿಯ ಸಂಭ್ರಮದ ಉದ್ಘಾಟನಾ ಕಾರ್ಯಕ್ರಮ.

**ಶ್ರೀ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಂದ ಆಶೀರ್ವಚನ, ಸಾಧ್ವಿ ಮಾತಾಜಿ ಆನಂದಮಯಿ ಇವರಿಂದ ಶುಭ ಹಾರೈಕೆ. ಹಿರಿಯ ಸಹಕಾರಿ ಸಹಕಾರಿ ರತ್ನ ಪರಸ್ಕೃತ ಶ್ರೀ ಎಮ್ ಎನ್ ರಾಜೇಂದ್ರಕುಮಾರ ರವರಿಗೆ ವಡಿಯೂರು ಸಹಕಾರಿಯಿಂದ ಸನ್ಮಾನ, 2023 ಸಹಕಾರಿ ರತ್ನ ಪುರಸ್ಕೃತ ಶ್ರೀ ಸುರೇಶ ರೈ ಯವರಿಗೆ ಸಂಯುಕ್ತ ಸಹಕಾರಿಯಿಂದ ಸನ್ಮಾನ. ಅದ್ದೂರಿಯ ಸಂಭ್ರಮದ ಕಾರ್ಯಕ್ರಮ. 1500 ಕ್ಕೂ ಹೆಚ್ಚು ಸದಸ್ಯರು ಸಹಕಾರಿಗಳು ಭಾಗಿ.**




**ದಕ್ಷಿಣ ಕನ್ನಡ :** ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೆ ಸಹಕಾರಿ ತತ್ವದ ಚಿಂತನೆ ಮುಖ್ಯ. ಸಹಕಾರಿ ಕ್ಷೇತ್ರ ಸಮಾಜದ ಹಿತ ಕಾಪಾಡುವ ಕೆಲಸ ಮಾಡುತ್ತಿದೆ. ಸಹಕಾರಿ ತತ್ವ ಜೀವನ ತತ್ವವೂ ಆಗಿದೆ. ಬದುಕಿಗೆ ಸಂಬಂಧಿಸಿದ ಸಾರ ಇದರಲ್ಲಿ ಅಡಕವಾಗಿದೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಪಂಪ್‌ವೆಲ್ ಲೋಟಸ್ ಗ್ಯಾಲಕ್ಸಿಯಲ್ಲಿ ಬುಧವಾರ ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಸ್ವಂತ ಆಡಳಿತ ಕಛೇರಿ ಉದ್ಘಾಟಿಸಿ, ಪಂಪ್‌ವೆಲ್ ಶಾಖೆ ಮತ್ತು ಯೋಜನಾ ಕಛೇರಿ ಸ್ಥಳಾಂತರ ಹಾಗೂ ಅಭಿನಂದನ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಶಾಖೆ ವಿಸ್ತರಣೆ ಸ್ವಂತ ಕಟ್ಟಡ ಹೊಂದುವ ಮೂಲಕ ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಬೆಳೆಯುತ್ತಿದೆ. ಅರ್ಹ–ರಿಗೆ ನೆರವಾಗುವುದು ಸಂಘದ ಉದ್ದೇಶ. ಸಂಘದ ಮೂಲಕ 500 ಉದ್ಯೋಗ ಸೃಷ್ಟಿಯಾಗಿದೆ. ಇನ್ನಷ್ಟು ಉದ್ಯೋಗ ಸೃಷ್ಟಿಗೊಂಡು ಸಂಘ ಬೆಳೆಯಲಿ. ಸಹಕಾರಿ ತತ್ವ ಧರ್ಮದ ಸಾರ. ಗ್ರಾಹಕರ ಬೆಂಬಲ, ಸಿಬ್ಬಂದಿಯ ಪರಿಶ್ರಮ, ಸಮರ್ಥ ಆಡಳಿತದ ಮೂಲಕ ಬೆಳೆದ ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಇನ್ನಷ್ಟು ಉನ್ನತಿಗೆ ಏರಲಿ ಎಂದು ಆಶಿಸಿದರು.

ಒಡಿಯೂರು ಶ್ರೀ ಮಾತಾನಂದಮಯಿ ಸಾನ್ನಿಧ್ಯ ವಹಿಸಿದ್ದರು. ರಾಜ್ಯ ಸಹಕಾರ ಮಾರಾಟ ಮಹಾಮಂಡಲ ಹಾಗೂ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್ ರಾಜೇಂದ್ರ ಕುಮಾರ್, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅಧ್ಯಕ್ಷ ಸಿಎ ಜಿ.ನಂಜನ ಗೌಡ, ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ, ದ.ಕ. ಹಾಲು ಉತ್ಪಾದಕರ ಒಕ್ಕೂಟ ಅಧ್ಯಕ್ಷ ಕೆ.ಪಿ. ಸುಚರಿತ ಶೆಟ್ಟಿ, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮಾಜಿ ಅಧ್ಯಕ್ಷ ಎಸ್.ಆರ್ ಸತೀಶ್ಚಂದ್ರ, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಎಸ್.ಕೆ. ಮಂಜುನಾಥ, ಭಾರತಿ ಜಿ ಭಟ್, ವ್ಯವಸ್ಥಾಪಕ ನಿರ್ದೇಶಕ ಶರಣ ಗೌಡ ಜಿ. ಪಾಟೀಲ್, ರೋಹನ್ ಕಾರ್ಪೋರೇಶನ್ ಆಡಳಿತ ನಿರ್ದೇಶಕ ರೋಹನ್ ಮೊಂತೆರೋ, ಲೋಟಸ್ ಪ್ರಾಪರ್ಟಿಸ್ ಪಾಲುದಾರ ಜಿತೇಂದ್ರ ಕೊಟ್ಟಾರಿ, ಸ್ಥಳೀಯ ಕಾರ್ಪೋರೇಟರ್ ಸಂದೀಪ್ ಗರೋಡಿ. ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಎ ಸುರೇಶ್ ರೈ ಸ್ವಾಗತಿಸಿದರು. ಉಪಾಧ್ಯಕ್ಷ ಲಿಂಗಪ್ಪ ಗೌಡ ಪನೆಯಡ್ಕ ವಂದಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ದಯಾನಂದ ಶೆಟ್ಟಿ ಬಾಕ್ರಬೈಲ್, ಆಡಳಿತ ಮಂಡಳಿಯ ನಿರ್ದೇಶಕರು ಉಪಸ್ಥಿತರಿದ್ದರು. ಲೋಕೇಶ್ ರೈ ಕಾರ್ಯಕ್ರಮ ನಿರೂಪಿಸಿದರು.

ಅಂತಾರಾಷ್ಟ್ರೀಯ ಸಾಧಕ ಪ್ರಶಸ್ತಿ 2023 ಪುರಸ್ಕೃತ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಸಂಘದ ವತಿಯಿಂದ "ಸಹಕಾರ ಸಿರಿ" ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು, ಈ ಸಂದರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ ಇವರನ್ನು ಗೌರವಿಸಲಾಯಿತು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಚಿಕ್ಕೋಡಿ :** ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಚಿಕ್ಕೋಡಿ ಇದರ ಚುನಾವಣೆ ದಿನಾಂಕ 15.12.2023 ರಂದು ಜರುಗಿದ್ದು ಆಡಳಿತ ಮಂಡಲಿಯ ನಿರ್ದೇಶಕರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ 23.12.2023 ರ ಶನಿವಾರ ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಅಧ್ಯಕ್ಷರಾಗಿ ಶ್ರೀ ಜಗದೀಶ ಮಲ್ಲಿಕಾರ್ಜುನ ಜವಟಗಿಮಠ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಷಡಕ್ಷರಿ ಬಸವರಾಜ ಮೂಗೇರಿ ಇವರುಗಳು ಆಯ್ಕೆಯಾಗಿರುತ್ತಾರೆ. ಸದರಿ ಚುನಾವಣೆಯ ರಿಟರ್ನಿಂಗ್ ಅಧಿಕಾರಿಗಳು ಶ್ರೀ ರವೀಂದ್ರ ಪಾಟೀಲ, ಸಹಾಯಕ ಸಂಘಗಳ ಸಹಾಯಕ ನಿಬಂಧಕರು, ಬೆಳಗಾವಿ, ಉಪವಿಭಾಗ ಬೆಳಗಾವಿ ಇವರ ಸಮ್ಮುಖದಲ್ಲಿ ಜರುಗಿತು.

# ಸಹಕಾರ ಸಂಘದ/ಸೌಹಾರ್ದ ಸಹಕಾರಿಯ ಸದಸ್ಯ ಮಂಡಳಿ ಚುನಾವಣೆ ಅಕ್ರಮ ಉಲ್ಲೇಖಿಸಿ - ಆಯ್ಕೆಯಾದ ಮಂಡಳಿ ರಚನೆ ಪ್ರಶ್ನಿಸಬಹುದೇ?



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಸಹಕಾರ ಸಂಘಗಳ ಕಾಯಿದೆ 1959ರ ಕಲಂ.70 ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.**

**70. ತೀರ್ಮಾನಕ್ಕಾಗಿ ನಿಬಂಧಕರಿಗೆ ಒಪ್ಪಿಸಬಹುದಾದ ವಿವಾದಗಳು :**

1. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಒಂದು ಸಂಘದ ರಚನೆ, ಆಡಳಿತ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ (ಮಂಡಳಿ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದ ವಿವಾದವನ್ನು ಹೊರತು ಪಡಿಸಿ) ಯಾವುದೇ ವಿವಾದವು–

(ಎ) ಸದಸ್ಯರ ಅಥವಾ ಹಿಂದಿನ ಸದಸ್ಯರ, ಸದಸ್ಯರ ಅಥವಾ ಮೃತನಾದ ಸದಸ್ಯನ ಮೂಲಕ ಹಕ್ಕು ಸಾಧಿಸುವ ವ್ಯಕ್ತಿಗಳು – ಇವರ ನಡುವೆ, ಅಥವಾ

(ಬಿ) ಸದಸ್ಯ, ಹಿಂದಿನ ಸದಸ್ಯ ಅಥವಾ ಸದಸ್ಯ, ಹಿಂದಿನ ಸದಸ್ಯ ಅಥವಾ ಮೃತನಾದ ಸದಸ್ಯನ ಮೂಲಕ ಹಕ್ಕು ಸಾಧಿಸುವ ವ್ಯಕ್ತಿ ಮತ್ತು ಸಂಘ, ಅದರ ಸಮಿತಿ, ಅಥವಾ ಸಂಘದ ಯಾವುದೇ ಅಧಿಕಾರಿ, ಏಜೆಂಟ್ ಅಥವಾ ನೌಕರ – ಇವರ ನಡುವೆ; ಅಥವಾ

(ಸಿ) ಸಂಘದ ಅಥವಾ ಅದರ ಸಮಿತಿ ಮತ್ತು ಯಾವುದೇ ಹಿಂದಿನ ಸಮಿತಿ, (ಅಥವಾ ಇತರ ಯಾವೊಬ್ಬ ಪದಾಧಿಕಾರಿ), ಏಜೆಂಟ್ ಅಥವಾ ನೌಕರ ಅಥವಾ ಯಾರೇ ಹಿಂದಿನ ಅಧಿಕಾರಿ ಅಥವಾ ಸಂಘದ ಯಾವುದೇ ಮೃತನಾದ ಅಧಿಕಾರಿ, ಮೃತನಾದ ಏಜೆಂಟ್ ಅಥವಾ ಮೃತನಾದ ನೌಕರನ ನಾಮನಿರ್ದೇಶಿತ ಹಕ್ಕುದಾರ ಅಥವಾ ಶಾಸನಬದ್ಧ ಪ್ರತಿನಿಧಿ – ಇವರುಗಳ ನಡುವೆ; ಅಥವಾ

(ಡಿ) ಸಂಘ ಮತ್ತು ಇತರ ಯಾವುದೇ ಸಹಕಾರ ಸಂಘ ಅಥವಾ ಒಂದು (ಕ್ರೆಡಿಟ್ ಏಜೆನ್ಸಿ) – ಇವುಗಳ ನಡುವೆ ಉದ್ಭವಿಸಿದರೆ,

ಅಂತಹ ವಿವಾದವನ್ನು ತೀರ್ಮಾನಕ್ಕಾಗಿ ನಿಬಂಧಕರಿಗೆ ಒಪ್ಪಿಸತಕ್ಕದ್ದು ಮತ್ತು ಅಂತಹ ವಿವಾದದ ಸಂಬಂಧದಲ್ಲಿ ಯಾವುದೇ ದಾವೆಯನ್ನು ಅಥವಾ ಇತರ ನಡೆವಳಿಕೆಗಳನ್ನು ನಡೆಸಲು ಯಾವ (ಸಿವಿಲ್ ಅಥವಾ ಕಾರ್ಮಿಕ ಅಥವಾ ರೆವಿನ್ಯೂ ನ್ಯಾಯಾಲಯ ಅಥವಾ ಔದ್ಯೋಗಿಕ ನ್ಯಾಯಾಧಿಕರಣಕ್ಕೂ) ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದಲ್ಲ.

**2. ಉಪಕಲಂ (1)ರ ಉದ್ದೇಶಗಳಿಗಾಗಿ, ಈ ಮುಂದಿನ ವಿವಾದಗಳನ್ನು ಒಂದು ಸಂಘದ ರಚನೆ, ಆಡಳಿತ ಅಥವಾ ಒಂದು ಸಂಘದ ವ್ಯವಹಾರಗಳಿಗೆ ಸಂಬಂಧಪಟ್ಟ ವಿವಾದಗಳೆಂದು ಪರಿಗಣಿಸತಕ್ಕದ್ದು. ಅವುಗಳೆಂದರೆ –**

(ಎ) ಯಾವುದೇ ಸಾಲ ಅಥವಾ ಹಕ್ಕು ಕೇಳಿಕೆ (ಡಿಮ್ಯಾಂಡ್) ಅಂಗೀಕರಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಸಂಘಕ್ಕೆ ಒಬ್ಬ ಸದಸ್ಯನಿಂದ ಅಥವಾ ಒಬ್ಬ ಮೃತ ಸದಸ್ಯನ ವಾರಸುದಾರನಿಂದ ಅಥವಾ ನಾಮ ನಿರ್ದೇಶಿತನಿಂದ ಅಥವಾ ಶಾಸನಬದ್ಧ ಪ್ರತಿನಿಧಿಯಿಂದ ತನಗೆ ಬರಬೇಕಾದಂತಹ ಯಾವುದೇ ಬಾಕಿ ಸಾಲ ಅಥವಾ ಕೇಳಿಕೆ ಹಕ್ಕು ಸಂಬಂಧದಲ್ಲಿ ಸಂಘದವರಿಂದ ಮಾಡಲ್ಪಡುವ ಕ್ಲೇಮುಗಳು;

(ಬಿ) ಯಾವುದೇ ಸಾಲವು ಅಥವಾ ಹಕ್ಕು ಕೇಳಿಕೆಯು (ಡಿಮ್ಯಾಂಡ್) ಅಂಗೀಕರಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಮೂಲ ಸಾಲಗಾರನು ಸಾಲವನ್ನು ವಾಪಾಸು ಮಾಡದೇ ತಪ್ಪಿರುವುದರ ಪರಿಣಾಮವಾಗಿ, ಮೂಲ ಸಾಲಗಾರನಿಂದ ಸಂಘಕ್ಕೆ ಬರಬೇಕಾದಂತಹ ಯಾವುದೇ ಸಾಲ ಅಥವಾ ಹಕ್ಕು ಕೇಳಿಕೆಯ ಸಂಬಂಧದಲ್ಲಿ ಸಂಘವು ಜಾಮೀನುದಾರನಿಂದ ಯಾವುದೇ ಮೊಬಲಗನ್ನು ವಸೂಲು ಮಾಡಿರುವಲ್ಲಿ, ಆ ಮೂಲ ಸಾಲಗಾರನ ವಿರುದ್ಧ ಜಾಮೀನುದಾರನಿಂದ ಮಾಡಲಾಗುವ ಕ್ಲೇಮುಗಳು;

(ಸಿ) ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸಭಾಪತಿ ಉಪಸಭಾಪತಿ, ಕಾರ್ಯದರ್ಶಿ, ಖಜಾಂಚಿ ಅಥವಾ ಸಮಿತಿ ಸದಸ್ಯನ ಚುನಾವಣೆ ಸಂದರ್ಭದಲ್ಲಿ ಉದ್ಭವಿಸಬಹುದಾದ ಯಾವುದೇ ವಿಚಾದ.

(ಡಿ) [ಔದ್ಯೋಗಿಕ ವ್ಯಾಜ್ಯಗಳ ಕಾಯ್ದೆ, 1947 (1947ರ ಕೇಂದ್ರ ಕಾಯ್ದೆ 14) ರಲ್ಲಿ ಇದಕ್ಕೆ ವಿರುದ್ಧವಾದದ್ದು ಏನೇ ಇದ್ದರೂ] ಸಂಘ ಮತ್ತು ಅದರ ನೌಕರ ವರ್ಗದವರಲ್ಲಿ ಅಥವಾ ಹಿಂದಿನ ನೌಕರರಲ್ಲಿ ಅಥವಾ ಮೃತ ನೌಕರರ ವಾರಸುದಾರರು ಮತ್ತು ಶಾಸನಬದ್ಧ ಪ್ರತಿನಿಧಿ ನಡುವೆ ಉಂಟಾದ ಯಾವುದೇ ವಿವಾದ ಮತ್ತು ನೌಕರಿ ನಿಬಂಧನೆಗಳು, ಸೇವಾ ಸ್ಥಿತಿಗಳು ಮತ್ತು ಸಹಕಾರಿ ಸಂಘದವರು ಕೈಗೊಂಡ ಶಿಸ್ತು ಪಾಲನೆ ಕ್ರಮ ಇವುಗಳಿಂದ ಉದ್ಭವಿಸಿದ ವಿವಾದ ಸಹಿತಿ.

(ಇ) ಸದಸ್ಯ, ಹಿಂದಿನ ಸದಸ್ಯ, ಮೃತ ಸದಸ್ಯ ಅಥವಾ ಮೃತ ಅಧಿಕಾರಿ, ಹಿಂದಿನ ಏಜೆಂಟ್ ಅಥವಾ ಮೃತನಾದ ಏಜೆಂಟ್ ಅಥವಾ ಯಾರೇ ನೌಕರ, ಹಿಂದಿನ ನೌಕರ ಅಥವಾ ಮೃತನಾದ ನೌಕರ ಅಥವಾ ಅದರ ಹಾಲಿ ಸಮಿತಿ ಅಥವಾ ಹಿಂದಿನ ಸಮಿತಿಯ ಸಂಘದ ಆಸ್ತಿಗೆ ಕೊರತೆಯನ್ನುಂಟು ಮಾಡಿದ ಬಗ್ಗೆ ಅಂತಹ ಹಾನಿಯನ್ನು ಒಪ್ಪಿರಲಿ ಅಥವಾ ಒಪ್ಪದೇ ಇರಲಿ ಆ ಬಗ್ಗೆ ಸಂಘವು ಮಾಡಬಹುದಾದ ಕ್ಲೇಮುಗಳು

(3) ಈ ಕಲಂನ ಮೇರೆಗೆ ನಿಬಂಧಕರಿಗೆ ಒಪ್ಪಿಸಲಾದ ವಿವಾದವು, ಸಹಕಾರ ಸಂಘದ ರಚನೆ. ಆಡಳಿತ ಅಥವಾ ವ್ಯವಹಾರಕ್ಕೆ ಅನ್ವಯವಾಗುವ ವಿವಾದವಾಗಿದೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಬಗೆಗಿನ ನಿಬಂಧಕರ ತೀರ್ಮಾನವೇ ಅಂತಿಮವಾಗಿರತಕ್ಕದ್ದು. ಮತ್ತು ಅದು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲ್ಪಡತಕ್ಕದ್ದಲ್ಲ.

(4) ಮಂಡಳಿಯ ಸದಸ್ಯರ ಚುನಾವಣೆಗೆ ಮತ್ತು ಅಧ್ಯಕ್ಷ, ಉಪಾಧ್ಯಕ್ಷ, ಚೇರಮನ್, ವೈಸ್‌ಚೇರಮೆನ್ ಅಥವಾ ಯಾವುದೇ ಇತರ ಪದಾಧಿಕಾರಿಯ ಚುನಾವಣೇ ಸಂಬಂಧಿಸಿ ಎಲ್ಲಾ ವಿವಾದಗಳನ್ನು ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ದಾಖಲು ಮಾಡತಕ್ಕದ್ದು.

(5) ಸಹಕಾರಿ ಚುನಾವಣಾ ಆಯೋಗದ ರಚನೆಯಾದ ದಿನಾಂಕದಂದು ನಿಬಂಧಕರಲ್ಲಿ ಬಾಕಿ ಇರುವ ಎಲ್ಲಾ ವಿವಾದಗಳನ್ನು, ಈ ತಿದ್ದುಪಡಿಯನ್ನು ಮಾಡಲಾಗಿಲ್ಲ ಎಂಬಂತೆ, ನಿಬಂಧಕನು ವಿಲೆ ಮಾಡತಕ್ಕದ್ದು.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಕಲಂ.39 ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.

**39. ತೀರ್ಮಾನಕ್ಕಾಗಿ ಕಳುಹಿಸಬಹುದಾದ ವಿವಾದಗಳು :**

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ, –

(ಎ) ಸದಸ್ಯರ, ಹಿಂದಿನ ಸದಸ್ಯರ ಮತ್ತು ಸದಸ್ಯರ, ಹಿಂದಿನ ಸದಸ್ಯರ ಮತ್ತು ಮೃತ ಸದಸ್ಯರ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳ ನಡುವೆ; ಅಥವಾ

(ಬಿ) ಸದಸ್ಯನ, ಹಿಂದಿನ ಸದಸ್ಯನ ಅಥವಾ ಸದಸ್ಯನ, ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿ, ಅದರ ಮಂಡಳಿ ಅಥವಾ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವೊಬ್ಬ ಪದಾಧಿಕಾರಿ, ಏಜೆಂಟ್ ಅಥವಾ ನೌಕರನ ನಡುವೆ; ಅಥವಾ

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಅಥವಾ ಅದರ ಮಂಡಳಿ ಮತ್ತು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವುದೇ ಹಿಂದಿನ ಮಂಡಳಿ, ಯಾವೊಬ್ಬ ಪದಾಧಿಕಾರಿ, ಏಜೆಂಟ್ ಅಥವಾ ನೌಕರ ಅಥವಾ ಯಾವೊಬ್ಬ ಹಿಂದಿನ ಪದಾಧಿಕಾರಿ, ಹಿಂದಿನ ಏಜೆಂಟ್ ಅಥವಾ ಹಿಂದಿನ ನೌಕರ ಅಥವಾ ಯಾವೊಬ್ಬ ಮೃತ ಪದಾಧಿಕಾರಿಯ, ಮೃತ ಏಜೆಂಟಿನ ಅಥವಾ ಮೃತ ನೌಕರನ ನಾಮನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯ ನಡುವೆ; ಅಥವಾ

(ಡಿ) ಒಂದು ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮತ್ತು ಯಾವುದೇ ಇತರ ಸಹಕಾರಿ ಅಥವಾ ಸಾಲ ನೀಡಿಕೆ ಏಜೆನ್ಸಿಯ ನಡುವೆ,

– [ಸಹಕಾರಿಯ ಆಡಳಿತ ಮಂಡಳಿಯ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ವಿವಾದವನ್ನು ಹೊರತು ಪಡಿಸಿ, ಯಾವುದೇ ವಿವಾದ ಉಂಟಾದರೆ,] ಅಂಥ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

**(2) (1)ನೇ ಉಪಪ್ರಕರಣಗಳಿಗಾಗಿ, ಈ ಮುಂದಿನ ವಿವಾದಗಳನ್ನು, ಎಂದರೆ.–**

(ಎ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು, ಒಬ್ಬ ಸದಸ್ಯ ಅಥವಾ ಮೃತ ಸದಸ್ಯನ ನಾಮನಿರ್ದೇಶಿತರಿಂದ, ವಾರಸುದಾರರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ ತನಗೆ ಬಾಕಿ ಇರುವ ಯಾವುದೇ ಸಾಲ ಅಥವಾ ಬೇಡಿಕೆಗಾಗಿ, ಅಂಥ ಸಾಲ ಅಥವಾ ಬೇಡಿಕೆ ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅದು ಮಾಡುವ ಕ್ಲೇಮು;

(ಬಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಪ್ರಧಾನ ಸಾಲಗಾರನಿಂದ ತನಗೆ ಬಾಕಿಯಿರುವ ಯಾವುದೇ ಸಾಲ ಅಥವಾ ಬೇಡಿಕೆಯ ಸಂಬಂಧದಲ್ಲಿ, ಅಂಥ ಸಾಲ ಅಥವಾ ಸಂದಾಯ ಸ್ವೀಕೃತವಾಗಿರಲು ಅಥವಾ ಇಲ್ಲದಿರಲಿ, ಅಂಥ ಸಾಲವನ್ನು ಪ್ರಧಾನ ಸಾಲಗಾರನು ತೀರಿಸಲು ತಪ್ಪಿದ ಕಾರಣದಿಂದಾಗಿ ಅದನ್ನು ಜಾಮೀನುದಾರನಿಂದ ವಸೂಲು ಮಾಡಿರುವ ಸಂದರ್ಭದಲ್ಲಿ, ಪ್ರಧಾನ ಸಾಲಗಾರನ ವಿರುದ್ಧ ಜಾಮೀನುದಾರನಿಗಿರುವ ಕ್ಲೇಮು;

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ನಿರ್ದೇಶಕನ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದ;

(ಡಿ) ಔದ್ಯಮಿಕ ವಿವಾದಗಳ ಅಧಿನಿಯಮ, 1947ರಲ್ಲಿ (1947ರ ಕೇಂದ್ರ ಅಧಿನಿಯಮ 14) ಏನೇ ಒಳಗೊಂಡಿದ್ದರೂ, ಉದ್ಯೋಗದ ನಿಬಂಧನೆಗಳು, ಕಾರ್ಯ ನಿರ್ವಹಣಾ ಪರಿಸ್ಥಿತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಕೈಗೊಂಡ ಶಿಸ್ತು ಕ್ರಮಗಳಿಗೆ ಸಂಬಂಧಪಟ್ಟ ವಿವಾದವೂ ಸೇರಿದಂತೆ ಒಂದು ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮತ್ತು ಅದರ ನೌಕರರು ಅಥವಾ ಹಿಂದಿನ ನೌಕರರು ಅಥವಾ ಮೃತ ನೌಕರನ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ನಡುವೆ ಉಂಟಾಗುವ ಯಾವುದೇ ವಿವಾದ;

(ಇ) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಸದಸ್ಯ, ಹಿಂದಿನ ಸದಸ್ಯ, ಮೃತ ಸದಸ್ಯ ಅಥವಾ ಮೃತ ಪದಾಧಿಕಾರಿಯಿಂದ, ಹಿಂದಿನ ಏಜೆಂಟ್ ಅಥವಾ ಮೃತ ಏಜೆಂಟ್ ಅಥವಾ ಯಾವೊಬ್ಬ ನೌಕರ, ಹಿಂದಿನ ನೌಕರ, ಅಥವಾ ಮೃತ ನೌಕರನಿಂದ ಅಥವಾ ಅದರ ಈಗಿನ ಅಥವಾ ಹಿಂದಿನ ಮಂಡಳಿಯಿಂದ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಸ್ವತ್ತುಗಳಿಗೆ ಉಂಟಾದ ನಷ್ಟಕ್ಕಾಗಿ, ಅಂಥ ನಷ್ಟವು ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಮಾಡುವ ಕ್ಲೇಮು,

– ಇವುಗಳನ್ನು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದ ವಿವಾದಗಳೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಿದ ವಿವಾದವು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದುದೇ ಅಥವಾ ಅಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉಂಟಾದರೆ, ಅದರ ಮೇಲಿನ ರಿಜಿಸ್ಟ್ರಾರನ ನಿರ್ಧಾರ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(5) ಸಹಕಾರ ಚುನಾವಣಾ ಆಯೋಗದ ರಚನೆಯ ದಿನಾಂಕಕ್ಕೆ ರಿಜಿಸ್ಟ್ರಾರನ ಬಳಿ ಬಾಕಿಯಿರುವ ಎಲ್ಲಾ ಚುನಾವಣಾ ವ್ಯಾಜ್ಯಗಳನ್ನು, ಈ ತಿದ್ದುಪಡಿಯನ್ನು ಮಾಡದಿದ್ದರೆ ಹೇಗೋ ಹಾಗೆ ರಿಜಿಸ್ಟ್ರಾರನೇ ಇತ್ಯರ್ಥ ಪಡಿಸತಕ್ಕದ್ದು.

ಇವೆರಡು ಕಾಯಿದೆ ಉಪ ಕಲಂ.70(1)(ಬಿ) ಯನ್ನು ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.

1959ರ ಕಾಯಿದೆ 70(1)(ಬಿ)

"ಸದಸ್ಯನ ..................... ಅದರ ಮಂಡಳಿಯ ನಡುವೆ

1997ರ ಕಾಯಿದೆ ಕಲಂ.39(1)(ಬಿ)

"ಸದಸ್ಯನ ..................... ಅದರ ಮಂಡಳಿಯ ನಡುವೆ

ಉಪ ಕಲಂ.70(2)(ಸಿ)

1959ರ ಕಾಯಿದೆ 70(2)(ಸಿ)

"ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸಭಾಪತಿ, ಉಪಸಭಾಪತಿ ಕಾರ್ಯದರ್ಶಿ, ಖಜಾಂಚಿ ಅಥವಾ ಸಮಿತಿ ಸದಸ್ಯನ ಚುನಾವಣೆ ಸಂದರ್ಭದಲ್ಲಿ ಉದ್ಭವಿಸಬಹುದಾದ ಯಾವುದೇ ವಿವಾದ."

**ಉಪ ಕಲಂ.39(2)(ಸಿ) ಸಹಕಾರಿ ಅಥವಾ ಸಂಯುಕ್ತ**

"ಸಹಕಾರಿಯು ಅಧ್ಯಕ್ಷ, ಸಭಾಪತಿ, ಉಪಾಧ್ಯಕ್ಷ, ಉಪಸಭಾಪತಿ, ನಿರ್ದೇಶಕನ ಚುನಾವಣೆಗೆ ಸಂಬಂಧಪಟ್ಟಂತೆ ಉದ್ಭವಿಸುವ ಯಾವುದೇ ವಿವಾದ."

ಅಂದರೆ ಒಬ್ಬ ಸಂಘದ/ಸಹಕಾರಿಯ ಸದಸ್ಯ, ಆ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಪದಾಧಿಕಾರಿ ಅಥವಾ ಮಂಡಳಿ ನಿರ್ದೇಶಕನ ಮೇಲೆ ಚುನಾವಣೆಗೆ ಸಂಬಂಧಪಟ್ಟ ವಿಷಯದಲ್ಲಿ ಪ್ರಶ್ನಿಸುವ ಅಧಿಕಾರ ಹೊಂದಿರುತ್ತಾನೆ. ಉಪಕಲಂ.70(1)(ಸಿ) ಮತ್ತು 39(1)(ಸಿ) ಅಡಿ ಯಾರು ಯಾರ ಮೇಲೆ ಪ್ರಕರಣ ದಾಖಲಿಸಬಹುದು ಎಂದಿದ್ದು, ಅದೇ ಉಪಕಲಂ 70(2)ಸಿ ಮತ್ತು 39(2)(ಸಿ) ಅಡಿ ಯಾವ ವಿಷಯದ ಬಗ್ಗೆ ಎಂಬುದನ್ನು ಉಲ್ಲೇಖಿಸುತ್ತದೆ. ಇಂತಹ ವಿಷಯದಲ್ಲಿ ಚುನಾವಣೆಗೆ ಸಂಬಂಧಪಟ್ಟ ವಿಷಯದಲ್ಲಿ ಸದಸ್ಯನ ಹಿತಾಸಕ್ತಿ ಏನು? ಏಕೆಂದರೆ, ಯಾವುದೇ ದಾವಾ ಪ್ರಕರಣ ದಾಖಲಿಸಿದಾಗ, ಆ ವ್ಯಕ್ತಿಯ ಅಧಿಕಾರ ವ್ಯಾಪ್ತಿ ಉಲ್ಲೇಖಿಸಬೇಕಾಗುತ್ತದೆ. ಅಂದರೆ ತೊಂದರೆಗೊಳಗಾದ ವ್ಯಕ್ತಿ, ಪ್ರಕರಣ ದಾಖಲಿಸುವ ಅಧಿಕಾರವನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಉಲ್ಲೇಖಿಸಬೇಕು.

ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ/ಸೋತ ಅಭ್ಯರ್ಥಿಗಳು ಮಾತ್ರ ಅರ್ಹರು ಎಂಬ ನಂಬಿಕೆ ಸಾಮಾನ್ಯ ಸದಸ್ಯರಲ್ಲಿ ಇರುತ್ತದೆ. ಸೌಹಾರ್ದ ಕಾಯಿದೆ ಕಲಂ.23ರಡಿ (ಸಾಮಾನ್ಯ ಸಭೆ) ಉಪಕಲಂ.(3) (ಎಲ್) ನಡಿ ಆಯ್ಕೆಯಾದ ಮಂಡಳಿ ಸದಸ್ಯರನ್ನು ತೆಗೆದು ಹಾಕುವ ವಿಷಯ ಸೇರಿಸಿದೆ. ಅಂದರೆ ಒಬ್ಬ ಚುನಾಯಿತ ಮಂಡಳಿ ಸದಸ್ಯನ್ನು ಸಾಮಾನ್ಯ ಸಭೆಯ ಎಲ್ಲಾ ಸದಸ್ಯರ ಸಭೆಯಲ್ಲಿ ತೆಗೆದು ಹಾಕುವ ಅಧಿಕಾರ ಇದ್ದಾಗ, ಅದೇ ನಿರ್ದೇಶಕರನನ್ನು ಸಂಘದ/ಸಹಕಾರಿಯ ಹಿತಾಸಕ್ತಿಗೆ ಬದ್ಧತೆ ಇಲ್ಲದ ವ್ಯಕ್ತಿ ಆಯ್ಕೆಯಾದರೆ ಅವನನ್ನು ತೆಗೆದು ಹಾಕುವ ಬಗ್ಗೆ ಅಧಿಕಾರವಿಲ್ಲವೆಂದು ಹೇಗೆ ಹೇಳಲು ಸಾಧ್ಯ.

ನಿರ್ದೇಶಕನಾಗಿ ಆಯ್ಕೆಯಾಗುವ ಸಂದರ್ಭದಲ್ಲಿ ತಪ್ಪು ಮಾಹಿತಿ ನೀಡಿ ಅಂದರೆ, ಸುಸ್ತಿದಾರನಾದ್ದು, ಜಮೀನು ದಾರನಾಗಿ ಸುಸ್ತಿಯಾಗಿದ್ದರೆ ಅಥವಾ ಸಂಘದಲ್ಲಿ ಸಂಬಂಧಿಗಳನ್ನು ನೌಕರಿಗೆ ಸೇರಿಸಿದ್ದರೆ, ಹಣ ದುರುಪಯೋಗ ಮಾಡಿಕೊಂಡಿದ್ದರೆ, ಅದನ್ನು ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಮರೆ ಮಾಚಿದ್ದರೆ/ಘೋಷಿಸದಿದ್ದರೆ ಅಂತಹ ಆಯ್ಕೆಯಾದ ನಿರ್ದೇಶಕನ ಆಯ್ಕೆಯನ್ನು ಸೋತ ಅಭ್ಯರ್ಥಿಗಳು ಪ್ರಶ್ನಿಸದಿದ್ದರೆ, ಅಥವಾ ಅನರ್ಹತೆಯನ್ನು ದಾಖಲಿಸಿದ್ದ ದಾವಾ ಪ್ರಕರಣದಲ್ಲಿ ಉಲ್ಲೇಖಿಸದೆ, ವಿಚಾರಣೆ ನಡೆಯುತ್ತಿದ್ದರೆ, ಅಂತಹ ವಿಷಯದ ಬಗ್ಗೆ ಒಂದು ಸಂಘದ/ಸಹಕಾರಿಯ ಸಾಮಾನ್ಯ ಸದಸ್ಯ ಪ್ರಶ್ನಿಸುವ ಅಧಿಕಾರ ಇದೆ.

ದಾವಾ ಪ್ರಕರಣ ದಾಖಲಿಸುವ ವ್ಯಕ್ತಿ ಆ ಪ್ರಕರಣ ಹೂಡಲು ಅರ್ಜಿದಾರನಿಗೆ ಇರುವ ಅಧಿಕಾರವನ್ನು ನಿರೂಪಿಸಬೇಕು. ನಿಬಂಧಕರ ಕಛೇರಿಯಲ್ಲಿ ಪ್ರಕರಣ ಸ್ವೀಕರಿಸುವಾಗ ಇದನ್ನು ನಿರೂಪಿಸಬೇಕೆಂದು ಕೇಳುತ್ತಾರೆ. ಅಂದರೆ ಸಾಮಾನ್ಯ ಸದಸ್ಯನಿಗೆ ಮಂಡಳಿ ಚುನಾವಣೆಯಲ್ಲಿ ಮತದಾನ ನೀಡುವುದೊಂದೆ ಹಕ್ಕು ಎಂದು ಮತ್ತು ಚುನಾವಣೆ ನಂತರ ಸೋತ ಅಭ್ಯರ್ಥಿಗಳಿಗೆ ಮಾತ್ರ ಅಧಿಕಾರ ಇದೆ ಎಂದು ತಿಳಿದಿದ್ದಾರೆ. ಆದರೆ ಮತ ನೀಡಿದ ಸದಸ್ಯನ ಹಕ್ಕಿನಲ್ಲಿ, ತನ್ನ ಮತ ನಿರರ್ಥಕವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ವಿಹಿತವಾಗಿದೆ ಎಂದು ಭಾವಿಸಿಲ್ಲ. ಸಾರ್ವತ್ರಿಕ ಚುನಾವಣೆಯಲ್ಲಿ ಒಬ್ಬ ಮತದಾರನನ್ನು ಜೀವಪ್ರತಿನಿಧಿ ಆಯ್ಕೆ ಪ್ರಶ್ನಿಸುವ ಅಧಿಕಾರ ಹೊಂದಿರುವಂತೆ ಸಹಕಾರಿ ಸಂಘದ/ಸಹಕಾರಿಯೂ ಸದಸ್ಯನು ತನ್ನ ಸಂಘದ/ಸಹಕಾರಿಯ ನಿರ್ದೇಶಕ ಅರ್ಹನಾಗಿರಬೇಕು ಮತ್ತು ಅವನ್ನು ಸಂಘದ/ಸಹಕಾರಿಯೂ ಹಿತಾಸಕ್ತಿ ಕಾಪಾಡುವಂತೆ ನೋಡಿಕೊಳ್ಳುವ ಜವಾಬ್ದಾರಿ – ಒಂದು ಸಹಕಾರಿ/ಸಂಘದ ಸದಸ್ಯನ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿ. ಆದ್ದರಿಂದ ಕಲಂ.70(1)ಸಿ ಮತ್ತು (2)ಸಿ ಹಾಗೂ ಸೌಹಾರ್ದ ಕಾಯಿದೆ ಕಲಂ.39(1)(ಸಿ) ಮತ್ತು (2)ಸಿ ಅಡಿ ಆಡಳಿತ ಮಂಡಳಿ ಪದಾಧಿಕಾರಿಗಳು ಮತ್ತು ಮಂಡಳಿ ಸದಸ್ಯರ ಆಯ್ಕೆ ಬಗ್ಗೆ ದಾವಾ ದಾಖಲಿಸಿ ಅಥವಾ ರಿಟ್ ಅರ್ಜಿ ಮೂಲಕ ಪ್ರಕರಣ ದಾಖಲಿಸಿ ಪರಿಹಾರ ಪಡೆಯುವ ಹಕ್ಕು ಹೊಂದಿದ್ದಾನೆ.

ಒಂದು ಸಹಕಾರ ಸಂಘದ/ಸಹಕಾರಿಯು ಮಾಲೀಕನಾಗಿರುವುದರಿಂದ, ಆ ಸಂಘವು/ಸಹಕಾರಿ ನಿರ್ವಹಣೆಗಾಗಿ ಆಯ್ಕೆ ಮಾಡಿದ ಮಂಡಳಿ ಸದಸ್ಯನು ಅರ್ಹನಾಗಿರಬೇಕು ಮತ್ತು ಸದಸ್ಯರಿಗೆ ಅಗತ್ಯವಾದ ಸೇವೆಗಳನ್ನು ನೀಡಲು, ಉಪವಿಧಿ/ಉಪನಿಯಮಗಳಲ್ಲಿ ನಿಗದಿ ಪಡಿಸಿದ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿ, ಆಸಕ್ತಿ ಮತ್ತು ಭದ್ರತೆ ಇರಬೇಕು. ಈ ರೀತಿ ಇಲ್ಲದ ಸದಸ್ಯನು ಸಂಘದ/ಸಹಕಾರಿಯೂ ಸಂಪನ್ಮೂಲವನ್ನು ಸದುಪಯೋಗ ಪಡಿಸಿ ಸದಸ್ಯರಿಗೆ ನಿಗದಿ ಪಡಿಸಿದ ಸೇವೆಗಳನ್ನು ನೀಡಬೇಕು ಎಂಬ ಆಶಯದಿಂದ ಮಂಡಳಿ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಆದರೆ ಆಯ್ಕೆಯಾದ ಪದಾಧಿಕಾರಿ ಮತ್ತು ಮಂಡಳಿ ಸದಸ್ಯರು, ವಾಮಮಾರ್ಗದಿಂದ ಅಥವಾ ತಪ್ಪು ಮಾಹಿತಿ ನೀಡಿ ಆಯ್ಕೆಯಾಗಿದ್ದರೆ, ಅಂತಹ ವ್ಯಕ್ತಿಗಳನ್ನು ತೆಗೆದು ಹಾಕಲು ಕಲಂ.27 ರಲ್ಲಿ ಅಂದರೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಕಾಯಿದೆ ಕಲಂ.23(3)(ಎಲ್) ರಡಿ ಮಂಡಳಿ ನಿರ್ದೇಶಕರನ್ನು ತೆಗೆದು ಹಾಕಲು ಅವಕಾಶ ಇದ್ದರೂ, ಅದಕ್ಕಾಗಿ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25 ರ ತನಕ ಕಾಯಬೇಕು ಮತ್ತು ಅದರಲ್ಲಿ ಚರ್ಚಿಸುವ ಪೂರ್ವದಲ್ಲಿ ಆಡಳಿತ ಮಂಡಳಿ ತನ್ನ ಸಭೆಯಲ್ಲಿ ಆ ವಿಷಯ ಮಂಡನೆಗೆ ಒಪ್ಪಿಗೆ ನೀಡಬೇಕು. (ಸದಸ್ಯರ ಮನವಿ ನೀಡಿದ್ದರೂ)

ಆದ್ದರಿಂದ ಪ್ರತಿಯೊಬ್ಬ ಸಹಕಾರಿ/ಸಂಘದ ಸದಸ್ಯ ಕಲಂ.70/39 ರಡಿ ದಾವಾ ಪ್ರಕರಣ ದಾಖಲಿಸಲು ಅವಕಾಶ ಕಲ್ಪಿಸಿರುವುದರಿಂದ ಮತ್ತು ಅಂತಹ ಪ್ರಕರಣ ಇತ್ಯರ್ಥಕ್ಕೆ ಬಹುಮತದ ತೀರ್ಮಾನದ ಅವಶ್ಯಕತೆ ಇರುವುದರಿಂದ, ಅದಕ್ಕೆ ಬದಲಾಗಿ ದಾವಾ ಪ್ರಕರಣ ದಾಖಲಿಸಲು ಅಧಿಕಾರ ಹೊಂದಿರುವುದರಿಂದ, ದಾವಾ ಪ್ರಕರಣದ ಪರಿಹಾರ ಪಡೆಯಲು ಹಕ್ಕುಳ್ಳವನಾಗಿದ್ದಾನೆ. ಆ ಹಕ್ಕನ್ನು ಕಾನೂನೂ ಬದ್ಧವಾಗಿಯೂ ಪಡೆಯಲು ಕಲಂ.70/39 ರಲ್ಲಿ ಅವಕಾಶ ಉಪಯೋಗಿಸಿಕೊಳ್ಳಲು ಮತ್ತು ಪರಿಹಾರ ಪಡೆಯಲು ಅವಕಾಶ ಇದೆ ಎಂಬುದನ್ನು ಬಹಳಷ್ಟು ಸಹಕಾರಿ/ಸಂಘದ ಸದಸ್ಯರು ಪರಿಹಾರ ಪಡೆಯಬಹುದು.

70ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಲೇಖನ

# ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು

– ಶ್ರೀಮತಿ ಕವಿತ ಆರ್, ವ್ಯವಸ್ಥಾಪಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

## ಪೀಠಿಕೆ

ಭಾರತದಲ್ಲಿನ ಹಿಂದುಳಿದ ವರ್ಗಗಳ ಅಭಿವೃದ್ಧಿ ಅಗತ್ಯಗಳನ್ನು ಪರಿಹರಿಸುವಲ್ಲಿ ಸಹಕಾರಿ ಚಳುವಳಿಯು ಮಹತ್ವದ ಪಾತ್ರವನ್ನು ವಹಿಸಿದೆ. ಸಹಕಾರಿ ಸಂಸ್ಥೆಗಳು ಪ್ರಮುಖ ಹಂತದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಾಗಿದ್ದು, ಸಮಾಜದ ಹಿಂದುಳಿದ ಮತ್ತು ಕಡಿಮೆ ಪ್ರಾತಿನಿಧ್ಯದ ವರ್ಗಗಳ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ.

ಭಾರತವು 8 ಲಕ್ಷ ನೋಂದಾಯಿತ ಸಹಕಾರ ಸಂಘಗಳನ್ನು ಹೊಂದಿದೆ, ವಿಶೇಷವಾಗಿ ಕೃಷಿ, ಬ್ಯಾಂಕಿಂಗ್, ವಸತಿ ಕ್ಷೇತ್ರಗಳಲ್ಲಿ, ಕೃಷಿ ವಲಯದಲ್ಲಿ, ಸಹಕಾರಿ ಡೈರಿಗಳು, ಸಕ್ಕರೆ ಕಾರ್ಖಾನೆಗಳು ಇತ್ಯಾದಿಗಳು ರೈತರು ಉತ್ಪಾದನೆ ಮಾಡಿದ ಉತ್ಪನ್ನಗಳನ್ನು ಸಂಸ್ಕರಿಸಲು ಮತ್ತು ಮಾರಾಟ ಮಾಡಲು ರೂಪುಗೊಂಡಿವೆ.

ನಗರ ಪ್ರದೇಶಗಳಲ್ಲಿ, ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರಿ ಕ್ರೆಡಿಟ್ ಸೊಸೈಟಿಗಳು ಸಾಮಾನ್ಯ ಸಾಂಸ್ಥಿಕ ಕ್ರೆಡಿಟ್ ರಚನೆಗಳಿಂದ ಸಾಲ ಸೌಲಭ್ಯಗಳನ್ನು ಪಡೆಯಲು ಕಷ್ಟಕರವಾದ ಅನೇಕ ಕಂಪನಿಗಳು ಅಥವಾ ವ್ಯಕ್ತಿಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುವುದರ ಮೇಲೆ ಕೇಂದ್ರೀಕರಿಸುತ್ತವೆ. ಅಲ್ಲದೆ, ಭಾರತದಲ್ಲಿ ಸಹಕಾರಿ ಮಾರುಕಟ್ಟೆ ಸಂಘಗಳು ಮತ್ತು ಸಹಕಾರಿ ವಸತಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಈ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ತಜ್ಞರು ವಿವರಿಸುವಂತೆ ಶೇ.40 ರಷ್ಟು ಪಾಲನ್ನು ಸಹಕಾರ ಕ್ಷೇತ್ರದ ಮೂಲಕವೇ ನಿರ್ವಹಿಸಲಾಗುತ್ತಿದೆ. ಸಹಕಾರಿ ಕ್ಷೇತ್ರದ ಮೂಲಕ ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

## ಸಹಕಾರ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳು:

ಈ ಕ್ಷೇತ್ರ ಇಷ್ಟೊಂದು ಬೃಹದಾಕಾರವಾಗಿ ಬೆಳೆದಿದ್ದರೂ, ಅನೇಕ ಸಾಧನೆಗಳನ್ನು ಮಾಡಿದಾಗ್ಯೂ ಈ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಲು ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಇದುವರೆಗೂ ಇರಲಿಲ್ಲ. ಸಹಕಾರಿ ಕ್ಷೇತ್ರದ ತೊಂದರೆಗಳ ನಿವಾರಣೆಗೆ ಕೇಂದ್ರದ ಕೃಷಿ ಇಲಾಖೆಯ ಜೊತೆಗೆ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಮಂತ್ರಿಗಳನ್ನು ವಿನಂತಿಸಬೇಕಾಗಿತ್ತು. ದೇಶದ ಕೃಷಿ ಕ್ಷೇತ್ರ ಅತ್ಯಂತ ದೊಡ್ಡದಾಗಿರುವುದರಿಂದ ಕೃಷಿ ಸಚಿವಾಲಯವು ಸಹಕಾರಿ ಕ್ಷೇತ್ರದ ಕಡೆ ಗಮನಹರಿಸುವುದು ಸಾದ್ಯವಾಗುತ್ತಿರಲಿಲ್ಲ.

ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಅತ್ಯಗತ್ಯವಾಗಿದ್ದ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಜಾರಿಗೆ ತಂದಿರುವುದು ಹೆಮ್ಮೆಯ ವಿಷಯವಾಗಿದೆ. ಹೊಸ ಸಚಿವಾಲಯಕ್ಕೆ 'ಸಹಕಾರ ಸಚಿವಾಲಯ' ಎಂದು ಹೆಸರಿಸಲಾಗಿದೆ. 'ಸಹಕಾರ ಸೇ ಸಮೃದ್ಧಿ' ದರ್ಶನವನ್ನು ಸಾಕಾರಗೊಳಿಸಲು ಸಹಕಾರ ಸಚಿವಾಲಯವನ್ನು ರಚಿಸಲಾಗಿದೆ. ಈ ಸಚಿವಾಲಯವು ದೇಶದಲ್ಲಿ ಸಹಕಾರಿ ಆಂದೋಲನವನ್ನು ಬಲಪಡಿಸಲು ಪ್ರತ್ಯೇಕ ಆಡಳಿತ, ಕಾನೂನು ಮತ್ತು ನೀತಿ ಚೌಕಟ್ಟುಗಳನ್ನು ಒದಗಿಸುತ್ತದೆ.

ಹೊಸ ರಾಷ್ಟ್ರೀಯ ಸಹಕಾರ ನೀತಿಯ ರಚನೆಯು 'ಸಹಕಾರದಿಂದ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು, ಸಹಕಾರಿ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ಉತ್ತೇಜಿಸಲು, ದೇಶದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸಲು ಮತ್ತು ತಳಮಟ್ಟದಲ್ಲಿ ಅದರ ವ್ಯಾಪ್ತಿಯನ್ನು ವಿಸ್ತಾರಗೊಳಿಸಲು ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ, ಈ ಹಿಂದೆ ಮಧ್ಯಸ್ಥಗಾರರೊಂದಿಗೆ ಸಮಾಲೋಚನೆಗಳನ್ನು ನಡೆಸಲಾಗಿದ್ದು, ಹೊಸ ನೀತಿಯನ್ನು ರೂಪಿಸಲು ಕೇಂದ್ರ ಸಚಿವಾಲಯಗಳು / ಇಲಾಖೆಗಳು, ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು, ರಾಷ್ಟ್ರೀಯ ಸಹಕಾರಿ ಒಕ್ಕೂಟಗಳು, ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿತ್ತು. ರಾಷ್ಟ್ರೀಯ ಮಟ್ಟದ ಸಮಿತಿಯು ಹೊಸ ನೀತಿಯ ಕರಡನ್ನು ರೂಪಿಸಲು ಸಂಗ್ರಹಿಸಿದ ಪ್ರತಿಕ್ರಿಯೆ, ನೀತಿ ಸಲಹೆಗಳು ಮತ್ತು ಶಿಫಾರಸುಗಳನ್ನು ವಿಶ್ಲೇಷಿಸುತ್ತದೆ.

ಸಹಕಾರ ಸಚಿವಾಲಯದ ರಚನೆಯ ನಂತರ, ಭಾರತದ ಸಹಕಾರಿ ವಾಸ್ತುಶಿಲ್ಪವನ್ನು ದೇಶದ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳೊಂದಿಗೆ ಸಮನ್ವಯಗೊಳಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅವು ಈ ಕೆಳಗಿನಂತಿವೆ:

**1. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಕಂಪ್ಯೂಟರೀಕರಣ :** ಒಂದೇ ರಾಷ್ಟ್ರೀಯ ಸಾಫ್ಟ್‌ವೇರ್ ನೆಟ್ ವರ್ಕ್ ಮೂಲಕ ಒಟ್ಟು 63,000 ಕ್ರಿಯಾತ್ಮಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ಲ್ಯಾಂಪ್ಸ್ ಅನ್ನು ನಬಾರ್ಡ್‌ನೊಂದಿಗೆ ಲಿಂಕ್ ಮಾಡಲಾಗುತ್ತಿದೆ. ಇಲ್ಲಿಯವರೆಗೆ 24 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಇದಕ್ಕಾಗಿ ಹಾರ್ಡ್‌ವೇರ್ ಖರೀದಿ, ಡಿಜಿಟಲೀಕರಣ ಮತ್ತು ಬೆಂಬಲ ವ್ಯವಸ್ಥೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಒಟ್ಟು ರೂ. 437.17 ಕೋಟಿಗಳನ್ನು ರಾಜ್ಯಗಳಿಗೆ ಬಿಡುಗಡೆ ಮಾಡಿದೆ. ಈ ಕಾರ್ಯತತ್ಪರತೆಯು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ.

**2. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ಮಾದರಿ ಉಪವಿಧಿಗಳು:** ಡೈರಿ, ಮೀನುಗಾರಿಕೆ, ಗೋದಾಮುಗಳ ಸ್ಥಾಪನೆ, ಎಲ್ ಪಿ ಜಿ / ಪೆಟ್ರೋಲ್ / ಗ್ರೀನ್ ಎನರ್ಜಿ ಡಿಸ್ಟ್ರಿಬ್ಯೂಷನ್ ಏಜೆನ್ಸಿ, ಬ್ಯಾಂಕಿಂಗ್ ಕರೆಸ್ಪಾಂಡೆಂಟ್‌ಗಳು, ಸಾಮಾನ್ಯ ಸೇವಾ ಕೇಂದ್ರಗಳು ಮುಂತಾದ 25ಕ್ಕೂ ಹೆಚ್ಚು ವ್ಯವಹಾರ ಚಟುವಟಿಕೆಗಳನ್ನು ನಡೆಸಲು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ಅನುವು ಮಾಡಿಕೊಡಲು ಆಯಾ ರಾಜ್ಯ ಸಹಕಾರಿ ಕಾಯ್ದೆಯ ಪ್ರಕಾರ ಅಳವಡಿಸಿಕೊಳ್ಳಲು ಮಾದರಿ ಉಪವಿಧಿಗಳನ್ನು ತಯಾರಿಸಿ ಸೂಚಿಸಲಾಗಿದೆ. ಇಲ್ಲಿಯವರೆಗೆ ಮಾದರಿ ಉಪನಿಯಮಗಳನ್ನು 27 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಂಡಿವೆ ಹಾಗಿಯೇ ಇತರ ಉಳಿದ ರಾಜ್ಯಗಳಲ್ಲಿ ಇದನ್ನು ಅಳವಡಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ.

**3. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ (ಸಿಎಸ್‌ಸಿ) ಬಳಕೆ:** ಸಹಕಾರ ಸಚಿವಾಲಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ನಬಾರ್ಡ್ ಮತ್ತು ಸಾಮಾನ್ಯ ಸೇವಾ ಕೇಂದ್ರ – ವಿಶೇಷ ಉದ್ದೇಶ ವಾಹಕಗಳ ನಡುವೆ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಕಾರ್ಯಸಾಧ್ಯತೆಯನ್ನು ಸುಧಾರಿಸಲು, ಗ್ರಾಮ ಮಟ್ಟದಲ್ಲಿ ಇ–ಸೇವೆಗಳನ್ನು ಒದಗಿಸಲು ಮತ್ತು ಉದ್ಯೋಗ ಸೃಷ್ಟಿಸಲು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ತಿಳುವಳಿಕಾ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಇಲ್ಲಿಯವರೆಗೆ 17,000ಕ್ಕೂ ಹೆಚ್ಚು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ ಮಾಡಲಾಗಿದೆ. ಜುಲೈ 21, 2023ರಂದು ಗೌರವಾನ್ವಿತ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾದ ರಾಷ್ಟ್ರೀಯ ಮೆಗಾ

ಕಾನ್ಕ್ಲೇವ್‌ನಲ್ಲಿ 6000 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಸೇವೆಗಳನ್ನು ನೀಡಲು ಪ್ರಾರಂಭಿಸಿವೆ.

**4. ರಾಷ್ಟ್ರೀಯ ಸಹಕಾರಿ ಡೇಟಾಬೇಸ್:** ನೀತಿ ನಿರೂಪಣೆ ಮತ್ತು ಅನುಷ್ಠಾನದಲ್ಲಿ ಪಾಲುದಾರರಿಗೆ ಅನುಕೂಲವಾಗುವಂತೆ ದೇಶದಲ್ಲಿ ಸಹಕಾರಿ ಸಂಸ್ಥೆಗಳ ಅಧಿಕೃತ ಮತ್ತು ನವೀಕೃತ ದತ್ತಾಂಶ ಭಂಡಾರವನ್ನು ಸಿದ್ಧಪಡಿಸಲು ಪ್ರಾರಂಭಿಸಲಾಗಿದೆ.

**5. ರಾಷ್ಟ್ರೀಯ ಸಹಕಾರ ನೀತಿ:** 'ಸಹಕಾರದಿಂದ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು ಅನುವು ಮಾಡಿಕೊಡುವ ಪರಿಸರ ವ್ಯವಸ್ಥೆಯನ್ನು ರಚಿಸಲು ಹೊಸ ಸಹಕಾರ ನೀತಿಯನ್ನು ರೂಪಿಸಲು ದೇಶಾದ್ಯಂತದ ತಜ್ಞರು ಮತ್ತು ಮಧ್ಯಸ್ಥಗಾರರನ್ನು ಒಳಗೊಂಡ ರಾಷ್ಟ್ರೀಯ ಮಟ್ಟದ ಸಮಿತಿಯನ್ನು ರಚಿಸಲಾಯಿತು.

**6. ಬಹುರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002ರ ತಿದ್ದುಪಡಿ:** 97ನೇ ಸಾಂವಿಧಾನಿಕ ತಿದ್ದುಪಡಿಯ ನಿಬಂಧನೆಗಳನ್ನು ಸೇರಿಸಲು, ಆಡಳಿತವನ್ನು ಬಲಪಡಿಸಲು, ಪಾರದರ್ಶಕತೆಯನ್ನು ಹೆಚ್ಚಿಸಲು, ಉತ್ತರದಾಯಿತ್ವವನ್ನು ಹೆಚ್ಚಿಸಿ, ಬಹು ರಾಜ್ಯ ಸಹಕಾರಿ ಸಂಘಗಳಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಸುಧಾರಿಸಲು ಕೇಂದ್ರ ಆಡಳಿತದ ಎಂಎಸ್ ಸಿ ಎಸ್ ಕಾಯ್ದೆ, 2002ನ್ನು ತಿದ್ದುಪಡಿ ಮಾಡಲು ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲಾಯಿತು.

**7. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ:** ವಿವಿಧ ವಲಯಗಳಲ್ಲಿ ಎನ್ ಸಿ ಡಿ ಸಿ ಪ್ರಾರಂಭಿಸಿದ ಸಹಕಾರಿ ಸಂಸ್ಥೆಗಳ ಹೊಸ ಯೋಜನೆಗಳೆಂದರೆ ಸ್ವಸಹಾಯ ಸಂಘಗಳಿಗಾಗಿ 'ಸ್ವಯಂಶಕ್ತಿ ಸಹಕಾರ'; ದೀರ್ಘಕಾಲೀನ ಕೃಷಿ ಸಾಲಕ್ಕಾಗಿ 'ಧೀರ್ಘವಧಿ ಕೃಷಿಕ ಸಹಕಾರ'; ಹೈನುಗಾರಿಕೆಗೆ 'ಡೈರಿ ಸಹಕಾರ' ಮತ್ತು ಮೀನುಗಾರಿಕೆಗೆ 'ನೀಲ ಸಹಕಾರ'. 2021–22ರ ಹಣಕಾಸು ವರ್ಷದಲ್ಲಿ ಈ ಹೊಸ ಯೋಜನೆಗಳಿಗೆ ಒಟ್ಟು 34,221 ಕೋಟಿ ರೂ.ಗಳ ಆರ್ಥಿಕ ನೆರವನ್ನು ವಿತರಿಸಲಾಗಿದೆ.

**8. ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್ ನಲ್ಲಿ ಸಾಲ ನೀಡಿಕೆ ಸದಸ್ಯ ಸಂಸ್ಥೆಗಳು:** ಅನುಸೂಚಿತವಲ್ಲದ ನಗರ ಸಹಕಾರಿ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್ ಫಾರ್ ಮೈಕ್ರೋ ಮತ್ತು ಸ್ಮಾಲ್ ಎಂಟರ್ಪ್ರೈಸಸ್ ಯೋಜನೆಯಲ್ಲಿ ಸಾಲ ನೀಡುವ ಸದಸ್ಯ ಸಂಸ್ಥೆಗಳಾಗಿ ಅಧಿಸೂಚಿತವಾಗಿವೆ.

**9. ಜಿಇಎಂ ಪೋರ್ಟಲ್ ನಲ್ಲಿ 'ಖರೀದಿದಾರರಾಗಿ' ಸಹಕಾರಿ ಸಂಸ್ಥೆಗಳು:** ಜಿಇಎಂನಲ್ಲಿ 'ಖರೀದಿದಾರ' ಎಂದು ನೋಂದಾಯಿಸಲು ಸಹಕಾರಿ ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ, ಇದು ಆರ್ಥಿಕ ಖರೀದಿ ಮತ್ತು ಹೆಚ್ಚಿನ ಪಾರದರ್ಶಕತೆಗೆ ಅನುಕೂಲವಾಗುವಂತೆ ಸುಮಾರು 40 ಲಕ್ಷ ಮಾರಾಟಗಾರರಿಂದ ಸರಕು ಮತ್ತು ಸೇವೆಗಳನ್ನು ಸಂಗ್ರಹಿಸಲು ಅನುವು ಮಾಡಿಕೊಡುತ್ತದೆ.

**10. ಸಹಕಾರಿ ಸಂಘಗಳ ಮೇಲಿನ ಸರ್ಚಾರ್ಜ್ ಕಡಿತ:** 1 ರಿಂದ 10 ಕೋಟಿ ರೂ.ವರೆಗಿನ ಆದಾಯ ಹೊಂದಿರುವ ಸಹಕಾರಿ ಸಂಘಗಳಿಗೆ ಸರ್ಚಾರ್ಜ್ ಅನ್ನು ಶೇಕಡಾ 12ರಿಂದ 7ಕ್ಕೆ ಇಳಿಸಲಾಗಿದೆ.

**11. ಕನಿಷ್ಠ ಪರ್ಯಾಯ ತೆರಿಗೆ ಇಳಿಕೆ:** ಸಹಕಾರಿ ಸಂಘಗಳಿಗೆ ಕನಿಷ್ಠ ಪರ್ಯಾಯ ತೆರಿಗೆಯನ್ನು ಶೇ.18.5ರಿಂದ ಶೇ.15ಕ್ಕೆ ಇಳಿಸಲಾಗಿದೆ.

**12. ಐಟಿ ಕಾಯ್ದೆಯ ಸೆಕ್ಷನ್ 269 ಎಸ್ ಟಿ ಅಡಿಯಲ್ಲಿ ಪರಿಹಾರ:** ಐಟಿ ಕಾಯ್ದೆಯ ಸೆಕ್ಷನ್ 269 ಎಸ್ ಟಿ ಅಡಿಯಲ್ಲಿ ಸಹಕಾರಿ ಸಂಸ್ಥೆಗಳ ವಹಿವಾಟಿನಲ್ಲಿ ತೊಂದರೆಗಳನ್ನು ತೆಗೆದುಹಾಕಲು ಸ್ಪಷ್ಟೀಕರಣ ನೀಡಲಾಗಿದೆ.

**13. ಹೊಸ ಸಹಕಾರಿ ಸಂಸ್ಥೆಗಳಿಗೆ ತೆರಿಗೆ ದರವನ್ನು ಕಡಿಮೆ ಮಾಡುವುದು:** ಮಾರ್ಚ್ 31, 2024ರೊಳಗೆ ಉತ್ಪಾದನಾ ಚಟುವಟಿಕೆಗಳನ್ನು ಪ್ರಾರಂಭಿಸುವ ಹೊಸ ಸಹಕಾರಿ ಸಂಸ್ಥೆಗಳಿಗೆ ಪ್ರಸ್ತುತ 30% ಮತ್ತು ಸರ್ಚಾರ್ಜ್ ಗೆ ಹೋಲಿಸಿದರೆ 15% ಕಡಿಮೆ ತೆರಿಗೆ ದರವನ್ನು ವಿಧಿಸಲು ಕೇಂದ್ರ ಬಜೆಟ್ 2023–24 ರಲ್ಲಿ ಘೋಷಣೆ ಮಾಡಲಾಗಿದೆ.

**14. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ನಗದು ಠೇವಣಿ ಮತ್ತು ಸಾಲಗಳ ಮಿತಿಯನ್ನು ಹೆಚ್ಚಿಸುವುದು:** ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ನಗದು ರೂಪದ ಠೇವಣಿ ಮತ್ತು ಸಾಲಕ್ಕಾಗಿ ಪ್ರತಿ ಸದಸ್ಯರ ಮಿತಿಯನ್ನು 20,000 ರೂ.ಗಳಿಂದ 2 ಲಕ್ಷ ರೂ.ಗಳಿಗೆ ಹೆಚ್ಚಿಸಲು 2023–24ರ ಕೇಂದ್ರ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿದೆ.

15. ಟಿಡಿಎಸ್ ಮಿತಿ ಹೆಚ್ಚಳ: ಟಿಡಿಎಸ್ ಗೆ ಒಳಗಾಗದೆ ಸಹಕಾರಿ ಸಂಸ್ಥೆಗಳಿಗೆ ನಗದು ಹಿಂಪಡೆಯುವ ಮಿತಿಯನ್ನು ವರ್ಷಕ್ಕೆ 1 ಕೋಟಿ ರೂ.ಗಳಿಂದ 3 ಕೋಟಿ ರೂ.ಗೆ ಹೆಚ್ಚಿಸಲು 2023–24ರ ಕೇಂದ್ರ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿದೆ.

16. ಸಕ್ಕರೆ ಸಹಕಾರಿ ಕಾರ್ಖಾನೆಗಳಿಗೆ ಪರಿಹಾರ: ನ್ಯಾಯಯುತ ಮತ್ತು ಲಾಭದಾಯಕ ಅಥವಾ ರಾಜ್ಯ ಸಲಹಾ ಬೆಲೆ ತಲುಪುವವರೆಗೆ ರೈತರಿಗೆ ಹೆಚ್ಚಿನ ಕಬ್ಬಿನ ಬೆಲೆಯನ್ನು ಪಾವತಿಸಲು ಸಕ್ಕರೆ ಸಹಕಾರಿ ಕಾರ್ಖಾನೆಗಳನ್ನು ಹೆಚ್ಚುವರಿ ಆದಾಯ ತೆರಿಗೆಗೆ ಒಳಪಡಿಸಬಾರದು.

**17. ಸಕ್ಕರೆ ಸಹಕಾರಿ ಕಾರ್ಖಾನೆಗಳ ದೀರ್ಘಕಾಲದ ಬಾಕಿ ಇರುವ ಸಮಸ್ಯೆಗಳ ಪರಿಹಾರ:** 2023–24ರ ಕೇಂದ್ರ ಬಜೆಟ್‌ನಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳು 2016–17ರ ಮೌಲ್ಯ ಮಾಪನ ವರ್ಷದ ಮೊದಲು ಕಬ್ಬು ಬೆಳೆಗಾರರಿಗೆ ಮಾಡಿದ ಪಾವತಿಗಳನ್ನು ವೆಚ್ಚವಾಗಿ ಕ್ಲೈಮ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ಅವರು ಸುಮಾರು 10,000 ಕೋಟಿ ರೂಪಾಯಿಗಳ ಪರಿಹಾರವನ್ನು ಪಡೆಯಲು ಸಾಧ್ಯವಾಗುತ್ತದೆ, ಇದರಿಂದಾಗಿ ದಶಕಗಳಿಂದ ಬಾಕಿ ಇರುವ ಆದಾಯ ತೆರಿಗೆ ಸಮಸ್ಯೆಗಳನ್ನು ಪರಿಹರಿಸಬಹುದು.

**18. ಹೊಸ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ಬೀಜ ಸಂಘ:** ಒಂದೇ ಬ್ರಾಂಡ್ ಅಡಿಯಲ್ಲಿ ಗುಣಮಟ್ಟದ ಬೀಜ ಕೃಷಿ, ಉತ್ಪಾದನೆ ಮತ್ತು ವಿತರಣೆಗಾಗಿ ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002ರ ಅಡಿಯಲ್ಲಿ ಹೊಸ ಉನ್ನತ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ಬೀಜ ಸಂಘವನ್ನು ಸ್ಥಾಪಿಸಲಾಗಿದೆ. ಈ ಸಂಘವು ರೈತರಿಗೆ ಸುಧಾರಿತ ಬೀಜಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ, ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸುತ್ತದೆ.

**19. ಹೊಸ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ಸಾವಯವ ಸೊಸೈಟಿ:** ಪ್ರಮಾಣೀಕೃತ ಮತ್ತು ಅಧಿಕೃತ ಸಾವಯವ ಉತ್ಪನ್ನಗಳನ್ನು ಉತ್ಪಾದಿಸಲು, ವಿತರಿಸಲು ಮತ್ತು ಮಾರಾಟ ಮಾಡಲು ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002ರ ಅಡಿಯಲ್ಲಿ ಹೊಸ ಉನ್ನತ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ಸಾವಯವ ಸೊಸೈಟಿಯನ್ನು ಸ್ಥಾಪಿಸಲಾಗಿದೆ. ಇದು ಸಾವ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ರೈತರ ಲಾಭವನ್ನು ಹೆಚ್ಚಿಸುತ್ತದೆ.

**20. ಹೊಸ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ರಫ್ತು ಸೊಸೈಟಿ:** ಸಹಕಾರಿ ವಲಯದಿಂದ ರಫ್ತಿಗೆ ಒತ್ತು ನೀಡಲು ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002ರ ಅಡಿಯಲ್ಲಿ ಹೊಸ ಉನ್ನತ ರಾಷ್ಟ್ರೀಯ ಬಹು–ರಾಜ್ಯ ಸಹಕಾರಿ ರಫ್ತು ಸೊಸೈಟಿಯನ್ನು ಸ್ಥಾಪಿಸಲಾಗಿದೆ.

**21. ಸಹಕಾರಿ ವಲಯದಲ್ಲಿ ಶಿಕ್ಷಣ ಮತ್ತು ತರಬೇತಿ:** ಸಹಕಾರಕ್ಕಾಗಿ ರಾಷ್ಟ್ರೀಯ ಸಹಕಾರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಯೋಜಿಸಲಾಗಿದೆ. ಶಿಕ್ಷಣ, ತರಬೇತಿ, ಸಲಹಾ, ಸಂಶೋಧನೆ ಮತ್ತು ಅಭಿವೃದ್ಧಿ. ಈ ವಿಶ್ವವಿದ್ಯಾಲಯವು ತರಬೇತಿ ಪಡೆದ ಮಾನವ ಶಕ್ತಿಯ ಸುಸ್ಥಿರ, ಸಮರ್ಪಕ ಮತ್ತು ಗುಣಮಟ್ಟದ ಪೂರೈಕೆಯನ್ನು ಖಚಿತಪಡಿಸುತ್ತದೆ ಮತ್ತು ಅಸ್ತಿತ್ವದಲ್ಲಿರುವ ಸಿಬ್ಬಂದಿಯ ಸಾಮರ್ಥ್ಯವರ್ಧನೆಗಾಗಿ ಕೆಲಸ ಮಾಡುತ್ತದೆ.

ಇನ್ನೂ ಇದೆ...

### 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದ ಲೇಖನ

# ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ

– ಶ್ರೀ ಯಶವಂತ ಕುಮಾರ ಬಿ. ಪುತ್ತೂರು, ದಕ್ಷಿಣ ಕನ್ನಡ.

2023ರ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯವು "ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" (Role of Cooperatives in Making India a $5 Trillion Economy and SDGs) ಎಂಬುದಾಗಿದೆ. ಈ ಸಹಕಾರ ಸಪ್ತಾಹ ಆಚರಣೆಯ 7 ದಿನಗಳ ಅವಧಿಯಲ್ಲಿ ಒಂದೊಂದು ದಿನವನ್ನು ಒಂದೊಂದು ವಿಷಯದೊಂದಿಗೆ ಆಚರಿಸಲಾಗುತ್ತಿದ್ದು, ದಿನಾಂಕ 14 ನವೆಂಬರ್ 2023ರಂದು "ಸಹಕಾರಿ ಸಂಸ್ಥೆಗಳಲ್ಲಿನ ಇತ್ತೀಚಿ

- **ಸಹಕಾರಿ ಕ್ಷೇತ್ರದಲ್ಲಿ ಡಿಜಿಟಲ್ ಪರಿವರ್ತನೆ :**

ಭಾರತದಲ್ಲಿ ಸಹಕಾರಿ ಕ್ಷೇತ್ರವು ಬ್ಯಾಂಕಿಂಗ್ ಪರಿಸರ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಎಲ್ಲಾ ಸಹಕಾರಿ ಬ್ಯಾಂಕುಗಳು ಒಟ್ಟಾರೆ ಠೇವಣಿದಾರರ ಸಂಖ್ಯೆ ಹೆಚ್ಚಾಗಿದ್ದು ಸಹಕಾರಿ ಸಂಘಗಳು. ಸಂಪೂರ್ಣ ಡಿಜಿಟಲ್ ರೂಪಾಂತರವು ಭವಿಷ್ಯದಲ್ಲಿ ಸಜ್ಜುಗೊಳಿಸಲು ಅವಶ್ಯಕವಾಗಿದೆ. ವಿಶೇಷವಾಗಿ ಸಾಂಕ್ರಾಮಿಕ ರೋಗದ ಆಗಮನದ ನಂತರ ಸಹಕಾರಿ ಬ್ಯಾಂಕುಗಳ ಡಿಜಿಟಲ್ ರೂಪಾಂತರವು ಅತ್ಯಗತ್ಯವಾಗಿವೆ. ತಾಂತ್ರಿಕ ಪ್ರಗತಿಗಳು ಈಗಾಗಲೇ ಇದ್ದರೂ ಸಹಕಾರಿ ಕ್ಷೇತ್ರಗಳು ಬದಲಾಗುತ್ತಿರುವ ಪರಿಸರವನ್ನು ನ್ಯಾವಿಗೇಟ್ ಮಾಡಲು ಬಯಸಿದರೆ ಡಿಜಿಟಲೀಕರಣಗೊಳ್ಳಬೇಕು. ಸಾಂಪ್ರಾದಯಿಕ ವಿಧಾನಗಳು ಮತ್ತು ಭೌತಿಕ ಸ್ಥಳಗಳು ಮೂಲಕ ಹಣಕಾಸು ಸೇವೆಗಳನ್ನು ಒದಗಿಸಲು ಸಾದ್ಯವಾಗುತ್ತದೆ. ಅದಾಗ್ಯೂ ಭವಿಷ್ಯದಲ್ಲಿ ಸರಳ ಮತ್ತು ಡಿಜಿಟಲ್ ಕಾರ್ಯಚರಣೆಗಳಿಗೆ ಅಧ್ಯತೆ ನೀಡುವ ಪ್ರಮುಖ ಗ್ರಾಹಕರನ್ನು ಉಳಿಸಿಕೊಳ್ಳಲು ಇದು ಉಪಯುಕ್ತವಾಗಿದೆ.

ಪ್ರಸ್ತುತ ಸಹಕಾರಿಗಳು ತಮ್ಮ ಗ್ರಾಹಕರು ಮತ್ತು ಸದಸ್ಯರೊಂದಿಗೆ ನಿಕಟ ಸಂಬಂಧಗಳನ್ನು ಅವಲಂಭಿಸಿವೆ. ಈ ಸಂಬಂಧಗಳನ್ನು ಉಳಿಸಿಕೊಳ್ಳಲು ಹಣಕಾಸು ಸೇವೆಗಳಿಗೆ ಆಕರ್ಷಿಸಲು ಅವು ಸಹಕಾರಿ. ಇಂದು ಬೆಳೆಯುತ್ತಿರುವ ಖಾಸಗಿ ಬ್ಯಾಂಕ್‌ಗಳ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ಸಹಕಾರಿ ಸಂಘಗಳು ಡಿಜಿಟಲ್ ವ್ಯವಹಾರಕ್ಕೆ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ಸಹಕಾರಿ ಸಂಘಗಳು ಡಿಜಿಟಲ್ ವ್ಯವಹಾರಕ್ಕೆ ಮಹತ್ವ ನೀಡಬೇಕಾಗುತ್ತದೆ. ಸಹಕಾರಿ ಸಂಘದ ವ್ಯವಹಾರವನ್ನು ಚುರುಕುತನವನ್ನು ಸುಧಾರಿಸಲು ಸಂಪೂರ್ಣ ಗಣಕಯಂತ್ರ ಅತ್ಯಧುನಿಕ ತಂತ್ರಜ್ಞಾನದೊಂದಿಗೆ ಹೊಸ ತನವನ್ನು ಅನುಷ್ಠಾನಗೊಳಿಸಬೇಕು.

ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಕಂಪ್ಯೂಟರೀಕರಣ ಮತ್ತು ಮಾಹಿತಿ ಮತ್ತು ತಂತ್ರಜ್ಞಾನದ ಅಗತ್ಯವಿದೆ. ಡಿಜಿಟಲೀಕರಣ ಮಾಹಿತಿ ಮತ್ತು ತಂತ್ರಜ್ಞಾನ ಮತ್ತು ಅಳವಡಿಸಿಕೊಳ್ಳದಿದ್ದರೆ, ಸಹಕಾರಿ ಕ್ಷೇತ್ರದಲ್ಲಿನ ಭಷ್ಟಚಾರದ ವಿರುದ್ಧ ಹೋರಾಡುವ ಕಷ್ಟಕರವಾಗಿದೆ.

- **ಆನ್ ಲೈನ್ ಬ್ಯಾಂಕಿಂಗ್ :**

ಆನ್ ಲೈನ್ ಬ್ಯಾಂಕಿಂಗ್ ಇಂಟರ್ನೆಟ್ ಮೂಲಕ ಹಣಕಾಸಿನ ವಹಿವಾಟು ನಡೆಸಲು ಸಹಾಯ ಮಾಡುತ್ತದೆ. ಠೇವಣಿಗಳು, ವರ್ಗಾವಣೆಗಳು ಮತ್ತು ಆನ್ ಲೈನ್ ಬಿಲ್ ಪಾವತಿಗಳು ಸೇರಿದಂತೆ ಸ್ಥಳೀಯ ಶಾಖೆಯ ಮೂಲಕ ಸಂಪ್ರದಾಯಿಕವಾಗಿ ಲಭ್ಯವಿರುವ ಪ್ರತಿಯೊಂದು ಸೇವೆಯನ್ನು ಆನ್‌ಲೈನ್ ಬ್ಯಾಂಕಿಂಗ್ ಗ್ರಾಹಕರಿಗೆ ನೀಡುತ್ತದೆ. ಈ ಆನ್ ಲೈನ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸಹಕಾರಿ ಸಂಘಗಳು ಅಳವಡಿಸಿಕೊಂಡರೆ ಅನೇಕ ಗ್ರಾಹಕರು ಸಹಕಾರಿ ಸಂಘದಲ್ಲಿ ವ್ಯವಹಾರ ಪ್ರಾರಂಭ ಮಾಡುತ್ತಾರೆ.

- ಆನ್ ಲೈನ್ ಬ್ಯಾಂಕಿಂಗ್ ಇಂಟರ್ನೆಟ್ ಮೂಲಕ ಹಣಕಾಸಿನ ವಹಿವಾಟು ನಡೆಸಲು ಸಹಕಾರಿ.
- ಮೂಲಭೂತ ಆನ್‌ಲೈನ್ ಬ್ಯಾಂಕಿಂಗ್ ವಹಿವಾಟುಗಳನ್ನು ಪೂಣಗೊಳಡಲಿ ಬ್ಯಾಂಕ್ ಶಾಖೆಗೆ ಭೇಟಿ ನೀಡುವ ಅಗತ್ಯವಿಲ್ಲ.
- ಆನ್‌ಲೈನ್ ಬ್ಯಾಂಕಿಂಗ್‌ಗಾಗಿ ನೊಂದಾಯಿಸಲು ಇಂಟರ್ನೆಟ್ ಸಂಪರ್ಕ ಮತ್ತು ಬ್ಯಾಂಕ್ ಕಾರ್ಡ್ ಅಗತ್ಯ ಇರುತ್ತದೆ.
- ಸಹಕಾರಿ ಸಂಘಗಳು ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆ ಜಾರಿ ಮಾಡುವುದರಿಂದ ಆಗುವ ಪ್ರಯೋಜನಗಳು :
- 24x7 ಸೇವೆಗಳು ಲಭ್ಯ ; ಸಾಂಪ್ರಾಯಿಕ ಬ್ಯಾಂಕಿಂಗ್‌ಗಿಂತ ಭಿನ್ನವಾಗಿ, ಇಂಟರ್ನೆಟ್ ವರ್ಷವಿಡೀ 24X7 ಸೇವೆಗಳನ್ನು ಪ್ರವೇಶಿಸಬಹುದು. ಸಮಯ ಉಳಿತಾಯ, ಖಾತೆಗಳ ಬ್ಯಾಲೆನ್ಸ್‌ಗಳನು ಪರಿಶೀಲಿಸಬಹುದು. ಚೆಕ್‌ಗಳನ್ನು ಠೇವನಿ ಹಣದ ವರ್ಗಾಯಿಸುವುದು, ಕ್ರೆಡಿಟ್ ಸ್ಕೋರ್ ವೀಕ್ಷಿಸಬಹುದು.
- ಸ್ವಯಂ ಚಾಲಿತ ಬಿಲ್ ಪಾವತಿ : ಸಂಪ್ರಾದಾಯಿಕ ವಿಧಾನಗಳನ್ನು ಬಳಸಿಕೊಂಡು ಬಿಲ್‌ಗಳನ್ನು ಪಾವತಿಸುವುದು ಸಮಯ, ಪ್ರಾಯನ, ವ್ಯರ್ಥವಾಗುತ್ತದೆ. ಸ್ವಯಂ ಚಾಲಿತ ಬಿಲ್ ಪಾವತಿಯಿಮದ ಸಮಯ, ಪ್ರಯಾಣ ಖರ್ಚುಗಳನ್ನು ಉಳಿಸುತ್ತದೆ.
- ತತ್‌ಕ್ಷಣ ಮತ್ತು ಸುರಕ್ಷಿತ : ಇಂಟೆರ್ನೆಟ್ ಬ್ಯಾಂಕಿಂಗ್ ಹಣದ ತ್ವರಿತ ಮತ್ತು ಸುರಕ್ಷಿತ ವರ್ಗಾಣೆಗೆ ಅನುಮತಿಸುತ್ತದೆ. ವಿಶೇಷವಾಗಿ ಎರಡೂ ಖಾತೆಗಳು ಒಂದೇ ಬ್ಯಾಂಕ್‌ನಲ್ಲಿ ನಡೆದರೆ, ಬಳಕೆದಾರರು ಈ ವಹಿವಾಟುಗಳ ನೈಜ ಸಮಯದ ಟ್ರ್ಯಾಕಿಂಗ್ ಅನ್ನು ಸಹ ಹೊಂದಿದ್ದಾರೆ ಪ್ರಕ್ರಿಯೆಯು ಸಮಯದಲ್ಲಿ ಅವರಿಗೆ ಭರವಸೆ ನೀಡುತ್ತಾರೆ ಮತ್ತು ವಹಿವಾಟು ಪೂರ್ಣಗೊಂಡಾಗ ನಿಖರವಾದ ಸಮಯವನ್ನು ಒದಗಿಸುತ್ತಾರೆ.
- ನಿಮಿಷಗಳಲ್ಲಿ ಅನೂಕೂಲಕರ ಖಾತೆ ತೆರೆಯುವಿಕೆ ಖಾತೆಯಿಂದ ಖಾತೆಗೆ ಪಾವತಿಗಳು ಅರ್ಥಗರ್ಭಿತ ಸಾಲದ ಅರ್ಜಿಗಳು, ನಿಗದಿತ ಪಾವತಿಗಳು, ವೈಯಕ್ತಿಕ ಡಿಜಿಟಲ್ ಕಾರ್ಡ್ ನಿರ್ವಹಣೆ, ವಿಶ್ವಾಸಾರ್ಹ ಭದ್ರತೆ, ಸಮಯ ಯೋಜಿತ ಸೂಚನೆಗಳು, ವೈಯಕ್ತಿಕ ಹಣಕಾಸು ನಿರ್ವಹಣೆ.

ಸರ್ಕಾರ ಮತ್ತು ಸಾರ್ವನಿಕ ಅಗತ್ಯತೆಗಳನ್ನು ಪೂರೈಸಲು ದೃಡವಾದ ಪಾವತಿ ವ್ಯವಸ್ಥೆಯನ್ನು ರಚಿಸಲು ಮತ್ತು ನಿರ್ವಹಿಸಲು ಅನುಕೂಲವಾಗುವಂತೆ ಆರ್ಥಿಕತೆಯ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರಿ ಸಂಘಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಐಟಿ ಮತ್ತು ತಂತ್ರಜ್ಞಾನದ ಪರಿಚಯದ ನಂತರ ಸಹಕಾರಿ ಕ್ಷೇತ್ರದ ಅಧುನೀಕರಣವು ಗ್ರಾಹಕರು ಮತ್ತು ಸಹಕಾರಿಗಳಿಗೆ ಲಾಭಾದಾಯಕವಾಗಿದೆ. ಸಹಕಾರಿ ಸಂಘ ಈಗ ಕೇವಲ ವ್ಯವಹಾರ ಭೌತಿಕ ವಹಿವಾಟುಗಳಿಗೆ ಸೀಮಿತವಾಗಿಲ್ಲ. ಆದರೆ ಕೈಯಲ್ಲಿ

ಹಿಡಿಯುವ ಸಾಧನೆಗಳಾಗಿ ಮಾರ್ಪಟ್ಟಿದೆ. ಬ್ಯಾಂಕಿಂಗ್‌ನ ಈ ಪ್ರಸ್ತುತ ಹಂತವನ್ನು "ಡಿಜಿಟಲ್ ಬ್ಯಾಂಕಿಂಗ್ ಎಂದು ಕರೆಯಲಾಗುತ್ತದೆ. ಕೋವಿಡ್–19 ಸಾಂಕ್ರಾಮಿಕವು ಸಹಕಾರಿ ರಂಗದಲ್ಲಿ ಡಿಜಿಟಲ್ ಬ್ಯಾಂಕಿಂಗ್‌ನ ಅಗತ್ಯವನ್ನು ಎಂದಿಗಿಂತಲು ಹೆಚ್ಚಿಸಿದೆ. ಈ ಸಾಂಕ್ರಾಮಿಕವು ಗ್ರಾಹಕರು ತಮ್ಮ ಹಣವನ್ನು ಪ್ರವೇಶಿಲು ಮತ್ತು ಡಿಜಿಟಲ್ ಚಾನೆಲ್‌ಗಳ ಮೂಲಕ ಬ್ಯಾಂಕಿಂಗ್ ಸೇವೆಗಳನ್ನು ಬಳಸಲು ಒತ್ತಾಯಿಸಿದೆ. ಈ ಬದಲಾವಣೆಯ ಬ್ಯಾಂಕ್‌ಗಳು ಸುಧಾರಿತ ಚಾನೆಲ್‌ಗಳ ಮೂಲಕ ಆಡಳಿತಗಳು ಮತ್ತು ಎಲ್ಲಾ ರೀತಿಯ ಕೊಡುಗೆಗಳನ್ನು ಪೂರ್ಣಗೊಳಿಸಲು ಪ್ರಾರಂಭಿಸಲು ತಂತ್ರಜ್ಞಾನದ ಮೂಲ ಸೌಕರ್ಯವನ್ನು ಸ್ಥಾಪಿಸಿರುವುದನ್ನು ಖಚಿತಪಡಿಸಿಕೊಳ್ಳಲು ದಾಮಿಸುತ್ತಿದೆ.

- ಸಾಂಪ್ರದಾಯಿಕ ಬ್ಯಾಂಕಿಂಗ್ ಎಂದರೆ ಪ್ರತಿಯೊಂದು ವಹಿವಾಟಿಗೆ ಸಹಕಾರಿ ಸಂಘಕ್ಕೆ ಭೇಟಿ ನೀಡುವುದು ಮತ್ತು ಎಲ್ಲಾ ಪೇಪರ್ ಸ್ಟೇಟ್ ಮೆಂಟ್‌ಗಳ ಮೂಲಕ ಖಾತೆ ಇತಿಹಾಸವನ್ನು ಟ್ರ್ಯಾಕ್ ಮಾಡುವುದು ಈಗ ಪೇಪರ್‌ಲೆಸ್ ಮಾಡಲು ಆಯ್ಕೆ, ಮಾಸಿಕ ಇಮೇಲ್‌ಗಳ ಮೂಲಕ ಎಲ್ಲಾ ವಹೀವಾಟು ಇತಿಹಾಸವನ್ನು ಪಡೆದುಕೊಳ್ಳವುದು ಅಥವಾ ನೆಟ್ ಬ್ಯಾಂಕಿಮಗ್ ಖಾತೆಯ ಮೂಲಕ ಗಮನಿಸಬಹುದು.
- ಸಾಂಪ್ರಾಯಿಕ ಅಧಿಸೂಚನೆಗಳು ಮತ್ತು ಎಚ್ಚರಿಕೆಗಳು ಎಂದರೆ ಕ್ಯಾಲೆಂಡರ್ ದಿನಾಂಕವನ್ನು ನೋಡುವುದು ಅಥವಾ ಬರೆಯುವುದು ಈಗ ಅಪ್ಲಿಕೇಶನಗಳು ಮತ್ತು ಇಮೇಲ್‌ಗಳ ಮೂಲಕ ಪಾವತಿಗಳಿಗೆ ಎಚ್ಚರಿಕೆ ಸಂದೇಶಗಳನ್ನು ಸ್ವೀಕರಿಸಬಹುದು. ವಿದ್ಯೂತ್ ಪೋನ್ ಗ್ಯಾಸ್, ಕ್ರೆಡಿಟ್ ಕಾರ್ಡ್, ವಿಮೆ ಮುಂತಾದ ಬಿಲ್‌ಗಳನ್ನು ಒಂದು ಬಟನೆನ್ ಕ್ಲಿಕ್‌ನಿಂದ ಅನುಖುಲ ತಕ್ಷಂತೆ ಪಾವತಿಸಬಹುದು. ಅಪ್ಲಿಕೇಶನ್‌ಗಳ ಮೂಲಕ ಈ ಎಲ್ಲಾ ಸಾಧನಗಳನ್ನು ವಿವರಗಳನ್ನು ಸ್ವಯಂ ಚಾಲಿತವಾಗಿ ಉಳಿಸಲಾಗುತ್ತದೆ. ಇದು ಸಮಯ ಮತ್ತು ಪ್ರಯಾಣ ಖರ್ಚು ಮತ್ತು ಕಾಗದವನ್ನು ಉಳಿಸುತ್ತದೆ.
- ಡಿಜಿಟಲ್ ತಂತ್ರಜ್ಞಾನ ಮತುತ ಉನ್ನಿತೀಕರಣ : ವಿದ್ಯೂನ್ಮಾನ ಉಪಕರಣಗಳು ವ್ಯವಸ್ಥೆಗಳು, ಸಾದನಗಳು ಮತ್ತು ಡೇಟಾವನ್ನು ಉತ್ಪಾದಿಸುವ ಸಂಗ್ರಹಿಸುವ ಅಥವಾ ಪ್ರಕ್ರಿಯೆಗೊಳಿಸಲು ಸಂಪನ್ಮೂಲಗಳಾಗಿವೆ.

ಸಹಕಾರಿ ಕ್ಷೇತ್ರಗಳು ಗ್ರಾಮೀಣ ಭಾರತದ ಬೆನ್ನಲುಬು" ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರ ಸಂಘಗಲು ರೈತರಿಗೆ ಉತ್ತಮ ರೀತಿಯಲ್ಲಿ ಸಹಾಯ ಮಾಡುತ್ತದೆ. ಅದರೆ ಜನರಿಗೆ ಸಹಾಯ ಮಾಡುವುದನ್ನು ಮುಂದುವರೆಸಲು ಹೊಸ ಹೊಸ ತಂತ್ರಜ್ಞಾನವನ್ನು ಅಳವಿಡಿಸಕೊಳ್ಳಬೇಕು.

**ಕೆಲವು ನಿರ್ಣಾಯಕ ಸವಾಲುಗಳು :**

- ತಾಂತ್ರಿಕ ಸನ್ನದ್ಧತೆ : ಸಹಕಾರಿ ಸಂಘಗಳು ಎಲ್ಲಾ ಅಂಕಿ ಅಂಶಗಳನ್ನು ಡೇಟಾ ಸುರಕ್ಷತೆಯ ಪ್ರಮುಕ ಕಾಳಜಿಯಾಗಿದೆ. ತಂತ್ರಜ್ಞಾನದ ದತ್ತಾಂಶ ಗೌಪ್ಯತೆ ಮತ್ತು ಭದ್ರತೆಯ ಬಾಗಿಲು ತೆರೆಯುವ ಮೂಲಕ ಸಹಕಾರಿನೊಂದಿಗಿನ ಜನರು.
- ಕ್ಷಿಪ್ರವಾಗಿ ಬದಲಾಗುತ್ತಿರುವ ತಂತ್ರಜ್ಞಾನ : ಪ್ರತಿ ದಿನವೂ ಹೊಂದಿಕೊಳ್ಳುವ ಕೆಲವು ಹೊಸ ಪರಿಹಾರಗಳಿವೆ ಮತ್ತು ತಂತ್ರಜ್ಞಾನವು ಮುಂಡೂಣೀಯ ಓಟಗಾರನಗಿರುವುದರಿಂದ ಪ್ರತಿದಿನ ಟನ್‌ಗಳನ್ನು ನವೀಕರಣಗಳನ್ನು ಹೊಂದಿದೆ.
- ಗ್ರಾಹಕರ ಸ್ವೀಕಾರ : ಸಹಕಾರಿ ಸಂಘಗಳು ಸಾಮೂಹಿಕ ಬ್ಯಾಂಕರ್‌ಗಳು ಅವುಗಳ ತಂತ್ರಜ್ಞಾನ ದ ಬಗ್ಗೆ ಚೆನ್ನಾಗಿ ತಿಳಿದಿಲ್ಲದ ಜನ ಸಾಮಾನ್ಯರೊಂದಿಗೆ ವ್ಯವಹರಿಸುತ್ತೇವೆ. ಆದ್ದರಿಂದ ಗ್ರಾಹಕರು ಈ ಎಲ್ಲಾ ಬದಲಾವಣೆಗಳಿಗೆ ಹೇಗೆ ಹೊಂದಿಕೊಳ್ಳುತ್ತಾರೆ. ಎಂಬುದು ಒಂದು ಉತ್ತಮ ಕಾಳಜಿಯಾಗಿದೆ. ಒಟ್ಟಾರೆಯಾಗಿ ಖಿನ್ನತೆ –ನಿರ್ವಹಣೆಯ ಉದ್ಯೋಗಿಗಳ ಸನ್ನದ್ಧತೆ ಮತ್ತು ಗ್ರಾಹಕರ ಅರಿವಿಸಿ ಇಟ್ಟೆ ಇದ್ದರೆ ಸಹಕಾರ ಕ್ಷೇತ್ರವು ಈ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬಹುದು.

**ಇಡೀ ರಾಜ್ಯ ಮತ್ತು ದೇಶದ ಎಲ್ಲಾ ಸಹಕಾರ ಕ್ಷೇತ್ರಗಳಿಗೆ ಈ ಸೌಲಭ್ಯವನ್ನು ಸಂಯೋಜಿಸಲು ರಾಷ್ಟ್ರೀಯ ಮಟ್ಟದ ಸಹಕಾರ ಸಂಸ್ಥೆಗಳ ಪಾತ್ರ :**

ತಂತ್ರಜ್ಞಾನವಿಲ್ಲದೆ, ಸಹಕಾರ ಚಳುವಳಿಯು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಮತ್ತು ನಿಧಾನವಾಗಿ ಈ ಕ್ಷೇತ್ರವು ಕೋರ್–ಬ್ಯಾಂಕಂಗ್‌ಗಾಗಿ ತಂತ್ರಜ್ಞಾವದತ್ತ ಸಾಗುತ್ತಿದೆ. ವೆಚ್ಚು ಒಂದು ಪ್ರಮುಖ ಕಾಳಜಿಯಾಗಿದೆ. ಓಂಈಇಅ, ಓಅಆಅ, ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ ಸಹ ನಗರ ಸಹಕಾರಿ ಬ್ಯಾಂಕ್‌ಗಳಿಗೆ ಸಹಾಯ ಮಾಡುತ್ತದೆ ಮತ್ತು ಪ್ರಮುಖ ಪಾತ್ರವನ್ನು ವಹಿಸುತ್ತದೆ. ವೆಚ್ಚವನ್ನು ಕಡಿಮೆ ಮಾಡುವಲ್ಲಿ ಈ ರೀತಿಯಾಗಿ ಸಹಕಾರಿಗಳ ನಡುವಿನ ಸಹಕಾರವು ಈ ಕ್ರಾಂತಿಯನ್ನು ಬಲಪಡಿಸುತ್ತದೆ.

ನಬಾರ್ಡ್ ಅನುಮತಿಗಳನ್ನು ಪಡೆಯುವಲ್ಲಿ ವಲಯವನ್ನು ಬೆಂಬಲಿಸಬಹುದು ಮತ್ತು ವಿಶ್ವಾಸಾರ್ಹತೆಯನ್ನು ಸ್ಥಾಪಿಸಬಹುದು. ಈ ವೇಳೆ ಯುವ ಪೀಳಿಗೆಯನ್ನು ಆಕರ್ಷಿಸಲು ವಿಫಲವಾದರೆ ನಗೆ ಸಹಕಾರವು ಶೀಘ್ರವಾಗಿ ತಮ್ಮ ಗ್ರಾಹಕರ ನೆಲೆಯನ್ನು ಕಳೆದುಕೊಳ್ಳುತ್ತದೆ. ಮತ್ತು ದೀರ್ಘವಧಿಯಲ್ಲಿ ನಿಧಾನವಾಗಿ ನಾಶವಾಗುತ್ತದೆ. ಇಲ್ಲಿಯವರೆಗೆ ಎಟಿಎಂಗಳಿಗೆ ಅಳವಡಿಸಿಕೊಂಡಿದಾರೆ ಅದರೆ ಈಗ ಅಪ್ಲೀಕೇಶನ್ ಅಧಾರಿತ ಬ್ಯಾಂಕಿಂಗ್‌ಗೆ ಎಟಿಎಂ ಗಳನ್ನು ಅಳವಡಿಸಿಕೊಂಡಿದ್ದಾರೆ ಅದರೆ ಈಗ ಅಪ್ಲೀಕೇಶನ್ ಅಧಾರಿತ ಬ್ಯಾಂಕಿಂಗ್‌ಗೆ ಹೋಗಬೇಕಾಗಿದೆ. ತಮ್ಮ ವೈಯಕ್ತಿಕ ಸ್ಪರ್ಶದ ಯುಎಸ್‌ಪಿ ಅನ್ನು ಇಟ್ಟುಕೊಂಡು ಅದನ್ನು ತಂತ್ರಜ್ಞಾನದೊಂದಿಗೆ ವಿಲೀನಗೊಳಿಸಬೇಕಾಗಿದೆ. ಏಕೆಂದರೆ ದಿನದ ಕೊನೆಯಲ್ಲಿ ವ್ಯವಹಾರದಲ್ಲಿನ ಮಾನವ ಸ್ಪರ್ಶ ಎಂದಿಗೂ ಕಳೆದುಹೋಗಬಾರದು.

ಈ ತಾಂತ್ರಿಕ ಚಂಡಮಾರುತವನ್ನು ಯಶಸ್ವಿಯಾಗಿ ಎದುರಿಸಲು ಸಹಕಾರಿ ಸಂಘಗಳು ಕೈ ಜೋಡಿಸಿ ಕೆಲಸ ಮಾಡಬೇಕಾಗಿದೆ. ನಬಾರ್ಡ್ ಏಕೈಕ ಮಂತ್ರವೆಂದರೆ ಸಹಕಾರಿ ಸಂಸ್ಥೆಗಳ ನಡುವಿನ ಸಹಕಾರ ವೆಚ್ಚದಲ್ಲಿ ಅನ್ವಯಿಸಿದರೆ ಮಾತ್ರ ಐಟಿ ಅನ್ವಯಿಸಬಹುದು.

**ಐಟಿ ಅಧಾರಿತ ಕಾರ್ಯಚರಣೆಗಳನ್ನು ತಂತ್ರಜ್ಞಾನದೊಂದಿಗೆ ಸುವ್ಯವಸ್ಥಿತಗೊಳಿಸಬೇಕು ಇದಕ್ಕಾಗಿ ಸೂಚಿಸಲಾದ ಹಂತಗಳು.**

1. ಜನರಿಗೆ ತಿಳಿದಿರುವುದು ಹೇಗೆ ? ಹೈಲೈಟ್ ಮಾಡಬೇಕು. ಭಾರತದ ಜನಸಂಖ್ಯೆಯ 66.46% ಗ್ರಾಮೀನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಸಹಕಾರಿ ಸಂಘಗಲು ಅವರನ್ನು ಚೆನ್ನಾಗಿ ತಿಳಿದಿವೆ. ಇದು ಅವರ ಪ್ರಮುಖ ಶಕ್ತಿಯಾಗಿದೆ ಮತ್ತು ಅವರು ಇದನ್ನು ಮಾತನಾಡಬೇಕು. ಪ್ರಚಾರ ಮಾಡಬೇಕು ಗ್ರಾಹಕ ಕೇಂದ್ರೀತ ಉತ್ಪನ್ನವನ್ನು ಪ್ರಚಾರ ಮಾಡಲು ಬಯಸಿದರೆ ಸಹಕಾರ ಸಂಘಗಳು ಉತ್ತಮ ಆಯ್ಕೆಯಾಗಿದೆ.
2. **ವೆಚ್ಚವನ್ನು ಲಾಭಕ್ಕೆ ಪರಿವರ್ತಿಸಿ :** ತಂತ್ರಜ್ಞಾನವು ಹಣವಾಗಿದೆ. NABAD, ಪ್ರತಿ ಗ್ರಾಹಕರ ಸ್ಪರ್ಶ ಪಾಯಿಂಟ್‌ನಲ್ಲಿ ಸಹಕಾರ ಸಂಘಗಳನ್ನು ಬೆಂಬಲಿಸುತ್ತದೆ. ಹಣಕಾಸಿನ ಸಾಕ್ಷರತೆಯನ್ನು ಒದಗಿಸುತ್ತದೆ. ಉಪ ಕ್ರಮಗಳಿಗೆ ತಂತ್ರಗಳೀಗೆ ಬೆಂಬಲವನ್ನು ನಿಡುತ್ತದೆ ಮತ್ತು ಎಲ್ಲಾ ಬೆಳವಣಿಗೆಗಳೀಗೆ ಉತ್ತೇಜನ ನೀಡಲು

ಚುರುಕಾದ ಐಟಿ ತಂಡವನ್ನು ರಚಿಸುತ್ತದೆ.

3. **ಬಲವಾದ ತಂತ್ರಗಳು :** ಹಣಕಾಸಿನ ಸಾಕ್ಷರತೆಗಾಗಿ ಖರ್ಚು ಮಾಡುವ ಪ್ರತಿ ಪೈಸೆಯನ್ನು ಬ್ಯಾಂಕಿಂಗ್ ವ್ಯವಹಾರಕ್ಕೆ ಪರಿವರ್ತಿಸುವುದು ಅಚಿತಿಮಗುರಿಯಾಗಿದೆ. ತಂತ್ರಜ್ಞಾನವನ್ನು ಪ್ರಾಮಾಣಿಕರಿಸುವಲ್ಲಿ ಬೆಂಬಲಿಸವು ಸಾಧ್ಯವಾಗುವಮತೆ ರಾಷ್ಟ್ರೀಯ ಮಟ್ಟದಲ್ಲಿ ಮಾರಟಗಾರರನ್ನು ಹುಡುಕುವುದು ನಬಾರ್ಡ್‌ನ ಗು–ರಿಯಾಗಿರಬೇಕು.
4. ತಾಂತ್ರಿಕ ಅಳವಡಿಕೆಯಲ್ಲಿ ಆರ್‌ಬಿಐ ಮತ್ತು ಕಾನೂನು ವ್ಯವಸ್ಥೆಗಳು ಸಹಕಾರಿ ಸಂಘಗಳನ್ನು ಹೇಗೆ ಬೆಂಬಲಿಸಬಹುದು.?

ಅರ್ಬನ್ ಕೋ–ಆಪರೇಟಿವ ಬ್ಯಾಂಕ್‌ಗಳ ಬಗ್ಗೆ ಆರ್.ಬಿ.ಯ ಕಾಳದ ಹೊಂದಿದೆ. ಸಹಕಾರಿ ಸಂಘಗಳ ಬ್ಯಾಂಕಿನ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗೆ ದಕ್ಕೆಯಾಗುವ ರೀತಿಯಲ್ಲಿ ನಡೆಸಬಾರದು ಆದ್ದರಿಂದ ಸೈಬರ್ ಭದ್ರತೆಯ ಮೇಲೆ ಬಲವಾದ ಗಮನವಿದೆ.

**ತಂತ್ರಜ್ಞಾನ, ಪ್ರತಿಭೆ ಮತ್ತು ಆಡಳೀತವು ಸಹಕಾರಿ ಸಂಘಗಳಿಗೆ ಪ್ರಮುಖ ಸವಾಲುಗಳನ್ನು ನೀಡುತ್ತದೆ. ಎಂದು ತಜ್ಞರು ಹೇಳುತ್ತಾರೆ.**

ಸಹಕಾರಿ ಸಂಘಗಳು ಆರ್ಥಿಕ ಮತ್ತು ಮಾನವ ಸಂಪನ್ಮೂಲ ನಿರ್ಬಂಧಗಳಿಂದ ಅಡ್ಡಪಡಿಸುತ್ತವೆ. ಅದು ತಂತ್ರಜ್ಞಾನವನ್ನು ಅಳವಡಿಸಕೊಳ್ಳುವ ಸಾಮಥ್ಯವನ್ನು ಮಿತಗೊಳೀಸುತ್ತದೆ. ಮತ್ತು ವೇಗವಾಗಿ ಬದಲಾಗುತ್ತಿರುವ ಪರಿಸರದಲ್ಲಿ ಪ್ರಸ್ತುತವಾಗಿರುತ್ತದೆ.

ತಂತ್ರಜ್ಞಾನ – ಬುದ್ದಿವಂತ ಗ್ರಾಹಕರವನ್ನು ಪೂರೈಸಲು ಸಾಲದಾತರು ಡಿಟಲೀಕರಣವನ್ನು ಅಳವಡಿಸಿಕೊಳ್ಳುವ ವಾತಾವರಣದಲ್ಲಿ ಸಹಕಾರಿ ಸಂಘಗಳು ತಮ್ಮ ತಂತ್ರಜ್ಞಾನದ ಬಳಕೆಯನ್ನು ಬಲಪಡಿಸಬೇಕಾಗಿದೆ. ಕೆಲವು ಸಹಕಾರಿ ಸಂಘಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡುವುದಿಲ್ಲ. ಇದರಿಮದಾಗಿ ಸಹಕಾರಿ ಹಿನ್ನಡೆಯಾಗುವುದು ಅಥವಾ ತಂತ್ರಜ್ಞಾನ ಮತ್ತು ಕೌಶಲ್ಯ, ಜ್ಞಾನ ಚಾಲಿತ ಸಂಪನ್ಮೂಲಗಳ ಕೊರತೆಯು ಕಾಣತೊಡಗುತ್ತದೆ. ಅದಕ್ಕೆ ಬೇಕಾಗಿ ಎಲ್ಲಾ ಸಹಕಾರಿ ಸಂಘಗಳು ಒಂದೇ ರೀತಿಯ ತಂತ್ರಾಂಶಗಳನ್ನು ಅಳವಡಿಸಿಕೊಂಡು ವ್ಯವಹಾರ ಪ್ರಾರಂಭ ಮಾಡುವುದು.

ಕೋರ್ ಬ್ಯಾಂಕಿಂಗ್ ಪರಿಹಾರವನ್ನು ಪರಿಚಯಿಸಿದ ನಂತರ ಸಹಕಾರಿ ಸಂಘಗಲು ಎದುರಿಸಬೇಕಾದ ಹೊಸ ಸವಾಲುಗಳಿವೆ. ಉದಾ. ಕಚಿಥಿಣಟ, ಮೊಬೈಲ್ ಪಾವತಿ ಮುಂತಾದ ವಿದೇಶಿ ಬ್ಯಾಂಕ್‌ಗಳು ಒದಗಿಸುವ ಸೌಲಭ್ಯಗಳೊಂದಿಗೆ ಹೇಗೆ ಸ್ಪರ್ಧಿಸುವುದು ಆಧುನಿಕ ಯುಗದಲ್ಲಿ ಉದ್ದನೆಯ ಸರತಿ ಸಾಲಿನಲ್ಲಿ ನಿಂತು ಸಮಯವನ್ನು ವ್ಯರ್ಥ ಮಾಡಲು ಬಯಸುವುದಿಲ್ಲವಾದ್ದರಿಂದ ಸಹಕಾರಿ ಸಂಘಗಲು ನಗದು ರಹಿತ ಸೌಲಭ್ಯಗಳನ್ನು ಒದಗಿಸುವ ಮೂಲಕ ಈ ದೇಶದ ಯುವ ಜನರೊಂದಿಗೆ ಸಂವಹನ ನಡೆಸುವ ಅವಶ್ಯಕತೆಯಿದೆ.

2023ರ ಅಖಿಲ ಭಾರತ ಸಹಕಾರ ಸಪ್ತಹದ ಧ್ಯೇಯ" ದಂತೆ ಸಹಕಾರಿ ಸಂಘಗಳು ಪಾರದರ್ಶಕ ವ್ಯಹಾರ ಮಾಡಲು ಡಿಜಟಲೀಕರಣ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಬಲಿಷ್ಠ, ಸಹಕಾರ ಸಂಘ ರಚನೆಯಾಗಿ ಸರಳ ವ್ಯಾಪರ ಪ್ರಕ್ರಿಯೆ, ಸಾರ್ವಜನಿಕ ಸಹಕಾರಿ ಸಹಭಾಗಿತ್ವವನ್ನು ಬಲಪಡಿಸಿಕೊಂಡು, ಎಲ್ಲಾ ವರ್ಗದ ಜನರನ್ನು ಸಹಕಾರಿ ಸದಸ್ಯರನ್ನು ಸೇರಿಸಿಕೊಂಡು ಸಹಕಾರ ಶಿಕ್ಷಣ, ತರಬೇತಿ, ಆರೋಗ್ಯಕ್ಕೆ ಮಹತ್ವ ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನು ಸಾಧನೆ ಮಾಡುವುದೇ ಧ್ಯೇಯದೊಂದಿಗೆ ಸಹಕಾರ ಕ್ಷೇತ್ರ ಬಿನ್ನತೆ ಕ್ಷೇತ್ರದಲ್ಲಿ ಉದಯವಾಗಲಿ.

.....28ನೇ ಪುಟದಿಂದ

**22. ಸಹಕಾರಿ ಶಿಕ್ಷಣ ಮತ್ತು ತರಬೇತಿಯ ಹೊಸ ಯೋಜನೆ :** ಸಹಕಾರಿ ಸಂಘಗಳನ್ನು ಬಲವಾದ ಆರ್ಥಿಕ ಸಂಸ್ಥೆಯನ್ನಾಗಿ ಮಾಡಲು ಸಹಕಾರಿ ಚಳುವಳಿಯನ್ನು ವಿಸ್ತರಿಸಲು ಮತ್ತು ಬಲಪಡಿಸಲು ವೈಕುಂಠ ಮೆಹತಾ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಕೋಆಪರೇಟಿವ್ ಮ್ಯಾನೇಜ್‌ಮೆಂಟ್ , ನ್ಯಾಷನಲ್ ಕೌನ್ಸಿಲ್ ಫಾರ್ ಕೋಆಪರೇಟಿವ ಟ್ರೈನಿಂಗ್ ಸಂಸ್ಥೆಯ ಭೋಧಕರ ಸಾಮರ್ಥ್ಯವನ್ನು ಹೆಚ್ಚಿಸಲು, ಸಹಕಾರಿ ಸಂಘಗಳ ಪ್ರಮುಖ ಕ್ಷೇತ್ರಗಳ ಬಗ್ಗೆ ಗುಣಮಟ್ಟದ ಸಂಶೋಧನೆ ಮತ್ತು ಅಧ್ಯಯನವನ್ನು ಉತ್ತೇಜಿಸಲು ಈ ಯೋಜೆಯ ಅಗತ್ಯವಿದೆ. ಈ ನಿಟ್ಟಿಯನ್ನು ಆರಂಭಿಕ ಪಾಲುದಾರರ ತಜ್ಞರೊಂದಿಗೆ ಸಮಾಲೋಚನೆಗಳನ್ನು ನಡೆಸಲಾಗುತ್ತಿದೆ.

**23. ಸಹಕಾರಿ ಸಂಘಗಳ ಸದಸ್ಯರಿಗೆ ರುಪೇ ಕಿಸಾನ್ ಕ್ರೆಡಿಟ್ ಕಾರ್ಡ್ :** ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳ ವ್ಯಾಪ್ತಿ ಮತ್ತು ಗ್ರಾಮೀಣ ಸಹಕಾರ ಸಂಘಗಳ ಸದಸ್ಯರಿಗೆ ಅಗತ್ಯ ದ್ರವ್ಯತೆ ಒದಗಿಸಲು ಗುಜರಾತ್‌ನ ಪಂಚಮಹಲ್ ಮತ್ತು ಬನಸ್ಕಾಂತ ಜಿಲ್ಲೆಗಳಲ್ಲಿ ಪ್ರಾಯೋಗಿಕ ಯೋಜನೆಯನ್ನು ಪ್ರಾರಂಬಿಸಲಾಗಿದೆ. ಈ ಯೋಜನೆಯಡಿ ಎಲ್ಲಾ ಸಹಕಾರ ಸಂಘಗಳ ಸದಸ್ಯರ ಬ್ಯಾಂಕ್ ಖಾತೆಗಳನ್ನು ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ತೆರೆಯಲಾಗುತ್ತಿದೆ ಮತ್ತು ನಬಾರ್ಡ್ ಬೆಂಬಲದೊಂದಿಗೆ ರುಪೇ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಖಾತೆದಾರರಿಗೆ ವಿತರಿಸಲಾಗುತ್ತಿದೆ.

**24. ನಬಾರ್ಡ್ ಸಹಾಯದಿಂದ ಬ್ಯಾಂಕ್ ಮಿತ್ರ ಸಹಕಾರಿ ಸಂಘಗಳಿಗೆ ಮೈಕ್ರೋ ಎಟಿಎಂಗಳು :** ಹೈನುಗಾರಿಕೆ, ಮೀನುಗಾರಿಕೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಂತಹ ಸಹಕಾರ ಸಂಘಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕ್‌ಗಳ ಮಿತ್ರರನ್ನಾಗಿ ಮಾಡಲಾಗಿದೆ. ವ್ಯಾಪಾರ ಮಾಡುವ ಸುಲಭತೆ, ಪಾರದರ್ಶಕತೆ ಮತ್ತು ಆರ್ಥಿಕ ಸೇರ್ಪಡೆಯನ್ನು ಖಚಿತಪಡಿಸಿಕೊಳ್ಳಲು ಡೋರ್ ಸ್ಟೆಪ್ ಫೈನಾನ್ಷಿಯಲ್ ಸರ್ವೀಸಸ್ ಒದಗಿಸಲು ನಬಾರ್ಡ್‌ನ ಬೆಂಬಲದೊಂದಿಗೆ ಈ ಬ್ಯಾಂಕ್ ಮಿತ್ರ ಸಹಕಾರ ಸಂಘಗಳಿಗೆ ಮೈಕ್ರೋ–ಎಟಿಎಂಗಳನ್ನು ಸಹ ನೀಡಲಾಗುತ್ತಿದೆ.

**25. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ವಿಸ್ತರಣೆ :** ಸಹಕಾರಿ ಕ್ಷೇತ್ರಕ್ಕೆ ಹೆಚ್ಚು ಅಗತ್ಯವಿರುವ ಹಣದ ಹರಿವನ್ನು ಹೆಚ್ಚಿಸಲು ನ್ಯಾಷನಲ್ ಕೋಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ತನ್ನ ದಕ್ಷತೆ ಮತ್ತು ಭೌಗೋಳಿಕ ವಿಸ್ತರತೆಯನ್ನು ಹೆಚ್ಚಿಸುವ ಮೂಲಕ ಮುಂದಿನ ಐದು ವರ್ಷದಲ್ಲಿ ಸಾಲ ವಿತರಣೆಯನ್ನು ವರ್ಷಕ್ಕೆ ಸುಮಾರು 3 ಲಕ್ಷ ಕೋಟಿ ರೂ. ಗೆ ಹೆಚ್ಚಿಸಲು ಉದ್ದೇಶಿಸಿದೆ.

**ಉಪಸಂಹಾರ :**

"ಸಹಕಾರದ ಮೂಲಕ ಸಮೃದ್ಧಿ" ಎಂಬ ಧ್ಯೇಯ ವಾಕ್ಯದೊಂದಿಗೆ ಸ್ಥಾಪಿತವಾಗಿರುವ ಸಹಕಾರ ಸಚಿವಾಲಯವು ಸಹಕಾರಿಗಳನ್ನು ನಿಜವಾದ, ಜನಾಧಾರಿತ ಚಳುವಳಿಯಂತೆ ತಳಮಟ್ಟದವರೆಗೆ ತಲುಪಲು ಸಹಾಯ ಮಾಡುತ್ತದೆ. ದೇಶದಲ್ಲಿ ಸಹಕಾರಿ ಆರ್ಥಿಕ ಲಾಭಗೊಳಿಸುವ ಪ್ರಕ್ರಿಯೆಯನ್ನು ಸಗಮಗೊಳಿಸಲು ಮತ್ತು ಬಹು ರಾಜ್ಯ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯನ್ನು ಶಕ್ತಗೊಳಿಸಲು ಈ ಸಚಿವಾಲಯವು ಕೆಲಸ ಮಾಡುತ್ತದೆ. ಸಮುದಾಯ ಆಧಾರಿತ ಅಭಿವೃದ್ಧಿ ಸಹಭಾಗಿತ್ವಕ್ಕೆ ಕೇಂದ್ರ ಸರ್ಕಾರ ತನ್ನ ಆಳವಾದ ಬದ್ಧತೆಯನ್ನು ಹೊಸ ಸಚಿವಾಲಯ ರಚಿಸುವ ಮೂಲಕ ಸೂಚಿಸಿದೆ. ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ರಚನೆಯಿಂದಾಗಿ ಈ ದೇಶದ ಬೃಹತ್ ಪ್ರಮಾಣದ ಸಹಕಾರ ಚಳುವಳಿಗೆ ಕೇಂದ್ರದಲ್ಲಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸುವ, ಸಹಕಾರ ಕ್ಷೇತ್ರವನ್ನು ಆರೋಗ್ಯಕರವಾಗಿ ಮತ್ತು ಬಲಯುತವಾಗಿ ಬೆಳಸಲು ಒಬ್ಬರು ಸಚಿವರು ಇರುವುದರಿಂದ ಸಹಕಾರ ಕ್ಷೇತ್ರ ಹೆಚ್ಚು ಪರಿಣಾಮಕಾರಿ ಕಾರ್ಯ ನಿರ್ವಹಿಸಲಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 48
Licensed to post without Prepayment License No. PMG BG/WPP-384/2023-2025.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

## 2024 ನೂತನ ವರ್ಷದ ಹಾಗೂ ಸೌಹಾರ್ದ ಸಹಕಾರಿ ದಿನದ ಶುಭಾಶಯಗಳು


ಜಿ. ನಂಜನಗೌಡ
ಅಧ್ಯಕ್ಷರು


ಎ. ಆರ್ ಪ್ರಸನ್ನಕುಮಾರ
ಉಪಾಧ್ಯಕ್ಷರು


ಬಿ. ಹೆಚ್. ಕೃಷ್ಣಾರೆಡ್ಡಿ
ನಿರ್ದೇಶಕರು


ಗುರುನಾಥ ಜ್ಯಾಂತಿಕರ
ನಿರ್ದೇಶಕರು


ಜಗದೀಶ ಕವಟಗಿಮಠ
ನಿರ್ದೇಶಕರು


ಗುರುನಗೌಡ ಪಾಟೀಲ
ನಿರ್ದೇಶಕರು


ಆರ್. ತಿಮ್ಮಯ್ಯಶೆಟ್ಟಿ
ನಿರ್ದೇಶಕರು


ಜಿ. ಎಸ್. ಗುಂಡುರಾವ್
ನಿರ್ದೇಶಕರು


ಮಂಜುನಾಥ ಎಸ್.ಕೆ
ನಿರ್ದೇಶಕರು


ಜಿ. ಶ್ರೀಧರ
ನಿರ್ದೇಶಕರು


ನಾಗರಾಜ ಆರ್ ದೇಶಪಾಂಡೆ
ನಿರ್ದೇಶಕರು


ಕೆ. ಶಿವಲಿಂಗಪ್ಪ
ನಿರ್ದೇಶಕರು


ಭಾರತಿ ಜಿ. ಭಟ್
ನಿರ್ದೇಶಕರು


ಶೈಲಜಾ ತಪಲಿ
ನಿರ್ದೇಶಕರು


ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ
ನಿರ್ದೇಶಕರು


ಎಂ. ಆರ್ ಪ್ರಭುದೇವ್
ನಿರ್ದೇಶಕರು


ಹೆಚ್. ಜೆ ಹನುಮಂತಶೆಟ್ಟಿ
ನಿರ್ದೇಶಕರು


ರಘುರಾಮ ರೆಡ್ಡಿ
ನಿರ್ದೇಶಕರು


ವಿಜಯ್ ಸಿ. ಪಿ
ನಿರ್ದೇಶಕರು


ಮೋಹನದಾಸ ಜೆ. ನಾಯಕ್
ನಿರ್ದೇಶಕರು


ರಾಮನಗೌಡ ಬಿ. ಪಾಟೀಲ
ನಿರ್ದೇಶಕರು


ನಾರಾಯಣ ಬಾಬು ಡಿ. ಎನ್
ವೃತ್ತಿಪರ ನಿರ್ದೇಶಕರು


ಸುಭಾಷ್ ಇಂಡಿ
ವೃತ್ತಿಪರ ನಿರ್ದೇಶಕರು


ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003